

ಹುತಾತ್ಮ ದಿನಾಚರಣೆ

ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 7 | ಫೆಬ್ರವರಿ 8–14, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಬೆಳೆಗಳನ್ನು ಬೆಳೆಯುವವರು Vs ಮೊಳೆಗಳನ್ನು ಬೆಳೆಯುವವರು

ಬಿಡೆನ್ ಮತ್ತು ಮೋದಿ ಕೋವಿಡ್ ಪ್ಯಾಕೇಜ್‌ಗಳು: ಎಷ್ಟೊಂದು ಅಂತರ





ಕೋವಿಡ್ ಕಾಲದ ಬಜೆಟ್

- ಆರೋಗ್ಯ ಬಜೆಟ್‌ನಲ್ಲಿ 137% ಹೆಚ್ಚಳ!?
- ಜನಗಳಿಗಾಗಿಯೂ ಅಲ್ಲ, ದೇಶಕ್ಕಾಗಿಯೂ ಅಲ್ಲ

ನೇಪಾಳದಲ್ಲಿ ಏನಾಗುತ್ತಿದೆ?



ರೈತರ ಪ್ರತಿಭಟನೆಗಳ ಮೇಲೆ ದಿಲ್ಲಿ ಪೋಲೀಸ್‌ನ ಅಮಾನವೀಯ ಮುತ್ತಿಗೆ

ರೈತರನ್ನು ಉಪವಾಸ ಕೆಡವಿ, ಅವರ ಪ್ರತಿಭಟನೆಗಳನ್ನು ಚದುರಿಸುವ ಪ್ರಯತ್ನಗಳನ್ನು ತಕ್ಷಣವೇ ನಿಲ್ಲಿಸುವಂತೆ ದಿಲ್ಲಿ ಪೋಲೀಸ್‌ಗೆ ಕೇಂದ್ರ ಸರಕಾರ ನಿರ್ದೇಶನ ನೀಡಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ



ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಬೇಕೆಂದು ದಿಲ್ಲಿಯ ಗಡಿಗಳಲ್ಲಿ ಒಂದು ಧೀರ ಹೋರಾಟದಲ್ಲಿ ತೊಡಗಿರುವ ರೈತರಿಗೆ ಪಕ್ಕದ ರಾಜ್ಯಗಳಿಂದ ಜನಗಳು ಕಳಿಸಿದ ನೀರು, ಆಹಾರ ಮತ್ತು ಇತರ ಅವಶ್ಯಕ ಸಾಮಗ್ರಿಗಳು' ತಲುಪದಂತೆ ಮಾಡಲು ದಿಲ್ಲಿ ಪೊಲೀಸರು ಕೈಗೊಂಡಿರುವ ಕ್ರಮಗಳನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಇನ್ನೂ ಹೊಲಸು ಸಂಗತಿಯೆಂದರೆ, ದಿಲ್ಲಿ ಸರಕಾರ ತನ್ನ ಅಡಿಯಲ್ಲಿರುವ ದಿಲ್ಲಿ ಜಲಮಂಡಳಿಯ ನೀರಿನ ಟ್ಯಾಂಕರುಗಳಿಂದ ರೈತರಿಗೆ ನೀರು ಪೂರೈಸುವುದನ್ನು ತಡೆಯಲಾಗಿದೆ. ಕೊವಿಡ್ ಮಹಾಸೋಂಕಿನ ಸಮಯದಲ್ಲಿ ಬಹಳ ಮಹತ್ವದ್ದಾಗಿರುವ ಶೌಚಾಲಯ ಮತ್ತಿತರ ನೈರ್ಮಲ್ಯದ ಸೌಕರ್ಯಗಳನ್ನು ದಿಲ್ಲಿ ಸರಕಾರ ಗುರು ತೇಗಬಹಾದ್ದೂರ್ ಸ್ಮಾರಕದಲ್ಲಿ ಒದಗಿಸುತ್ತಿದ್ದು ಅವನ್ನು ಬಲವಂತದಿಂದ ತೆರವು ಮಾಡಿಸಲಾಗಿದೆ. ದಿಲ್ಲಿಯ ಚುನಾಯಿತ ಸರಕಾರವನ್ನು ತನ್ನದೇ ಸೊತ್ತಿನಲ್ಲಿ ತನ್ನ ಕರ್ತವ್ಯಗಳನ್ನು ನಿಭಾಯಿಸದಂತೆ ತಡೆಯುವುದು ಕಾನೂನುಬಾಹಿರ ಕೃತ್ಯ ಎಂದು ಪೊಲಿಟ್‌ಬ್ಯುರೊ ನೆನಪಿಸಿದೆ.

ಪ್ರತಿಭಟಿಸುತ್ತಿರುವ ರೈತರ ನ್ಯಾಯವಾದ ಬೇಡಿಕೆಗಳನ್ನು ಒಪ್ಪಿಕೊಳ್ಳಲು ಕೇಂದ್ರ ಸರಕಾರ ಮೊಂಡುತನದಿಂದ ನಿರಾಕರಿಸುತ್ತಿರುವಾಗಲೇ, ಕೇಂದ್ರ ಗೃಹ ಮಂತ್ರಾಲಯದ ಅಡಿಯಲ್ಲಿರುವ ದಿಲ್ಲಿ ಪೋಲೀಸ್ ರೈತರನ್ನು ಉಪವಾಸ ಕೆಡವಲು, ಆ ಮೂಲಕ ಅವರ ಪ್ರತಿಭಟನೆಗಳನ್ನು ಛಿದ್ರಗೊಳಿಸಲು, ಚದುರಿಸಲು ಇಂತಹ ಅಮಾನವೀಯ ಕ್ರಮಗಳನ್ನು ಪ್ರಯತ್ನಿಸುತ್ತಿದೆ. ಆದರೆ ಕೇಂದ್ರ ಸರಕಾರದ ಇಂತಹ ಅಮಾನವೀಯ ವರ್ತನೆ ಪ್ರತಿಭಟನಾಕಾರರನ್ನು ಹಿಮ್ಮೆಟ್ಟಿಸಲು ಸಾಧ್ಯವಿಲ್ಲ ಎಂದು ರೈತ ಆಂದೋಲನ ಸಾರಿ ಹೇಳಿದೆ. ಹೆಚ್ಚೆಚ್ಚು ರೈತರು ಈ ಹೋರಾಟವನ್ನು ಸೇರಿಕೊಳ್ಳಲು ಬರುತ್ತಿದ್ದು, ಅವರ ಈ ಸಂಕಲ್ಪ ಮತ್ತು ದೃಢನಿರ್ಧಾರ ಇನ್ನಷ್ಟು ಬಲಗೊಂಡಿದೆ.

ಕೇಂದ್ರ ಸರಕಾರ ಇಂತಹ ಕರಾಳ ಅಮಾನವೀಯ ಕ್ರಮಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ. ದಿಲ್ಲಿ ಪೋಲೀಸ್ ನೀರು, ನೈರ್ಮಲ್ಯ ಸೌಕರ್ಯಗಳು ಮತ್ತು ಇತರ ಆವಶ್ಯಕ ಸಾಮಗ್ರಿಗಳ ಪೂರೈಕೆಯನ್ನು ತಡೆಯಲು ಸಾಧ್ಯವಿಲ್ಲ. ಕೇಂದ್ರ ಸರಕಾರ ತಕ್ಷಣವೇ ಈ ಕ್ರಮಗಳನ್ನು ಹಿಂತೆಗೆದುಕೊಳ್ಳಲು ಮತ್ತು ಅಮಾನವೀಯ ಮುತ್ತಿಗೆಯನ್ನು ತೆರವು ಮಾಡಲು ದಿಲ್ಲಿ ಪೊಲೀಸ್‌ಗೆ ನಿರ್ದೇಶನ ನೀಡಬೇಕು ಎಂದು ಪೊಲಿಟ್‌ಬ್ಯುರೊ ಒತ್ತಾಯಿಸಿದೆ.

ಬಿಜೆಪಿ ಸರಕಾರದ ವಿನಾಶಕಾರೀ ಧೋರಣೆಗಳ ವಿರುದ್ಧ ಫೆಬ್ರವರಿ ದ್ವಿತೀಯಾರ್ಧದಲ್ಲಿ ಪ್ರಚಾರಾಂದೋಲನ–ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಫೆಬ್ರವರಿ 2021 ರ ದ್ವಿತೀಯಾರ್ಧದಲ್ಲಿ ಪಕ್ಷದ ಎಲ್ಲಾ ಘಟಕಗಳು ದೇಶಾದ್ಯಂತ ಹದಿನೈದು ದಿನಗಳ ಪ್ರಚಾರಾಂದೋಲನವನ್ನು ನಡೆಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದೆ. ಇದು ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಮೂಲಕ ಭಾರತದ ಸಾಂವಿಧಾನಿಕ ವ್ಯವಸ್ಥೆಯನ್ನು ಮತ್ತು ಆರ್ಥಿಕ ಬುನಾದಿಗಳನ್ನು ನಾಶಪಡಿಸುತ್ತಿರುವುದು, ರಾಷ್ಟ್ರೀಯ ಸ್ವತ್ತುಗಳ ಲೂಟಿ, ದೊಡ್ಡ ಪ್ರಮಾಣದ ಖಾಸಗೀಕರಣ, ಬೆಲೆ ಏರಿಕೆ, ಕಾರ್ಮಿಕ ಕಾನೂನುಗಳ ರದ್ಧತಿ, ನಿರುದ್ಯೋಗದ ನಾಗಾಲೋಟ ಇತ್ಯಾದಿ ವಿಷಯಗಳ ಮೇಲೆ ಮತ್ತು ಈಗ ನಡೆಯುತ್ತಿರುವ ರೈತರ ಹೋರಾಟಗಳಿಗೆ ಸೌಹಾರ್ದವನ್ನು ಬಲಪಡಿಸುವ ಹಾಗೂ ಆರ್‌ಎಸ್‌ಎಸ್ / ಬಿಜೆಪಿಯ ಸುಳ್ಳು ಪ್ರಚಾರವನ್ನು ಬಯಲಿಗೆಳೆಯುವ ವಿಷಯಗಳ ಮೇಲೆ ಇರುತ್ತದೆ ಎಂದು ಅದು ನಿರ್ಧರಿಸಿದೆ.

ಕಾರ್ಮಿಕ ವರ್ಗ, ರೈತಾಪಿಗಳು ಮತ್ತು ನಮ್ಮ ಜನಗಳ ಎಲ್ಲಾ ಇತರ ವಿಭಾಗಗಳ ಹೋರಾಟಗಳು ಮತ್ತು ಸೌಹಾರ್ದ ಕಾರ್ಯಾಚರಣೆಗಳಲ್ಲಿ ಹೆಚ್ಚೆಚ್ಚು ಜನವಿಭಾಗಗಳನ್ನು ಪಕ್ಷ ಸಜ್ಜುಗೊಳಿಸುತ್ತದೆ.

ಜನವರಿ 30–31ರಂದು ಅನ್‌ಲೈನಿನಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆಯ ನಂತರ ನೀಡಿರುವ ಹೇಳಿಕೆಯಲ್ಲಿ ಇದನ್ನು ಚಿಜಣ ತಿಳಿಸಿದೆ. ಹೇಳಿಕೆಯ ಇತರ ಅಂಶಗಳನ್ನು ಈ ಮುಂದೆ ಕೊಡಲಾಗಿದೆ:

ರೈತರ ಹೋರಾಟ

ಪ್ರತಿಗಾಮಿ ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕು ಮತ್ತು ಎಲ್ಲಾ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ(ಎಂ.ಎಸ್.ಪಿ.)ಗಳನ್ನು ಎಲ್ಲ ರೈತರ ಕಾನೂನುಬದ್ಧ ಹಕ್ಕಾಗಿ ಮಾಡುವ ಶಾಸನವನ್ನು ಒತ್ತಾಯಿಸಿ ಮುಂದುವರೆಯುತ್ತಿರುವ ಬೃಹತ್ ರೈತ ಹೋರಾಟವನ್ನು ಕೇಂದ್ರ ಸಮಿತಿ ಶ್ಲಾಘಿಸಿದೆ.

ಈ ಹೋರಾಟಕ್ಕೆ ಕೇಂದ್ರ ಸಮಿತಿ ತನ್ನ ಸಂಪೂರ್ಣ ಸೌಹಾರ್ದ ಮತ್ತು ಬೆಂಬಲವನ್ನು ವ್ಯಕ್ತಪಡಿಸಿದೆ.

ಬೃಹತ್ ಗಣರಾಜ್ಯ ದಿನದ ಟ್ರಾಕ್ಟರ್ ಪರೇಡಿನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಟ್ರಾಕ್ಟರುಗಳಲ್ಲಿ ಅನೇಕ ಲಕ್ಷ ರೈತರು ಭಾಗವಹಿಸಿದ್ದರು, ಅದು ಒಪ್ಪಿದ ಮಾರ್ಗಗಳಲ್ಲಿ ಶಾಂತಿಯುತವಾಗಿ ಚಲಿಸಿತು. ದೇಶದ ಎಲ್ಲಾ ರಾಜ್ಯಗಳಲ್ಲಿ, ಇದೇ ರೀತಿಯ ಪರೇಡ್‌ಗಳು ಮತ್ತು ಇತರ ಸೌಹಾರ್ದ ಕಾರ್ಯಾಚರಣೆಗಳು ದೊಡ್ಡ ಪ್ರಮಾಣದಲ್ಲಿ ನಡೆದವು.

ಗಣರಾಜ್ಯೋತ್ಸವದಂದು ಅಲ್ಲಲ್ಲಿ ಕೆಲವೆಡೆಗಳಲ್ಲಿ ನಡೆದ ಅಹಿತಕರ ಘಟನೆಗಳು ಈ ಕಾನೂನುಗಳನ್ನು ರದ್ದುಗೊಳಿಸುವ ಮುಖ್ಯ ಬೇಡಿಕೆಯಿಂದ ಗಮನವನ್ನು ತಿರುಗಿಸಲು ಸಾಧ್ಯವಿಲ್ಲ. ಈ ಘಟನೆಗಳು, ದಳ್ಳಾಳಿ ಪ್ರಚೋದಕರ ಕೈವಾಡಗಳು, ಇವರಲ್ಲಿ ಕೆಲವರು ಬಿಜೆಪಿಯೊಂದಿಗೆ ಸಂಪರ್ಕ ಇರುವವರು ಎಂದು ಸಾಬೀತಾಗಿದೆ. ಇದನ್ನು ಇಡೀ ಚಳುವಳಿ ಮತ್ತು ದೇಶ ಬಲವಾಗಿ ಖಂಡಿಸಿವೆ.

ದಬ್ಬಾಳಿಕೆ: ಸಿ.ಎ.ಎ. ಇತ್ಯಾದಿಗಳ ವಿರುದ್ಧ ಜನಗಳ ಶಾಂತಿಯುತವಾದ ಬೃಹತ್ ಆಂದೋಲನವನ್ನು ಛಿದ್ರಗೊಳಿಸಲು ಆರ್‌ಎಸ್‌ಎಸ್–ಬಿಜೆಪಿ ಬಳಸಿದ ವಿಧಾನವನ್ನೇ ಅನುಸರಿಸಿ, ದಿಲ್ಲಿಯ ಗಡಿಗಳಲ್ಲಿ ಪ್ರತಿಭಟನೆಯಲ್ಲಿ ಶಾಂತಿಯುತವಾಗಿ ಕುಳಿತಿದ್ದ ರೈತರ ಮೇಲೆ ಹಲ್ಲೆ ನಡೆಸಲು ಸಶಸ್ತ್ರ ಗೂಂಡಾಗಳನ್ನು ದಿಲ್ಲಿ ಪೋಲೀಸರ ರಕ್ಷಣೆಯಲ್ಲಿ ಕಳುಹಿಸಲಾಯಿತು. ಆದರೆ, ಇದು ರೈತರು ಮತ್ತು ಸಾಮಾನ್ಯ ಜನರನ್ನು ಕೆರಳಿಸಿತು, ಅವರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪ್ರತಿಭಟನೆಯಲ್ಲಿ ಕೈಜೋಡಿಸಿ ಈ ಗೂಂಡಾಗಳನ್ನು ಹೊರಹೋಗುವಂತೆ ಮಾಡಿದ್ದಾರೆ.

ಕೇಂದ್ರ ಗೃಹ ಸಚಿವಾಲಯದ ದಿಲ್ಲಿ ಪೋಲೀಸ್‌ನ ಚಾಳಿಯಂತೆ, ಇಂತಹ ಹಿಂಸಾತ್ಮಕ ಹಲ್ಲೆಗಳನ್ನು ನಡೆಸಿದವರನ್ನು ವಿಚಾರಣೆಗೆ ಗುರಿಪಡಿಸದೆ, ಅದರಿಂದ ಸಂತ್ರಸ್ತರಾದವರ ಮೇಲೆಯೇ ಕೇಸುಗಳನ್ನು ಹೇರಲಾಗಿದೆ. ಸರಕಾರದೊಡನೆ ಮಾತುಕತೆಗಳಲ್ಲಿ ತೊಡಗಿರುವ 30 ಕ್ಕೂ ಹೆಚ್ಚು ರೈತ ಮುಖಂಡರ ಮೇಲೆ. ಗಲಭೆ, ಕ್ರಿಮಿನಲ್ ಪಿತೂರಿ, ಕೊಲೆ ಯತ್ನ ಮತ್ತು ದರೋಡೆ ಆರೋಪದ ಮೇಲೆ 25 ಎಫ್.ಐ.ಆರ್.ಗಳನ್ನು ಹೇರಲಾಗಿದೆ. ಕೇಂದ್ರ ಸಮಿತಿಯು ಬಿಜೆಪಿ ಸರ್ಕಾರ ಮತ್ತು ದಿಲ್ಲಿ ಪೊಲೀಸರ ಈ ದಮನಕಾರಿ ಕ್ರಮವನ್ನು ಖಂಡಿಸಿದೆ ಮತ್ತು ಈ ಸುಳ್ಳು ಪ್ರಕರಣಗಳನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿದೆ.

ಪತ್ರಕರ್ತರ ಮೇಲೆ ಗುರಿ: ಬಿಜೆಪಿ ಉತ್ತರ ಪ್ರದೇಶ, ಮಧ್ಯಪ್ರದೇಶ, ಹರಿಯಾಣ, ಕರ್ನಾಟಕದಲ್ಲಿನ ತನ್ನ ರಾಜ್ಯ ಸರ್ಕಾರಗಳ ಮೂಲಕ ಮತ್ತು ಪೊಲೀಸರು ಕೇಂದ್ರ ಗೃಹ ಸಚಿವಾಲಯದ ಅಡಿಯಲ್ಲಿ ಇರುವ ದಿಲ್ಲಿಯಲ್ಲಿ, ರೈತರ ಪ್ರತಿಭಟನೆಗಳಿಗೆ ಸಂಬಂಧಪಟ್ಟ ಘಟನೆಗಳನ್ನು ಸತ್ಯವಾಗಿ ವರದಿ ಮಾಡುವ ಪತ್ರಕರ್ತರ ವಿರುದ್ಧ ದಾಳಿಗಳನ್ನು ತೀವ್ರಗೊಳಿಸಿದೆ. ಪತ್ರಕರ್ತರನ್ನು ಬೆದರಿಸುವ ಮತ್ತು ಭಯ ಹುಟ್ಟಿಸುವ ಇಂತಹ ಪ್ರಯತ್ನಗಳು ಬಿಜೆಪಿ ಆಡಳಿತಗಳಲ್ಲಿ ಹಲವು ಸಂದರ್ಭಗಳಲ್ಲಿ ನಡೆಯುತ್ತ ಬಂದಿವೆ. ಆದರೆ ಜನವರಿ 28 ರಿಂದ, ಭಾರತದ ಪತ್ರಕರ್ತರ ವಿರುದ್ಧ ರಾಜದ್ರೋಹದ ಆರೋಪ ಮತ್ತು ಕೋಮು ಅಸಾಮರಸ್ಯವನ್ನು ಉತ್ತೇಜಿಸುವುದು, ಧಾರ್ಮಿಕ ನಂಬಿಕೆಗಳನ್ನು ಅವಮಾನಿಸುವುದು, ರಾಷ್ಟ್ರೀಯ ಸಮಗ್ರತೆಗೆ ಮಾರಕವಾದ ಪ್ರತಿಪಾದನೆಗಳನ್ನು ಮಾಡುವುದು ಇತ್ಯಾದಿ ಇತರ ಒಂಬತ್ತು ಕಾನೂನು ನಿಬಂಧನೆಗಳ ಅಡಿಯಲ್ಲಿ ಎಫ್.ಐ.ಆರ್. ದಾಖಲಿಸಲಾಗುತ್ತಿದೆ. ಪ್ರತಿಷ್ಠಿತ ಹಿರಿಯ ಪತ್ರಕರ್ತರ ಮೇಲೆ ಸಾಮಾಜಿಕ ಮಾಧ್ಯಮಗಳಲ್ಲಿ ಅವರ ವೈಯಕ್ತಿಕ ಟ್ವೀಟ್‌ಗಳ ಆಧಾರದ ಮೇಲೆ ಇಂತಹ ಆರೋಪಗಳನ್ನು ಹಾಕಲಾಗಿದೆ. ಇದು ದೂಷಣೀಯ, ಇದರಲ್ಲಿ ಮಾಧ್ಯಮಗಳನ್ನು ಮಣಿಸಲು, ಬೆದರಿಸಲು ಮತ್ತು ಕಿರುಕುಳ ನೀಡುವ ಪ್ರಯತ್ನಗಳ ವಾಸನೆ ಬರುತ್ತಿದೆ.

ಕೇಂದ್ರ ಸಮಿತಿಯು ಇಂತಹ ಕ್ರಮಗಳನ್ನು ತೀವ್ರವಾಗಿ ಖಂಡಿಸಿದೆ ಮತ್ತು ಎಫ್.ಐ.ಆರ್.ಗಳನ್ನು ತಕ್ಷಣವೇ ಹಿಂಪಡೆಯಬೇಕೆಂದು ಆಗ್ರಹಿಸಿದೆ.

ಈ ದಬ್ಬಾಳಿಕೆಯನ್ನು ಖಂಡಿಸುತ್ತಲೇ, ಪ್ರಸ್ತುತ ನಡೆಯುತ್ತಿರುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಈ ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕು ಎಂದು ಕೇಂದ್ರ ಸಮಿತಿ ಪುನರುಚ್ಚರಿಸಿದೆ. ತರುವಾಯ ಸರ್ಕಾರವು ಕೃಷಿ ಸುಧಾರಣೆಗಳನ್ನು ರೈತರು ಮತ್ತು ಎಲ್ಲಾ ಭಾಗೀದಾರರೊಂದಿಗೆ ಚರ್ಚಿಸಬೇಕು ಮತ್ತು ಯಾವುದಾದರೂ ಹೊಸ ಪ್ರಸ್ತಾವಗಳಿದ್ದರೆ ರೂಪಿಸಿ ಸಂಸದೀಯ ಸಮಿತಿಗಳ ಸ್ಥಾಪಿತ ರಚನೆಗಳ ಮೂಲಕ ಸಂಸತ್ತಿನ ಪರಿಶೀಲನೆ ಮತ್ತು ಚರ್ಚೆಗಳಿಗೆ ಅವನ್ನು ಮಂಡಿಸಬೇಕು. ಸಂಸತ್ತಿನ ಪ್ರಸಕ್ತ ಬಜೆಟ್ ಅಧಿವೇಶನದಲ್ಲಿ ಈ ಕಾನೂನುಗಳನ್ನು ರದ್ದುಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುವಂತೆ ಕೇಂದ್ರ ಪಕ್ಷದ ಸಂಸದರಿಗೆ ನಿರ್ದೇಶನ ನೀಡಿದೆ.

ಜನರ ಸಂಕಟಗಳು ಹೆಚ್ಚುತ್ತಿವೆ

ನಿರುದ್ಯೋಗದ ನಾಗಾಲೋಟ: ಸಿ.ಎಂ.ಐ.ಇ.ಯ ಒಂದು ಮಿತವಾದ ಅಂದಾಜಿನ ಪ್ರಕಾರ ಸಂಘಟಿತ ವಲಯವೊಂದರಲ್ಲೇ ಸುಮಾರು 150ಲಕ್ಷ ಉದ್ಯೋಗಗಳು ನಷ್ಟಗೊಂಡಿವೆ. ಈ ಪೈಕಿ ಸುಮಾರು 100 ಲಕ್ಷ ಪದವೀಧರರು ಮತ್ತು ಸ್ನಾತಕೋತ್ತರ ಪದವೀಧರರು. ಇದಲ್ಲದೆ ಅನೌಪಚಾರಿಕ ವಲಯದ ನಾಶ ಮತ್ತು ದೊಡ್ಡ ಪ್ರಮಾಣದಲ್ಲಿ ಕೋಟ್ಯಂತರ ಜನರ ಜೀವನೋಪಾಯಗಳ ನಷ್ಟವೂ ಆಗಿದೆ.

ಫೆಬ್ರವರಿ–ಮಾರ್ಚ್ 2022ರಲ್ಲಿ ಪಕ್ಷದ 23ನೇ ಮಹಾಧಿವೇಶನ

–ಜುಲೈ 2021ರಿಂದ ಶಾಖಾ ಸಮ್ಮೇಳನಗಳು

ಪಕ್ಷದ 23ನೇ ಮಹಾಧಿವೇಶನ ಏಪ್ರಿಲ್ 2021ರಲ್ಲಿ ನಡೆಯಬೇಕಾಗಿತ್ತು. ಸಾಂಕ್ರಾಮಿಕ/ಲಾಕ್ ಡೌನ್‌ಗಳು ಮತ್ತು ಕೇರಳ, ಪಶ್ಚಿಮ ಬಂಗಾಳ, ತಮಿಳುನಾಡು ಹಾಗೂ ಅಸ್ಸಾಂ ವಿಧಾನಸಭಾ ಚುನಾವಣೆಗಳಿಂದಾಗಿ ಅದನ್ನು ಮುಂದೂಡಬೇಕಾಗಿ ಬಂದಿದೆ ಎಂದಿರುವ ಕೇಂದ್ರ ಸಮಿತಿ 23ನೇ ಮಹಾಧಿವೇಶನವನ್ನು 2022 ರ ಮೊದಲ ತ್ರೈಮಾಸಿಕದಲ್ಲಿ, ಸಾಧ್ಯವಾದಷ್ಟೂ ಫೆಬ್ರುವರಿ ಅಂತ್ಯದೊಳಗೆ ನಡೆಸಲು ನಿರ್ಧರಿಸಿದೆ. ಇದಕ್ಕೆ ಸಿದ್ಧತೆಗಳು ಮುಂಬರುವ ವಿಧಾನಸಭಾ ಚುನಾವಣೆಗಳ ನಂತರ 2021 ರ ಜುಲೈ ಮೊದಲ ವಾರದಿಂದ ಶಾಖಾ ಸಮ್ಮೇಳನಗಳೊಂದಿಗೆ ಪ್ರಾರಂಭವಾಗುತ್ತವೆ.

ಶಕ್ತಿ ಉಡುಗಿಸುವ ಬೆಲೆ ಏರಿಕೆ: ಆರ್ಥಿಕ ಹಿಂಜರಿತ ಮತ್ತು ನಿರುದ್ಯೋಗದ ನಾಗಾಲೋಟದ ಮಧ್ಯೆ, ಎಲ್ಲಾ ಅಗತ್ಯ ವಸ್ತುಗಳ, ವಿಶೇಷವಾಗಿ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲದ ವಿಪರೀತ ಬೆಲೆ ಏರಿಕೆಯಿಂದ ಜನರ ಸಂಕಟಗಳು ಮೇರೆ ಮೀರುತ್ತಿವೆ. ಇಂಧನ ಬೆಲೆಗಳನ್ನು ವಿವೇಚನೆಯಿಲ್ಲದೆ ನಿಯಮಿತವಾಗಿ ಎಂಬಂತೆ ಏರಿಸಲಾಗುತ್ತಿದೆ. ಭಾರತವು ಜಗತ್ತಿನಲ್ಲೇ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಅತಿ ಹೆಚ್ಚು ದರಗಳಲ್ಲಿ ತೆರಿಗೆ ವಿಧಿಸುವ ದೇಶವಾಗಿದೆ.

ಇದರ ವಿರುದ್ಧ ಪ್ರತಿಭಟನೆಗಳನ್ನು ಸಂಘಟಿಸಬೇಕು ಎಂದು ಎಲ್ಲಾ ಪಕ್ಷದ ಘಟಕಗಳಿಗೆ ಕೇಂದ್ರ ಸಮಿತಿ ಕರೆ ನೀಡುತ್ತದೆ..

ಆರ್ಥಿಕ ಸಮೀಕ್ಷೆ

ಬೃಹದಾಕಾರದ 'ಆರ್ಥಿಕ ಸಮೀಕ್ಷೆ" ಈ ಕಸರತ್ತನ್ನೇ ಅಪ್ರಸ್ತುತಗೊಳಿಸಿ ಬಿಡುತ್ತಿದೆ. ಭಾರತವನ್ನು ಸಾಂಕ್ರಾಮಿಕದಿಂದಾಗಲೀ ಅಥವಾ ಅದರ ವಿನಾಶಕಾರಿ ಆರ್ಥಿಕ ಪರಿಣಾಮಗಳಿಂದಾಗಲೀ ರಕ್ಷಿಸುವಲ್ಲಿ ಸರ್ಕಾರದ ವಿರಾಟ್ ವೈಫಲ್ಯದ ಕಟು ಸಾಕ್ಷ್ಯವನ್ನು ಅಂಕೆ–ಸಂಖ್ಯೆಗಳ ಮಾಯಾಜಾಲದಲ್ಲಿ ಮುಚ್ಚಿ ಹಾಕಲಾಗಿದೆ. ತಮಾಷೆಯೆಂದರೆ, ಈ ವಿನಾಶಕಾರಿ ನಿರ್ವಹಣೆಯನ್ನು ಜೀವಗಳು ಮತ್ತು ಜೀವನೋಪಾಯಗಳು ಎರಡನ್ನೂ ಉಳಿಸಿದ ಧೋರಣೆಗಳ ಮೂಲಕದ 'ದೂರದೃಷ್ಟಿಯ' ಸ್ಪಂದನೆ ಎಂದು ಶ್ಲಾಘಿಸಲಾಗಿದೆ.. ಇದು ಜನರ ಜೀವನೋಪಾಯದ ಮೇಲೆ ಸರ್ಕಾರದ ಧೋರಣೆಗಳ ವಿಧ್ವಂಸಕಾರಿ ಪರಿಣಾಮವನ್ನು ಮರೆಮಾಚುವ

ಪುಟ 12 ನೋಡಿ

ಫೆಬ್ರವರಿ 6 ರಂದು ರೈತರಿಂದ ರಾಜ್ಯಾದ್ಯಂತ ರಾಷ್ಟ್ರೀಯ, ರಾಜ್ಯ ಹೆದ್ದಾರಿಗಳ ರಸ್ತೆ ತಡೆ ಚಳುವಳಿ

ಕೇಂದ್ರ, ರಾಜ್ಯ ಸರ್ಕಾರಗಳ ರೈತ, ಕಾರ್ಮಿಕ ವಿರೋಧಿ ನೀತಿಗಳ ಹಾಗೂ ಕೇಂದ್ರ ಸರಕಾರದ ಕಾರ್ಪೊರೇಟ್ ಕಂಪನಿಗಳ ಪರವಾದ ಬಜೆಟ್ ವಿರುದ್ಧ ಸಂಯುಕ್ತ ಹೋರಾಟ–ಕರ್ನಾಟಕ ಸಂಘಟನೆಗಳ ವತಿಯಿಂದ ಫೆ.6 ರಂದು ದೇಶಾದ್ಯಂತ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳ ರಸ್ತೆ ತಡೆ ಚಳುವಳಿಯನ್ನು ಹಮ್ಮಿಕೊಂಡಿದೆ ಸಂಘಟನೆಯ ರಾಜ್ಯ ಸಂಯೋಜಕ ಜಿ.ಸಿ. ಬಯ್ಯಾರೆಡ್ಡಿ ತಿಳಿಸಿದರು.

ಮಾತನಾಡಿದ ಅವರು, ದಿಲ್ಲಿಯಲ್ಲಿ ಹೋರಾಟ ನಿರತ ರೈತರ ಮೇಲೆ ಕೇಂದ್ರ ಸರ್ಕಾರ ನಡೆಸುತ್ತಿರುವ ದೌರ್ಜನ್ಯ, ದಬ್ಬಾಳಿಕೆಗಳನ್ನು ಖಂಡಿಸಿ ಹಾಗೂ ರೈತ ವಿರೋಧಿ, ಕಾರ್ಪೊರೇಟ್ ಕಂಪನಿಗಳ ಪರವಾದ ಕೇಂದ್ರದ ಬಜೆಟನ್ನು ವಿರೋಧಿಸಿ ಫೆ.6 ಶನಿವಾರ ಮಧ್ಯಾಹ್ನ 12 ರಿಂದ 3.00ಗಂಟೆಯವರೆಗೆ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಹಾದು ಹೋಗುವ ಎಲ್ಲಾ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳನ್ನು ಬಂದ್ ಮಾಡಲು ಸಂಯುಕ್ತ ಹೋರಾಟ–ಕರ್ನಾಟಕ ನಿರ್ಧರಿಸಿದ್ದು ಸಾರ್ವಜನಿಕರು ರೈತರು ಬೆಂಬಲಿಸಬೇಕು ಎಂದು ಮನವಿ ಮಾಡಿದರು

ದೇಶದಲ್ಲಿ ಕೃಷಿ ಬಿಕ್ಕಟ್ಟು, ಕೊರೊನ ರೋಗ, ಲಾಕ್ ಡೌನ್ ಇತ್ಯಾದಿ ಕಾರಣಗಳಿಂದ ದೇಶದ ರೈತರು, ಗ್ರಾಮೀಣಾ ಜನತೆ ತೀರ ಗಂಭೀರವಾದ ಪರಿಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದಾರೆ. ರೈತಾಪಿ ಕೃಷಿಯನ್ನು ಬಲಪಡಿಸುವುದಕ್ಕೆ ಬಜೆಟ್ ನಲ್ಲಿ ಹೆಚ್ಚು ಒತ್ತು ನೀಡಿಲ್ಲ ಕೃಷಿಪರ ಬಜೆಟ್ ಮಂಡನೆ ನಡೆದಿಲ್ಲ ಡಾ.ಎಂ.ಎಸ್.ಸ್ವಾಮಿನಾಥನ್ ವರದಿಯನ್ವಯ ಕನಿಷ್ಠ ಬೆಂಬಲ ಬೆಲೆ ಖಾತರಿ ಮಾಡುವ ಕಾನೂನನ್ನು ಜಾರಿ ಮಾಡಬೇಕು. ಆದರೆ, ಕಾರ್ಪೊರೇಟ್ ಕಂಪನಿಗಳ ಪರವಾದ ಬಜೆಟನ್ನು ಮಂಡಿಸಿದೆ. ಅಂಬಾನಿ, ಅದಾನಿಯಂತಹ ಬಂಡವಾಳಶಾಹಿಗಳ ಆಸ್ತಿಗಳನ್ನು 400 ಪಟ್ಟು ಹೆಚ್ಚಳ ಮಾಡಿಕೊಳ್ಳುವ ನೀತಿಗಳ ಪರವಾದ ಬಜೆಟ್ ಮಂಡನೆ ಮಾಡಲಾಗಿದೆ ಎಂದು ದೂರಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದು 2022 ಕ್ಕೆ 75 ವರ್ಷಗಳಾಗುತ್ತದೆ ಈ ಸಂದರ್ಭದಲ್ಲಿ ರೈತರ ಆದಾಯವನ್ನು ದ್ವಿಗುಣಗೊಳಿಸುವ ಮೋದಿಯವರ ಘೋಷಣೆ ಕೇವಲ ಘೋಷಣೆಯಾಗಿಯೇ ಉಳಿದಿದೆ ಕಳೆದ ಎರಡು ತಿಂಗಳುಗಳಿಂದ ದೆಹಲಿ ಗಡಿಯಲ್ಲಿ, ದೇಶವ್ಯಾಪಿಯ ಅನೇಕ ರೈತರು ಶಾಂತಿಯುತ ಚಳುವಳಿ ನಡೆಸುತ್ತಿದ್ದು, ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯ, ದಬ್ಬಾಳಿಕೆಗಳನ್ನು ಕೂಡಲೇ ನಿಲ್ಲಿಸಬೇಕು. ರೈತರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಗಾಂಧಿನಗರ ನಾರಾಯಣಸ್ವಾಮಿ ಮಾತನಾಡಿ, ವಿದೇಶಗಳ ನಟ, ನಟಿಯರು ರೈತರ ಚಳುವಳಿ ಬಗ್ಗೆ ಸಕಾರಾತ್ಮಕವಾಗಿ ಬೆಂಬಲ ವ್ಯಕ್ತಪಡಿಸಿದ್ದಾರೆ. ದೇಶದ ನಟ, ನಟಿಯರು ಮೋದಿ ಪರ ಎನ್ನುವುದು ತೋರ್ಪಡಿಸುತ್ತಿದ್ದಾರೆ ಈ ಚಾರಿತ್ರಿಕ ರೈತ ಹೋರಾಟದ ಬೇಡಿಕೆಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸಬೇಕಾದ ಕೇಂದ್ರ ಸರ್ಕಾರ, ದೇಶದ್ರೋಹಿ ಹಾಗೂ ಭಯೋತ್ಪಾದಕರೆಂದು ಬಿಂಬಿಸುವ ರೀತಿ ನಡೆದುಕೊಳ್ಳುತ್ತಿದೆ. ಮೂರು ಕೃಷಿ ಸಂಬಂಧಿತ ಕಾನೂನುಗಳನ್ನು ರದ್ದು ಮಾಡಬೇಕು. ವಿದ್ಯುತ್ ಮಸೂದೆ 2020ನ್ನು ವಾಪಸ್ಸು ಪಡೆಯಬೇಕು ಹಾಗೂ ಎಲ್ಲಾ ಕೃಷಿ ಉತ್ಪನ್ನಗಳಿಗೆ ಡಾ.ಎಂ.ಎಸ್.ಸ್ವಾಮಿನಾಥನ್ ವರದಿಯನ್ವಯ ಕನಿಷ್ಠ ಬೆಂಬಲ ಬೆಳೆಯನ್ನು ಖಾತರಿ ಮಾಡುವ ಕಾನೂನನ್ನು ರಚಿಸಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳಾದ ಪಿ.ಆರ್ ಸೂರ್ಯನಾರಾಯಣ, ಟಿ.ಎನ್ ರಾಮೇಗೌಡ, ಹೂವಳ್ಳಿ ನಾಗೇಶ್, ಎನ್. ಎನ್.ಶ್ರೀರಾಮ್, ಹಾರೋಹಳ್ಳಿ ರವಿ, ಮುನಿವೆಂಕಟಪ್ಪ ಮುಂತಾದವರಿದ್ದರು.





ವಿವಿಧ ಶೈಕ್ಷಣಿಕ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಎಸ್‌ಎಫ್‌ಐ ಪ್ರತಿಭಟನೆ

ಎಸ್‌ಎಫ್‌ಐ ಬೆಂಗಳೂರು ಜಿಲ್ಲಾ ಸಮಿತಿ ವತಿಯಿಂದ ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ವಿವಿಧ ಶೈಕ್ಷಣಿಕ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ರಾಜ್ಯದ ವಿದ್ಯಾರ್ಥಿ ಸಮುದಾಯ ಹಲವಾರು ಶೈಕ್ಷಣಿಕ ಸಮಸ್ಯೆಗಳನ್ನು ಎದುರಿಸುತ್ತಿದೆ. ವಿದ್ಯಾರ್ಥಿ ಸಂಘಟನೆಗಳು ರಾಜ್ಯದೆಲ್ಲೆಡೆ ಹಲವು ಶೈಕ್ಷಣಿಕ ಬೇಡಿಕೆಗಳಿಗಾಗಿ ಆರಂಭದಿಂದಲೂ ನಿರಂತರವಾಗಿ ಹೋರಾಟ ಮಾಡುತ್ತಾ ಬಂದಿದ್ದರೂ ಆಳುವ ಸರ್ಕಾರಗಳು ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವ ಕೆಲಸವನ್ನು ಇಲ್ಲಿಯ ವರೆಗೆ ಪೂರ್ಣ ಪ್ರಮಾಣದಲ್ಲಿ ಮಾಡಿಲ್ಲ ಎಂದು ಖಂಡಿಸಿದೆ.

ರಾಜ್ಯದ ಪ್ರತಿಷ್ಠಿತ ಕನ್ನಡ ವಿಶ್ವವಿದ್ಯಾಲಯ, ನೂತನ ರಾಯಚೂರು ವಿಶ್ವವಿದ್ಯಾಲಯ ಸೇರಿದಂತೆ ಯಾವ ವಿಶ್ವ ವಿದ್ಯಾಲಯಗಳ ಅಭಿವೃದ್ಧಿಗೆ ಹಣ ನೀಡಿಲ್ಲ, ಬಸ್ ಪಾಸ್, ಹಾಸ್ಟೆಲ್, ಶಿಕ್ಷಕ – ಉಪನ್ಯಾಸಕರ ನೇಮಕಾತಿ, ವಿದ್ಯಾರ್ಥಿ ವೇತನ, ಸಾರಿಗೆ ವ್ಯವಸ್ಥೆ ಸೇರಿದಂತೆ ಹಲವಾರು ಸಮಸ್ಯೆಗಳನ್ನು ರಾಜ್ಯದ ವಿದ್ಯಾರ್ಥಿ ಸಮುದಾಯ ಅನುಭವಿಸುತ್ತಿದೆ ಇದರ ಬಗ್ಗೆ ರಾಜ್ಯ ಸರ್ಕಾರ ಮತ್ತು ಸಂಬಂಧಿಸಿದ ಇಲಾಖೆಗಳು ಪರಿಹಾರವನ್ನು ಕಂಡುಕೊಳ್ಳಲು ಸೋತಿವೆ ಎಂದರು.

ಆನ್ ಲೈನ್ ತರಗತಿ ನಡೆದಿವೆ ಎನ್ನುವ ಕಾರಣ ನೀಡಿ, ಪ್ರಾಕ್ಟಿಕಲ್ ತರಗತಿಗಳು ಇಲ್ಲದೆಯೂ ಪರೀಕ್ಷೆಗಳನ್ನು ನಡೆಸುವ ಕೆಲಸಕ್ಕೆ ಸರ್ಕಾರ ಮತ್ತು ವಿವಿ ಗಳು ಮುಂದಾಗಿವೆ. ಆನ್ಲೈನ್ ತರಗತಿಗಳಿಂದ ವಂಚಿತರಾದ ವಿದ್ಯಾರ್ಥಿಗಳು ಈಗ ಪರೀಕ್ಷೆ ಗಳನ್ನು ಹೇಗೆ ತಾನೇ ಎದುರಿಸಲು ಹೇಗೆ ಸಾಧ್ಯ ಎಂದು ದೂರಿದರು.

ಜೊತೆಗೆ ವಿದ್ಯಾರ್ಥಿ ವಿರೋಧಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿಯನ್ನು ಕೈಬಿಡಬೇಡು ಹಾಗೂ ಕೇಂದ್ರ ಬಜೆಟ್ ಶಿಕ್ಷಣದ ಖಾಸಗಿಕರಣ ಕೇಂದ್ರೀಕರಣವನ್ನು ತೀವ್ರ ಗೊಳಿಸುವ ಈ ಬಜೆಟ್ ವಿದ್ಯಾರ್ಥಿ ವಿರೋಧಿ ಬಜೆಟ್ ಆಗಿದೆ ಮತ್ತು ರಾಜ್ಯ ಬಜೆಟ್ ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ 30% ಎಆಕ 6% ಅನುದಾನವನ್ನು ನೀಡಬೇಕೆಂದು ಹಾಗೂ ರಾಜ್ಯದ ಎಲ್ಲಾ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸಲು

ಪುಟ 4 ಕ್ಕೆ

ತುರಹಳ್ಳಿ ಅರಣ್ಯ ಒತ್ತುವರಿ ತೆರವುಗೊಳಿಸಿ ಸಂರಕ್ಷಿಸಲು ಸಿಪಿಐ(ಎಂ) ಒತ್ತಾಯ

ಮಹಾನಗರದ ಬಳಿಯಿರುವ ಏಕಮಾತ್ರ ಅರಣ್ಯವು ನಿರಂತರ ಒತ್ತುವರಿಗೆ ಒಳಗಾಗಿ ನಶಿಸುತ್ತಿದೆ. ಒತ್ತುವರಿ ತೆರವುಗೊಳಿಸಿ ತುರಹಳ್ಳಿ ಅರಣ್ಯವನ್ನು ಸಂರಕ್ಷಿಸಲು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಹಲವು ದೈತ್ಯ ಬಿಲ್ಡರ್‌ಗಳು ತುರಹಳ್ಳಿ ಅರಣ್ಯವನ್ನು ನಿರಂತರವಾಗಿ ಅತಿಕ್ರಮಿಸುತ್ತಾ ಬರುತ್ತಿದ್ದಾರೆ. ಪರಿಣಾಮವಾಗಿ ಅರಣ್ಯ ಪ್ರದೇಶ ಕ್ಷೀಣಿಸುತ್ತ ಬರುತ್ತಿದೆ. ಅಂತಹ ಅತಿಕ್ರಮಣವನ್ನು ತೆರವುಗೊಳಿಸುವ ಬದಲು ಇರುವ ಅರಣ್ಯ ಪ್ರದೇಶವನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಟ್ರೀ ಪಾರ್ಕ್ ಸ್ಥಾಪಿಸಲು ಮುಂದಾಗಿರುವುದನ್ನು ಸಿಪಿಐ(ಎಂ) ಖಂಡಿಸಿದೆ.

ಬಿಜೆಪಿ ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುವ ಬೆಂಗಳೂರು ಮಿಷನ್ 2022 ರಲ್ಲಿನ ಹಸಿರು ಬೆಂಗಳೂರು ಉಪಕ್ರಮದ ಭಾಗವಾಗಿ ತುರಹಳ್ಳಿ ಅರಣ್ಯವನ್ನು ಸಂರಕ್ಷಿಸುವ ಘೋಷಣೆ ಮಾಡಿದೆ.ಆದರೆ ಟ್ರೀ ಪಾರ್ಕ್ ಸ್ಥಾಪಿಸಲು ಮುಂದಾಗಿರುವ ಕ್ರಮ ಅದಕ್ಕೆ ವ್ಯತಿರಿಕ್ತವಾಗಿದೆ. ರಾಜ್ಯ ಬಿಜೆಪಿ ಸರ್ಕಾರದ ನಿಜ ಬಣ್ಣ ಇದರಿಂದ ಅನಾವರಣಗೊಳ್ಳುತ್ತಿದೆ.ಬೆಂಗಳೂರು ಮಿಷನ್ 2022 ಕೇವಲ ಪೊಳ್ಳು ಘೋಷಣೆ ಎಂಬುದನ್ನು ಇದು ತೋರುತ್ತದೆ ಎಂದು ಸಿಪಿಐ(ಎಂ) ಖಂಡಿಸಿದೆ.

ಸ್ಥಳೀಯರು ಮತ್ತು ಪರಿಸರವಾದಿಗಳ ಆಕ್ಷೇಪಗಳನ್ನು ಪರಿಗಣಿಸಿ ಟ್ರೀ ಪಾರ್ಕ್ ಸ್ಥಾಪಿಸುವ ಬದಲು ತುರಳ್ಳಿ ಅರಣ್ಯವನ್ನು ರಕ್ಷಿಸಲು ಕ್ರಮ ಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.







ಶಿವಮೊಗ್ಗ–ಕರಾವಳಿ ಪ್ರಾದೇಶಿಕ ಜಾಥಾ

ವರದಿ: **ವಾ.ಉ.**

ರೈತ, ಕಾರ್ಮಿಕ, ಕೃಷಿಕೂಲಿಕಾರ ವರ್ಗ ಸಂಘಟನೆಗಳೊಂದಿಗೆ ಮಹಿಳಾ, ಯುವಜನ, ವಿದ್ಯಾರ್ಥಿ ಸಾಮೂಹಿಕ ಸಂಘಟನೆಗಳು ಕರ್ನಾಟಕ ರಾಜ್ಯದಲ್ಲಿ ಕಳೆದ ಜನವರಿ ತಿಂಗಳ ಅಂತ್ಯದಲ್ಲಿ ಹಮ್ಮಿಕೊಂಡಿದ್ದ 7 ಪ್ರಚಾರ ಜಾಥಾಗಳಲ್ಲಿ ಒಂದು ಶಿವಮೊಗ್ಗ–ಕರಾವಳಿ ಪ್ರಾದೇಶಿಕ ಜಾಥಾ. ಜನವರಿ 24 ರಂದು ಶಿವಮೊಗ್ಗದಲ್ಲಿ ಉದ್ಘಾಟನೆಗೊಂಡು, ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ದಿನ, ಉ.ಕನ್ನಡದಲ್ಲಿ 2 ದಿನ, ಉಡುಪಿ ಜಿಲ್ಲೆಯಲ್ಲಿ 2 ದಿನ ಸಾಗಿ ಜನವರಿ 29 ರಂದು ದ.ಕ.ಜಿಲ್ಲೆಯ ತೊಕ್ಕೊಟ್ಟಿನಲ್ಲಿ ಸಮಾರೋಪಗೊಂಡಿತು. ರೈತರು, ಕಾರ್ಮಿಕರ ಹಕ್ಕುಗಳ ಉಳಿವಿಗಾಗಿ ಕರೆಕೊಟ್ಟ ಈ ಜಾಥಾಕ್ಕೆ ಎಲ್ಲಾ 4 ಜಿಲ್ಲೆಗಳಲ್ಲಿಯೂ ಉತ್ತಮ ಸ್ಪಂದನ ದೊರಕಿತು.

ಶಿವಮೊಗ್ಗ, ಭದ್ರಾವತಿ, ಸಿದ್ಧಾಪುರ, ದಾಂಡೇಲಿ, ಅಂಕೋಲ, ಹೊನ್ನಾವರ, ಭಟ್ಕಳಗ 3 ದಿನ ಸಾಗಿ, ಜನವರಿ 27 ರಂದು ಉಡುಪಿ ಜಿಲ್ಲೆಗೆ ತಲುಪಿತು. ಉಡುಪಿ ಜಿಲ್ಲೆಯ ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿಗಳಲ್ಲಿ ಮುಂದುವರಿದು ಕೊನೆಯ ದಿನ ಜನವರಿ 29 ರಂದು ದ.ಕ.ಜಿಲ್ಲೆಯ ಮೂಡಬಿದ್ರಿ ಬಳಿಕ ತೊಕ್ಕೊಟ್ಟು ತಲುಪಿತು. ಪ್ರಾಂತ ಕೃಷಿಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಕೋಣಿ ಜಾಥಾದ ಪ್ರಧಾನ ಸಂಚಾಲಕರಾಗಿದ್ದರು. ಆಯಾ ಜಿಲ್ಲೆಗಳ ರೈತ, ಕಾರ್ಮಿಕ ಮುಖಂಡರು ತಮ್ಮ ಜಿಲ್ಲೆಯಲ್ಲಿ ಜಾಥಾ ಸಾಗಲು ನೇತೃತ್ವ ವಹಿಸಿದ್ದರು. ಸಿಐಟಿಯು ರಾಜ್ಯ ಸಮಿತಿ ಮುಖಂಡರಾಗಿರುವ ಉಡುಪಿ ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ ಹಾಗೂ ಆದಿವಾಸಿ ಹಕ್ಕುಗಳ ಉಡುಪಿ ಜಿಲ್ಲಾ ಮುಖಂಡರಾದ ಶ್ರೀಧರ ನಾಡ ಜಾಥಾ ನಿರ್ವಹಣೆಯಲ್ಲಿ ಪ್ರಧಾನ ಪಾತ್ರ ವಹಿಸಿದ್ದರು.

ತೊಕ್ಕೊಟ್ಟು ಬಸ್ ನಿಲ್ದಾಣದಲ್ಲಿ ನಡೆದ ಸಮಾರೋಪ ಸಮಾರಂಭ ವಿಶಿಷ್ಟವಾಗಿತ್ತು. ಮೂಡಬಿದ್ರಿಯಿಂದ ಮಂಗಳೂರಿಗೆ ಜಾಥಾ ಬರುವ ದಾರಿಯಲ್ಲಿಯೇ ಮಂಗಳೂರಿನ ಹೊರವಲಯದಲ್ಲಿ ವಾಮಂಜೂರು, ಪಂಪ್‌ವೆಲ್, ಜಪ್ಪಿನಮೊಗರುಗಳಲ್ಲಿ ಡಿವೈಎಫ್‌ಐ ಕಾರ್ಯಕರ್ತರು ಜಾಥಾಕ್ಕೆ ಭರ್ಜರಿ ಸ್ವಾಗತ ನೀಡಿ 50ಕ್ಕೂ ಮೀರಿದ ಬೈಕುಗಳ ರ್‍ಯಾಲಿ ನಡೆಸಿ ಜಾಥಾವನ್ನು ಕರೆದೊಯ್ದರು. ಜಪ್ಪಿನಮೊಗರಿನಲ್ಲಿ ಬೀಡಿ ಕಾರ್ಮಿಕ ಮಹಿಳೆಯರ ದೊಡ್ಡ ದಂಡೇ ಜಾಥಾವನ್ನು ಸ್ವಾಗತಿಸಿತು. ತೊಕ್ಕೋಟಿನ ಸಮಾರೋಪ ಸಮಾರಂಭದಲ್ಲಿ 300ಕ್ಕೂ ಮೀರಿ ಜನ ಭಾಗವಹಿಸಿದ್ದರು. ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಜಾಥಾ ನಾಯಕರಾದ ವೆಂಕಟೇಶ್ ಕೋಣಿ, ಉಡುಪಿ ಬಾಲಕೃಷ್ಣ ಶೆಟ್ಟಿ ಹಾಗೂ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು. ಸಿಐಟಿಯು ದ.ಕ.ಜಿಲ್ಲಾ ಉಪಾಧ್ಯಕ್ಷೆ ಪದ್ಮಾವತಿ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಈ ಸಮಾರಂಭದಲ್ಲಿ ಸಿಐಟಿಯು ದ.ಕ.ಜಿಲ್ಲಾ ಮುಖಂಡರಾದ ವಸಂತ ಆಚಾರಿ, ಜೆ.ಬಾಲಕೃಷ್ಣ ಶೆಟ್ಟಿ, ಜಯಂತ ನಾಯಕ್, ಪ್ರಾಂತ ರೈತ ಸಂಘದ ಮುಖಂಡರಾದ ಯಾದವ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಈ ಜಾಥಾದಲ್ಲಿ ದೇಶದ ಹಲವು ಸಮಸ್ಯೆಗಳನ್ನು ಪ್ರಸ್ತಾಪಿಸಿದ್ದರೂ, ಕೇಂದ್ರ ಸರಕಾರ ಜಾರಿ ಮಾಡಿದ 3 ಕೃಷಿ ಕಾಯ್ದೆಗಳು ಇಡೀ ರೈತ ವಿಭಾಗಕ್ಕೆ ದೇಶದ ಆಹಾರ ಭದ್ರತೆಗೆ ಅಪಾಯಕಾರಿಯಾಗಿವೆ ಎಂಬ ಅಂಶದ ಬಗ್ಗೆ ಹೆಚ್ಚು ಒತ್ತು ಕೊಟ್ಟು ಜಾಥಾದ ಭಾಷಣಕಾರರು ಮಾತನಾಡಿದರು.

ವಿವಿಧ ಶೈಕ್ಷಣಿಕ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಎಸ್‌ಎಫ್‌ಐ ಪ್ರತಿಭಟನೆ............ ಪುಟ 3 ರಿಂದ

ಸರ್ಕಾರ ಮುಂದಾಗಬೇಕೆಂದು ಒತ್ತಾಯಿಸಿ ಪೋಸ್ಟರ್ ಪ್ರದರ್ಶನದ ಮೂಲಕ ಪ್ರತಿಭಟನೆಯನ್ನು ಮಾಡಿದೆ.

ಈ ಪ್ರತಿಭಟನೆಯನ್ನು ಉದ್ದೇಶಿಸಿ ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ಅಮರೇಶ ಕಡಗದ, ಕಾರ್ಯದರ್ಶಿ ವಾಸುದೇವ ರೆಡ್ಡಿ, ರಾಜ್ಯ ಉಪಾಧ್ಯಕ್ಷರಾದ ಶಿವಕುಮಾರ ಮ್ಯಾಗಳಮನಿ ಮಾತನಾಡಿದರು.

ಈ ಸಂಧರ್ಭದಲ್ಲಿ ರಾಜ್ಯ ಜಂಟಿ ಕಾರ್ಯದರ್ಶಿ ಭೀಮನಗೌಡ ಸುಂಕೇಶ್ವರಾಳ, ಗಾಯಿತ್ರಿ, ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಅಂಜಿ, ಜಿಲ್ಲಾ ಕಾರ್ಯದರ್ಶಿ ದಿಲೀಪ್, ಜಿಲ್ಲಾ ಉಪಾಧ್ಯಕ್ಷರಾದ ಪ್ರಜ್ವಲ್ ಪ್ರಕಾಶ್, ಸಾಗರ್ ಕೂಡಗಿ, ಮುಖಂಡರಾದ ಮಾದೇಶ, ಯಶಸ್, ಐಶ್ವರ್ಯ ಮುಂತಾದವರಿದ್ದರು.

ಶಿಕ್ಷಣದ ಖಾಸಗೀಕರಣ, ಕೇಂದ್ರೀಕರಣ ತೀವ್ರಗೊಳಿಸುವ ಕೇಂದ್ರದ ಬಜೆಟ್: ಎಸ್‌ಎಫ್‌ಐ ವಿರೋಧ

2018ರ ಹಣಕಾಸು ವರ್ಷದಲ್ಲಿ ಶಿಕ್ಷಣ, ಆರೋಗ್ಯ ಒಳಗೊಂಡಂತೆ 42 ಸೆಸ್ ಗಳನ್ನು ಜಡಿದ ಮೋದಿ ಸರಕಾರ ಆ ಮೂಲಕ 2.5 ಲಕ್ಷ ಕೋಟಿಯನ್ನು ಸಂಗ್ರಹ ಮಾಡಿತ್ತು. ಆದರೆ ಆ ಮೊತ್ತವನ್ನು ಮರಳಿ ಸಂಬಂದಪಟ್ಟ ಇಲಾಖೆಗಳ ಅಭಿವೃದ್ದಿಗೆ ವೆಚ್ಚ ಮಾಡದೆ ಕೇಂದ್ರ ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ಅನ್ಯಾಯ ಮಾಡಿದೆ ಎಂದು ಭಾರತ ವಿದ್ಯಾರ್ಥಿ ಫೆಡರೇಶನ್ ಎಸ್‌ಎಫ್‌ಐ ಕರ್ನಾಟಕ ರಾಜ್ಯ ಸಮಿತಿಯು ಆರೋಪಿಸಿದೆ.

'ಯುಜಿಸಿ' ರದ್ದುಗೊಳಿಸಿ 'ಉನ್ನತ ಶಿಕ್ಷಣ ಆಯೋಗ' (HEC) ರಚಿಸಲು ಈ ವರ್ಷ ಚಾಲನೆ. ಶಿಕ್ಷಣದ ಕೇಂದ್ರೀಕರಣಕ್ಕೂ ಚಾಲನೆ. ಇನ್ನು ವಿಶ್ವ ವಿದ್ಯಾಲಯಗಳ ಧನ ಸಹಾಯ ಮತ್ತು ಅನುದಾನವು ನೇರವಾಗಿ ಕೇಂದ್ರ ಶಿಕ್ಷಣ ಇಲಾಖೆಯ ಸುಪರ್ದಿಗೆ ಹೋಗುತ್ತದೆ. ಅಲ್ಲಿಗೆ ಕತೆ ಮುಗೀತು ಎಂದರು.

ಮುಂದಿನ 6 ವರ್ಷಗಳಲ್ಲಿ ದಲಿತ ಸಮುದಾಯದ ವಿದ್ಯಾರ್ಥಿಗಳಿಗಾಗಿ 35,219 ಕೋಟಿ ಹಣ ವೆಚ್ಚ ಮಾಡಲಾಗುವುದು ಎಂದು ಬಜೆಟ್ ಘೋಷಣೆ ಮಾಡಿದ್ದಾರೆ. ಇದು ಎಂತಹ ವಂಚನೆ, ಮೋಸವೆಂದರೆ, ಮೊದಲಿಗೆ ಇದು 1944ರಿಂದ ಜಾರಿಯಲ್ಲಿರುವ ಪ. ಜಾತಿ ವಿದ್ಯಾರ್ಥಿಗಳ ಸ್ಕಾಲರ್ಶಿಪ್ ಯೋಜನೆ. ಇದರಲ್ಲಿ ಹೊಸದೇನೂ ಇಲ್ಲ ದೇಶದಾದ್ಯಂತ ಸುಮಾರು 57 ಲಕ್ಷ ಪ. ಜಾತಿ ವಿದ್ಯಾರ್ಥಿಗಳಿದ್ದಾರೆ ಎಂದು ಅಂದಾಜಿಸಿದರೆ ಒಬ್ಬ ವಿದ್ಯಾರ್ಥಿಗೆ ಪ್ರತಿ ವರ್ಷ 10,000 ರೂ. ಪ್ರತಿ ತಿಂಗಳು 858 ರೂ. ದೊರಕುತ್ತದೆ. ಈ ಕೇವಲ ಹಣದಿಂದ ಆ ವಿದ್ಯಾರ್ಥಿಗೆ ಯಾವ ಆರ್ಥಿಕ ಅನುಕೂಲವೂ ದೊರಕುವುದಿಲ್ಲ ಮತ್ತು ಈ ಹಣವನ್ನು ಕೇಂದ್ರ ಮತ್ತು ರಾಜ್ಯಗಳು 60:40 ಅನುಪಾತದಲ್ಲಿ ಕೊಡಬೇಕು. ರಾಜ್ಯ ಎಂದಿಗೂ ಕೊಡುವುದಿಲ್ಲ, ಹಾಗಾಗಿ ಕೇಂದ್ರವೂ ಕೊಡುವುದಿಲ್ಲ.

ಇದು ಬಡ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ಶಿಕ್ಷಣದಿಂದ ವಂಚನೆ ಮಾಡುವ ಶಿಕ್ಷಣ ವಿರೋಧಿ ಬಜೆಟ್ ಆಗಿದೆ.

ದೇಶದ ಸಮಗ್ರ ಶಿಕ್ಷಣ ಅಭಿವೃದ್ಧಿಗಾಗಿ ಕೇಂದ್ರ ಬಜೆಟ್ ನಲ್ಲಿ ಕನಿಷ್ಠ 10% ಮೀಸಲಿಡಬೇಕು ಎಂಬ ದಶಕಗಳ ಬೇಡಿಕೆಗೆ ಕೇಂದ್ರ ಸರ್ಕಾರ ಆದ್ಯತೆ ನೀಡದಿರುವುದು ಅನಿರೀಕ್ಷಿತವೇನಲ್ಲ.

ದುಡ್ಡಿದ್ದವರಿಗೆ ಶಿಕ್ಷಣವನ್ನು ಮಾರಾಟ ಮಾಡುವ ಶಿಕ್ಷಣದ ಖಾಸಗೀಕರಣ ಕೇಂದ್ರೀಕರಣ ತೀವ್ರಗೊಳಿಸುವ ಉದ್ದೇಶಗಳು ಎದ್ದು ಕಾಣುತ್ತಿವೆ ಎಂದು ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ಅಮರೇಶ ಕಡಗದ, ಕಾರ್ಯದರ್ಶಿ ವಾಸುದೇವರೆಡ್ಡಿ. ಕೆ ಆರೋಪಿಸಿದಾರೆ, ರಾಜ್ಯ ಉಪಾಧ್ಯಕ್ಷರಾದ ಶಿವಕುಮಾರ ಮ್ಯಾಗಳಮನಿ, ದಿಲೀಪ್, ಗಾಯಿತ್ರಿ ಹಾಗೂ ಜಂಟಿ ಕಾರ್ಯದರ್ಶಿ ಭೀಮನಗೌಡ ಸುಂಕೇಶ್ವರಾಳ ಇದ್ದರು. ■



ಉಡುಪಿ ಜಿಲ್ಲಾ ಮೀನುಗಾರರ ಮತ್ತು ಮೀನು ಕಾರ್ಮಿಕರ ಸಮಾವೇಶ

ಕೇಂದ್ರ ಸರಕಾರದ ಇತರ ಇಲಾಖೆಗಳಿಗಿಂತ ಮೀನುಗಾರಿಕಾ ಇಲಾಖೆಗೆ ನೀಡುವ ಅನುದಾನಗಳು ತೀರಾ ಕಡಿಮೆ. ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡೂ ಮೀನುಗಾರಿಕೆಗೆ ನೀಡುವ ಆದ್ಯತೆಗಳು ಕಡಿಮೆ. ಮೀನುಗಾರರು ವಸತಿ ಸೌಲಭ್ಯವನ್ನು ಪಡೆಯುತ್ತಿಲ್ಲ. ಸಿಆರ್‌ಜೆಡ್ ಸಮಸ್ಯೆಯಿಂದಲೂ ಮೀನುಗಾರರು ಸಂಕಷ್ಟಕ್ಕೆ ಒಳಗಾಗಿದ್ದಾರೆ ಎಂಬುದಾಗಿ ಉಡುಪಿ ಜಿಲ್ಲಾ ಮೀನುಗಾರ ಮತ್ತು ಮೀನು ಕಾರ್ಮಿಕರ ಸಂಘದ ಅಧ್ಯಕ್ಷರಾದ ಕೆ.ಶಂಕರ್ ಟೀಕಿಸಿದರು.

ಅವರು ಫೆಬ್ರವರಿ 1 ರಂದು ಉಡುಪಿಯಲ್ಲಿ ನಡೆದ ಜಿಲ್ಲಾ ಮೀನುಗಾರರ ಮತ್ತು ಮೀನು ಕಾರ್ಮಿಕರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಮೀನುಗಾರರಿಗೆ ಎಲ್ಲಾ ರೀತಿಯ ಭದ್ರತೆಗಾಗಿ ಸರಕಾರ ಕಲ್ಯಾಣ ಮಂಡಳಿಯನ್ನು ರಚಿಸಬೇಕೆಂದು ಅವರು ಆಗ್ರಹಿಸಿದರು.

ಸಮಾವೇಶದ ಅತಿಥಿಯಾಗಿ ಮಾತನಾಡಿದ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಅವರು, ಇಂದು ಮತ್ಸ್ಯಕ್ಷಾಮ ಮತ್ತು ಡೀಸೆಲ್ ಬೆಲೆ ಏರಿಕೆಯಿಂದ ಶೇ.80 ರಷ್ಟು ಬೋಟುಗಳು ಮೀನುಗಾರಿಕೆಗೆ ಹೋಗುತ್ತಿಲ್ಲ. ಕೇಂದ್ರ ಸರಕಾರ ಸಿಆರ್‌ಜೆಡ್ ನಿಯಮಗಳಿಗೆ ತಿದ್ದುಪಡಿ ತಂದಿರುವುದು ಕೂಡಾ ಪ್ರವಾಸೋದ್ಯಮ ಹೂಡಿಕೆದಾರರ ಲಾಭಕ್ಕಾಗಿಯೇ ಹೊರತು ಮೀನುಗಾರರ ಹಿತದೃಷ್ಟಿಯಿಂದಲ್ಲ ಎಂಬುದಾಗಿ ತಿಳಿಸಿದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಸಂಘದ ಜಿಲ್ಲಾ ಕಾರ್ಯದರ್ಶಿ ಕವಿರಾಜ್, ಉಡುಪಿ ತಾಲೂಕು ಕಾರ್ಯದರ್ಶಿ ಯೋಗೀಶ್ ಪೂಜಾರಿ, ಬೈಂದೂರು ತಾಲೂಕು ಅಧ್ಯಕ್ಷ ರಾಮ ಉಪ್ಪುಂದ ಉಪಸ್ಥಿತರಿದ್ದರು.

ದೇಶಭಕ್ತನನ್ನು ಕೊಂದವರು ದೇಶಭಕ್ತಿಯ ಬಗ್ಗೆ ಮಾತನಾಡುತ್ತಿದ್ದಾರೆ

– ವಿಪಕ್ಷ ನಾಯಕ ಸಿದ್ಧರಾಮಯ್ಯ ಆರೋಪ

ಮಹಾತ್ಮಾ ಗಾಂಧಿಯವರನ್ನು ಹತ್ಯೆಗೈದ ಕೊಲೆಗಡುಕನನ್ನೇ ಆರಾಧಿಸುವ ದೇಶದ್ರೋಹಿಗಳು ಹೆಚ್ಚಾಗುತ್ತಿದ್ದಾರೆ. ದೇಶಭಕ್ತ ಗಾಂಧಿಯನ್ನು ಕೊಂದವರು ದೇಶಭಕ್ತಿಯ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಫ್ರೀಡಂಪಾರ್ಕನಲ್ಲಿ ಸಂಯುಕ್ತ ಕರ್ನಾಟಕ ಹೋರಾಟ ಸಮಿತಿ ಹಮ್ಮಿಕೊಂಡಿದ್ದ ಶಾಂತಿಯುತ ಸಂಘರ್ಷ ಸಂಕಲ್ಪ ದಿನದ ಸಾಮೂಹಿಕ ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿ ಮಾತನಾಡುತ್ತಾ, ಗಾಂಧೀಜಿ ಯಾರನ್ನೂ ಶತ್ರುಗಳು ಎಂದು ತಿಳಿದು ಅವರ ವಿರುದ್ಧ ಹೋರಾಡಿದರೋ, ಅವರು ಗಾಂಧೀಜಿಯನ್ನು ಹತ್ಯೆ ಮಾಡಲಿಲ್ಲ. ದೇಶಪ್ರೇಮದ ಪಾಠ ಹೇಳುವ ಸಂಘಟನೆಯ ನಾಯಕ ನಾಥುರಾಮ್ ಗೋಡ್ಸೆ ಎಂಬ ದೇಶದ್ರೋಹಿ ಗಾಂಧೀಜಿಯವರನ್ನು ಹತ್ಯೆ ಮಾಡಿದ್ದು ಎಂಬುದನ್ನು ನಾವು ಮರೆಯಬಾರದು ಎಂದು ಸಿದ್ದರಾಮಯ್ಯ ನುಡಿದರು.

ಗಾಂಧೀಜಿ ಜೀವನ ಮತ್ತು ಸಾಧನೆ ಹೇಗೆ ನಮ್ಮ ಆದರ್ಶಪ್ರಾಯವೋ, ಅದೇ ರೀತಿ ಅವರ ಸಾವು ಕೂಡಾ ನಮಗೆ ಪಾಠವಾಗಿದೆ. ಗಾಂಧೀಜಿ ಕೇವಲ ಸ್ವಾತಂತ್ರ್ಯಕ್ಕಾಗಿ, ಅಸ್ಪೃಶ್ಯತೆಯ ನಿವಾರಣೆಗಾಗಿ, ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿ ಮಾತ್ರ ಹೋರಾಡಲಿಲ್ಲ. ಅವರು ಬಹುಮುಖ್ಯವಾದ ಕೋಮು ಸಾಮರಸ್ಯಕ್ಕಾಗಿ ಕೂಡಾ ತನ್ನ ಕೊನೆ ಉಸಿರಿರುವ ತನಕ ಹೋರಾಡಿದರು. ಈ ತನ್ನ ಹೋರಾಟಕ್ಕಾಗಿಯೇ ತನ್ನ ಪ್ರಾಣವನ್ನು ಕಳೆದುಕೊಂಡರು. ಆದರೆ ಗಾಂಧೀಜಿ ಅವರು ಯಾವ ಉದ್ದೇಶಕ್ಕಾಗಿ ಹೋರಾಡಿದರೋ, ಆ ಕೋಮುಸೌಹಾರ್ದತೆಯ ಸ್ಥಾಪನೆಯ ಕಾರ್ಯ ಇನ್ನೂ ಅಪೂರ್ಣವಾಗಿಯೇ ಉಳಿದಿದೆ. ಅದನ್ನು ಪೂರ್ಣಗೊಳಿಸುವ ಜವಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಸಿದ್ಧರಾಮಯ್ಯ ಕರೆ ನೀಡಿದರು.

ರೈತ ನಾಯಕ ಬಡಗಲಪುರ ನಾಗೇಂದ್ರ ಮಾತನಾಡಿ ಕೃಷಿಕಾಯ್ದೆ ರದ್ದಾಗಬೇಕು ಎಂದು ಶಾಂತಿಯುತವಾಗಿ ಹೋರಾಟ ಮಾಡುತ್ತಿದ್ದ ರೈತರ ಮೇಲೆ ಪೊಲೀಸರು ದಾಳಿ ನಡೆಸಿದ್ದಾರೆ, ಹಿಂಸೆ ನಡೆಸಿದ್ದಾರೆ. ಅದನ್ನು ದಿಕ್ಕುತಪ್ಪಿಸುವುದಕ್ಕಾಗಿ ಸಿಖ್ ಧ್ವಜ್ ಹಾರಿಸಿ ಮಾಧ್ಯಮದ ಮೂಲಕ ಹೋರಾಟದ ಶಾಂತಿಯನ್ನು ಕದಡುವ ಪ್ರಯತ್ನ ಮಾಡಿದರು. ನಾವು ಇದ್ಯಾವುದಕ್ಕೂ ಜಗ್ಗುವವರಲ್ಲ, ನಮ್ಮ ಹೋರಾಟ ಇನ್ನಷ್ಟು ಬಲಗೊಳ್ಳಲಿದೆ. ಕೃಷಿಕಾಯ್ದೆ ರದ್ದಗುವವರೆಗೂ ಹೋರಾಟ ನಿಲ್ಲದು ಎಂದರು.

ಚಿಂತಕರಾದ ಜಿ.ಎನ್. ನಾಗರಾಜ ಮಾತನಾಡುತ್ತಾ, ಗಾಂಧೀಜಿಯವರು ಹಲವು ಆಯಾಮಗಳ ವ್ಯಕ್ತಿತ್ವವಾಗಿದ್ದರು. ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟ ಆರಂಭವಾಗಿದ್ದೆ ರೈತ ಹೋರಾಟದಿಂದ ಎಂದು ಗಾಂಧೀಯವರ ಚಂಪಾರಣ್ಯ ಹೋರಾಟವನ್ನು ಸ್ಮರಿಸಿದರು. ಈ ಕಾರ್ಯಕ್ರಮದಲ್ಲಿ ಚಿಂತಕರಾದ ವಿಜಯಮ್ಮ, ಮಾಜಿ ಸಚಿವ ಆಂಜನೇಯ,ರೈತ ಮುಖಂಡರಾದ ಕೋಡಿಹಳ್ಳಿ ಚಂದ್ರಶೇಖರ್, ಚಾಮರಸ್ ಮಾಲೀಪಾಟೀಲ್, ಯಶವಂತ್ ಟಿ, ಗೋಪಾಲ್, ದಲಿತ ಮುಖಂಡರಾದ ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರೆಗೋಡು, ನಿತ್ಯಾನಂದ ಸ್ವಾಮಿ ಕಾರ್ಮಿಕ ಮುಖಂಡರಾದ ಮೀನಾಕ್ಷಿ ಸುಂದರಂ, ಕೆ.ಎನ್.ಉಮೇಶ್, ಡಾ. ಕೆ.ಪ್ರಕಾಶ್, ಕೆ.ವಿ.ಭಟ್, ನೂರ್ ಶ್ರೀಧರ್, ಸಿರಿಮನೆ ನಾಗರಾಜ್, ಡಾ. ವಾಸು, ಕೆ.ಎಸ್. ವಿಮಲಾ, ಡಾ. ಬಿ.ಆರ್. ಮಂಜುನಾಥ್, ಗೌರಮ್ಮ ಸೇರಿದಂತೆ ಅನೇಕರಿದ್ದರು.

ವಿವಿಧ ಜಿಲ್ಲೆಗಳಲ್ಲಿ ಉಪವಾಸ ಸತ್ಯಾಗ್ರಹ : ಮೈಸೂರಿನಲ್ಲಿ ನಡೆದ ಉಪವಾಸ ಸತ್ಯಾಗ್ರಹದಲ್ಲಿ ಹಿರಿಯ ಸಾಹಿತಿ ದೇವನೂರು ಮಹದೇವನವರು ಭಾಗವಹಿಸಿದ್ದರು. ಹಾವೇರಿಯಲ್ಲೂ ರೈತರು ಉಪವಾಸ ಸತ್ಯಾಗ್ರಹಕ್ಕೆ ಉತ್ತಮ ಬೆಂಬಲ ವ್ಯಕ್ತವಾಗದೆ. ಕೋಲಾರದಲ್ಲಿ ರೈತರು, ಕಾರ್ಮಿಕರು, ದಲಿತ ಸಂಘಟನೆಗಳ ನೇತೃತ್ವದಲ್ಲಿ ಉಪವಾಸ ಸತ್ಯಾಗ್ರಹ ನಡೆಯಿತು. ಬೆಳಗಾವಿಯಲ್ಲೂ ರೈತರ ಉಪವಾಸ ಸತ್ಯಾಗ್ರಹಕ್ಕೆ ವ್ಯಾಪಕ ಬೆಂಬಲ ದೊರತಿದೆ. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಜನಪರ ಸಂಘಟನೆಗಳು ಭಾಗಿಯಾಗಿದ್ದವು.

ಕೊಪ್ಪಳದಲ್ಲೂ ರೈತರ ಉಪವಾಸ ಸತ್ಯಾಗ್ರಹಕ್ಕೆ ಉತ್ತಮ ಬೆಂಬಲವ್ಯಕ್ತವಾಗಿದೆ. ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಕೂಲಿಕಾರ ಸಂಘಟನೆಗಳು ಭಾಗವಹಿಸಿದ್ದವು. ಸಿದ್ದಾಪುರದಲ್ಲಿ ನಡೆದ ರೈತರ ಉಪವಾಸ ಸತ್ಯಾಗ್ರಹಕ್ಕೆ ಕಾರ್ಮಿಕ ಸಂಘಟನೆಗಳು ಬೆಂಬಲ ನೀಡಿದ್ದವು, ಕಾರ್ಮಿಕ ಮುಖಂಡರಾದ ಯಮುನಾ ಗಾಂವ್ಕರ್ ಮಾತನಾಡಿದರು.









ಅಗತ್ಯ ವಸ್ತುಗಳ ಬೆಲೆ ಇನ್ನಷ್ಟ ಹೆಚ್ಚಿಸುವ, ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಯವರಿಗೆ ಒಪ್ಪಿಸುವ ಜನ ವಿರೋಧಿ ಬಜೆಟ್





ಬೆಳೆಗಳನ್ನು ಬೆಳೆಯುವವರು vs. ಮೊಳೆಗಳನ್ನು ಬೆಳೆಯುವವರು



ಈ ಚಿತ್ರಗಳು ಇಡೀ ಜಗತ್ತನ್ನು ಆಘಾತಗೊಳಿಸುತ್ತಿವೆ. ಒಂದು ಆಧುನಿಕ ನಾಗರೀಕ ಸಮಾಜವು ದೇಶದ ಪ್ರಜೆಗಳನ್ನು ಹೀಗೆ ಹಿಂಸ್ರಪಶುಗಳಾಗಿ ನೋಡಬಹುದೆ? ಹಿಂದೆ ಸರ್ಕಸ್ಸಿನಲ್ಲಿ ಪ್ರಾಣಿಗಳನ್ನು ಬಂಧನದಲ್ಲಿಡುತ್ತಾರೆ ಎಂದು ಪ್ರಾಣಿದಯಾ ಸಂಘಗಳು ವಾದಿಸಿದ್ದರಿಂದ ಸರ್ಕಸ್ ಕಂಪನಿಗಳು ಅವನ್ನು ಕೈಬಿಟ್ಟವು. ಕೆಲವು ನಿಂತೇ ಹೋದವು. ಆ ಪ್ರಾಣಿಗಳಿಗೂ ಮುಳ್ಳಿನ ನೆಲವನ್ನು ಸಿದ್ಧಮಾಡಲಾಗಿರಲಿಲ್ಲ. ಈಗ ಪ್ರಭುತ್ವವು ರೈತರ ಮೇಲೆ ಇಂಥ ಪ್ರಯೋಗಗಳನ್ನು ಮಾಡುತ್ತಿವೆ. ನನಗೆ ಆತಂಕವೂ ಅನ್ನಿಸಿತು. ಪ್ರಭುತ್ವದ ಉದ್ದೇಶಗಳು ಏನಿವೆ? ಇಡೀ ಪ್ರದೇಶವನ್ನು ಬಯಲು ಸೆರೆಮನೆ ಮಾಡುವುದೇ ಅಥವಾ ಇನ್ನೂ ಕರಾಳವಾದ ಯೋಜನೆ ಇದೆಯೆ? ಇಂಥ ಪದಗಳನ್ನು ಯಾವ ಕಾರಣಕ್ಕೂ ಬಳಸಕೂಡದು ಎಂದು ಸರಕಾರವು ಆಜ್ಞೆ ಮಾಡಿದೆ. ಆದರೆ ಅದೇಕೋ ಹಿಟ್ಲರ್ ಕಾಲದ ಚಿತ್ರಗಳು ಮನಸ್ಸಿಗೆ ಬರುತ್ತಿವೆ.

ಪ್ರೊ. ರಾಜೇಂದ್ರ ಚೆನ್ನಿ






ಮೊನ್ನೆ ಸಾಮಾಜಿಕ ತಾಣಗಳಲ್ಲಿ ಹರಿದಾಡುತ್ತಿರುವ ಒಂದು ಚಿತ್ರವನ್ನು ನೋಡಿ ವಿಚಿತ್ರವಾದ ಭಾವನೆಗಳು ಉಂಟಾದವು. ಚಿತ್ರದಲ್ಲಿ ದೆಹಲಿ ಪೋಲೀಸರ ನಿರ್ದೇಶನದ ಮೇರೆಗೆ ಒಬ್ಬ ಕೆಲಸದವನು ನೆಲದ ಮೇಲೆ ಬಗ್ಗಿ ಕುಳಿತು ಥೇಟು ರೈತನಂತೆ ಭತ್ತದ ಸಸಿ ನೆಡುತ್ತಿರುವಂತೆ ಮೊಳೆಗಳನ್ನು ಹಸಿ ಸಿಮೆಂಟ್‌ನಲ್ಲಿ ನೆಡುತ್ತಿದ್ದಾನೆ. ಇದು ದೆಹಲಿ ಪೋಲೀಸರು ರೈತರು ಓಡಾಡದಂತೆ ಮಾಡಲು ಕಂಡುಹಿಡಿದಿರುವ ಅಮಾನುಷ ಮತ್ತು ವಿಕೃತವಾದ ವಿಧಾನ. ಇನ್ನೊಂದು ಚಿತ್ರದಲ್ಲಿ ಸುತ್ತಲೂ ತಂತಿಬೇಲಿಯನ್ನು ಹಾಕುತ್ತಿದ್ದಾರೆ. ಇನ್ನೊಂದು ಕಡೆಗೆ ಬಸ್ಸುಗಳನ್ನು ತಡೆಗೋಡೆಯಾಗಿ ನಿಲ್ಲಿಸಿದ್ದಾರೆ. ಈ ಚಿತ್ರಗಳು ಇಡೀ ಜಗತ್ತನ್ನು ಆಘಾತಗೊಳಿಸುತ್ತಿವೆ. ಒಂದು ಆಧುನಿಕ ನಾಗರೀಕ ಸಮಾಜವು ದೇಶದ ಪ್ರಜೆಗಳನ್ನು ಹೀಗೆ ಹಿಂಸ್ರಪಶುಗಳಾಗಿ ನೋಡಬಹುದೆ? ಹಿಂದೆ ಸರ್ಕಸ್ಸಿನಲ್ಲಿ ಪ್ರಾಣಿಗಳನ್ನು ಬಂಧನದಲ್ಲಿಡುತ್ತಾರೆ ಎಂದು ಪ್ರಾಣಿದಯಾ ಸಂಘಗಳು ವಾದಿಸಿದ್ದರಿಂದ ಸರ್ಕಸ್ ಕಂಪನಿಗಳು ಅವನ್ನು ಕೈಬಿಟ್ಟವು. ಕೆಲವು ನಿಂತೇ ಹೋದವು. ಆ ಪ್ರಾಣಿಗಳಿಗೂ ಮುಳ್ಳಿನ ನೆಲವನ್ನು ಸಿದ್ಧಮಾಡಲಾಗಿರಲಿಲ್ಲ. ಈಗ ಪ್ರಭುತ್ವವು ರೈತರ ಮೇಲೆ ಇಂಥ ಪ್ರಯೋಗಗಳನ್ನು ಮಾಡುತ್ತಿವೆ. ನನಗೆ ಆತಂಕವೂ ಅನ್ನಿಸಿತು. ಪ್ರಭುತ್ವದ ಉದ್ದೇಶಗಳು ಏನಿವೆ? ಇಡೀ ಪ್ರದೇಶವನ್ನು ಬಯಲು ಸೆರೆಮನೆ ಮಾಡುವುದೇ ಅಥವಾ ಇನ್ನೂ ಕರಾಳವಾದ ಯೋಜನೆ ಇದೆಯೆ? ಇಂಥ ಪದಗಳನ್ನು ಯಾವ ಕಾರಣಕ್ಕೂ ಬಳಸಕೂಡದು ಎಂದು ಸರಕಾರವು ಆಜ್ಞೆ ಮಾಡಿದೆ. ಆದರೆ ಅದೇಕೋ ಹಿಟ್ಲರ್ ಕಾಲದ ಚಿತ್ರಗಳು ಮನಸ್ಸಿಗೆ ಬರುತ್ತಿವೆ. ಆ ಕಾಲದ ಯಾತನಾ ಶಿಬಿರಗಳ ಬಗ್ಗೆ ಅಧ್ಯಯನ ಮಾಡಿದ್ದರಿಂದ ಆ ಚಿತ್ರಗಳು ಮತ್ತೆ ಮತ್ತೆ ನೆನಪಾಗುತ್ತಲೇ ಇರುತ್ತವೆ. ದುಷ್ಟ ರಾಜಕೀಯದಲ್ಲಿ ಯಾವುದೂ ಅಸಾಧ್ಯವಲ್ಲ.

ಒಂದು ಮಾತಂತೂ ನಿಜ. ರೈತರ ಒಗ್ಗಟ್ಟು ಹೋರಾಟದ ಛಲ ಬೆಳೆಯುತ್ತಲೇ ಇವೆ. ಇದನ್ನು ನಿಭಾಯಿಸುವ ಸಾಮರ್ಥ್ಯವು ಪ್ರಭುತ್ವಕ್ಕೆ ಇಲ್ಲ. ಸೈನಿಕರು, ಪೋಲೀಸರ ಮೇಲೆ ಸರಕಾರಕ್ಕೆ ಇರುವ ನಂಬಿಕೆ ಪ್ರಜೆಗಳ ಮೇಲೆ ಇಲ್ಲ. ವಿರೋಧಾಭಾಸವೆಂದರೆ ಅತ್ಯಂತ ಜನಪ್ರಿಯ ನಾಯಕರೆಂದು ಬಿಂಬಿಸಲಾಗಿರುವವರಿಗೆ ರೈತರನ್ನು ಮಾತನಾಡಿಸಲು ಆಸಕ್ತಿಯೂ ಇಲ್ಲ, ಧೈರ್ಯವೂ ಇಲ್ಲ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಇಂಥ ವಿದ್ಯಮಾನವು ನಡೆದಿಲ್ಲ. ನೆಹರೂ, ಶಾಸ್ತ್ರಿ, ಇಂದಿರಾಗಾಂಧಿ ಇವರು ಜನರಿಂದ ದೂರವಿದ್ದಿರಲಿಲ್ಲ. ಇನ್ನು ವಲ್ಲಭ್‌ಭಾಯಿ ಪಟೇಲರು, ಮೌಲಾನಾ ಅಬುಲ್ ಕಲಮ್‌ರಂಥ ಮಹಾನ್ ನಾಯಕರು ಜನರ ಮಧ್ಯೆಯೇ ಬದುಕಿದವರು. ಗಾಂಧಿಯವರಿಗಂತೂ ವೈಯಕ್ತಿಕ ಜೀವನವೇ ಇರಲಿಲ್ಲವೆನ್ನಿಸುವಷ್ಟು ಸಾರ್ವಜನಿಕ ವ್ಯಕ್ತಿಯಾಗಿದ್ದರು. ಕೆಲವು ಚಿಂತಕರ ಪ್ರಕಾರ ಭಾರತೀಯ ರಾಜಕೀಯದ ಸ್ವರೂಪವು ಬದಲಾದದ್ದು ಹತ್ಯೆಯಾದ ಗಾಂಧಿಯವರನ್ನು ಸೈನ್ಯದ ವಾಹನದ ಮೇಲೆ ಸೈನ್ಯದ ಜೊತೆಗೆ ಚಿತಾಗಾರಕ್ಕೆ ಕರೆದುಕೊಂಡು ಹೋಗಿದ್ದರಿಂದ. ನೆಹರು ಪ್ರಧಾನಮಂತ್ರಿಗಳಾದ ಮೇಲೆ ಅವರ ನಿವಾಸದ ವೈಭವವನ್ನು ನೋಡಿ ಕುಪಿತರಾದ ಜೆ.ಸಿ. ಕುಮಾರಪ್ಪನವರು ಎತ್ತಿನಗಾಡಿಯಲ್ಲಿ ಅವರನ್ನು ಕಾಣಲು ಹೊರಟರು. ಇಷ್ಟಾದರೂ ನೆಹರು ಜನರಿಂದ ದೂರವಾಗಲಿಲ್ಲ. ಸಂಕಷ್ಟದ ಸಂದರ್ಭಗಳಲ್ಲಿ ನಮ್ಮ ರಾಜಕೀಯ ನಾಯಕರು ಜನರ ಮಧ್ಯೆ ಎಗ್ಗಿಲ್ಲದೆ ಪ್ರವೇಶ ಮಾಡುತ್ತಿದ್ದರು.

ರೈತರೊಂದಿಗೆ ಮಾತನಾಡುವುದು ತನ್ನ ವರ್ಚಸ್ಸಿಗೆ ಕಮ್ಮಿ ಎಂದು ಸರಕಾರವು ಭಾವಿಸಿದಂತಿದೆ. ನಾನು ನಿಗದಿತ ಸಭೆಗಳಲ್ಲಿ ತೂಕವಿಲ್ಲದ ಮಂತ್ರಿಗಳು ರೈತರ ಜೊತೆಗೆ ಮಾತನಾಡುವುದರ ಬಗ್ಗೆ ಹೇಳುತ್ತಿಲ್ಲ. ನನ್ನ ದೇಶದ ನನ್ನ ಜನ, ನಮ್ಮ ರೈತರು ಎನ್ನುವ ಪ್ರೀತಿಯೇ ಇಲ್ಲದ ದುರಹಂಕಾರಿ ಸರಕಾರದ ಬಗ್ಗೆ ಹೇಳುತ್ತಿದ್ದೇನೆ. ನಮ್ಮ ರಾಜಕೀಯ ವರ್ಗವು ತಾನು ಜನರನ್ನು "ಆಳುತ್ತೇನೆ" ಎನ್ನುವ ದುಷ್ಟ ನಂಬಿಕೆಯನ್ನು ಬೆಳೆಸಿಕೊಂಡು ಬಿಟ್ಟಿದೆ. ಆಧುನಿಕ ಹಾಗೂ ನಾಗರೀಕ ದೇಶಗಳಲ್ಲಿ ಇಂಥ ವಿದ್ಯಮಾನವು ಕಾಣುವುದಿಲ್ಲ. ಬರಾಕ್ ಓಬಾಮಾ ಸರದಿ ಸಾಲಿನಲ್ಲಿ ನಿಂತು ತನ್ನ ಜೋಬಿನಿಂದ ದುಡ್ಡು ಕೊಟ್ಟು ಕಾಫಿ ಕೊಳ್ಳುವ ಫೋಟೋಗಳನ್ನು ನೋಡಿದ್ದೇವೆ. ನ್ಯೂಝಿಲೆಂಡ್‌ನ ಮಹಿಳಾ ಪ್ರಧಾನಿ ಹೋಟೆಲ್‌ನಲ್ಲಿ ಊಟ ಮಾಡಲು ಜಾಗ ಸಿಗದಿದ್ದಾಗ ಅಲ್ಲಿಂದ ಒಂದು ಮಾತೂ ಇಲ್ಲದೆ ಹೊರಟು ಹೋಗಿದ್ದರ ಬಗ್ಗೆ ವರದಿಗಳನ್ನು ಓದಿದ್ದೇವೆ. ಅನೇಕ ಪ್ರಜಾಪ್ರಭುತ್ವವಾದಿ ದೇಶಗಳಲ್ಲಿ ಪ್ರಧಾನ ಮಂತ್ರಿಗಳು ಸಾರ್ವಜನಿಕ ಬಸ್‌ನಲ್ಲಿ ಕೆಲವೊಮ್ಮೆ ಸೈಕಲ್‌ನಲ್ಲಿ ಕಚೇರಿಗೆ ಹೋಗಿ ಬರುತ್ತಾರೆ.



ಆದರೆ ನಮ್ಮ ದೇಶದಲ್ಲಿ ಮೂಗು ಒರೆಸಿಕೊಳ್ಳಲೂ ಬರದ ಒಬ್ಬ ಎಂ.ಎಲ್.ಎ. ಚಕ್ರವರ್ತಿಯಂತೆ ನಟಿಸುತ್ತಾನೆ. ಇಂಥ ಹುಟ್ಟಾ ಮೂರ್ಖರನ್ನು ಮತ್ತು ನಕಲಿ ನಾಯಕರನ್ನು ನೋಡಿ ಚೆನ್ನಾಗಿ ನಕ್ಕುಬಿಡಬಹುದು. ಆದರೆ ಈ ಧೋರಣೆ ಈಗ ಯಾವ ಅಪಾಯದ ಹಂತಕ್ಕೆ ತಲುಪಿದೆಯೆಂದರೆ ಅಧಿಕಾರ ಮತ್ತು ಪ್ರಜೆಗಳ ನಡುವೆ ಕಂದಕಗಳಿವೆ. ಶತ್ರು ರಾಷ್ಟ್ರಗಳ ಗಡಿಗಳ ಸುತ್ತ ತಂತಿಬೇಲಿಗಳನ್ನು ಹಾಕುವಂತೆ ರೈತರ ಪ್ರತಿಭಟನೆಯ ಸುತ್ತ ಹಾಕಲಾಗಿದೆ. ಜನವರಿ 26ರ ಗಲಭೆಗಳು ಅಕ್ಷಮ್ಯವೆನ್ನುವುದರಲ್ಲಿ ಅನುಮಾನವೇ ಇಲ್ಲ. ಆದರೆ ಆಗ ರೈತರು ಕೇಳಿದ "ಯಾಕೆ, ದೆಹಲಿ ನಮ್ಮದೂ ಅಲ್ಲವೆ?" ಎನ್ನುವ ಪ್ರಶ್ನೆಗೆ ಉತ್ತರವೇನು? ರಾಜಧಾನಿಯೆಂದರೆ ಇಡೀ ದೇಶದ ಒಂದು ಭಾವನಾತ್ಮಕ ಸಂಕೇತವೂ ಹೌದು. ಪ್ರಜೆಗಳು ಬಂದರೆ ದೆಹಲಿಯು ಸಂಭ್ರಮಿಸಬೇಕು. ದೆಹಲಿ ನಾಗರೀಕರು ಸಂಭ್ರಮಿಸಿದರು. ಆದರೆ ಗಲಭೆಗಳನ್ನು ಹುಟ್ಟು ಹಾಕಿದ ಸರಕಾರವು ಶತ್ರುಗಳು ನುಗ್ಗಿ ಬಿಟ್ಟಿದ್ದಾರೆನ್ನುವಂತೆ ಪ್ರತಿಕ್ರಿಯಿಸಿತು. ಇತಿಹಾಸದಲ್ಲಿ "ದೆಹಲಿ ದೂರ ಅಸ್ತ" (ದೆಹಲಿ ದೂರವಿದೆ) ಎನ್ನುವ ಮಾತು ಕೇಳಿಬಂದಿತ್ತು. ಈಗ ಮತ್ತೆ ವಿಭಿನ್ನವಾದ ಅರ್ಥದೊಂದಿಗೆ ಅದೇ ಮಾತು ಕೇಳಿಬಂದಿದೆ.

ಇನ್ನೂ ಆಶ್ಚರ್ಯದ ಸಂಗತಿಯೆಂದರೆ ರೈತರಿಗೆ ಏನು ಬೇಕಿದೆಯೆನ್ನುವುದು ರೈತರಿಗಿಂತ ನನಗೆ ಗೊತ್ತು ಎಂದು ಪ್ರಭುತ್ವವು ಹೇಳುತ್ತಿರುವುದು. ಹಾಗಿದ್ದರೆ ತಮಗೆ ಏನು ಒಳ್ಳೆಯದು ಎಂದು ಗೊತ್ತಿಲ್ಲದ ರೈತರ ಮತವನ್ನು ಇನ್ನೆಂದೂ ಕೇಳುವುದಿಲ್ಲವೆಂದು ಪ್ರಭುತ್ವವು ಅಥವಾ ಆಡಳಿತ ಪಕ್ಷವು ಸಾರ್ವಜನಿಕವಾಗಿ ಹೇಳಲು ಸಿದ್ಧವಿದೆಯೆ? ಸಂವಾದ, ಚರ್ಚೆ ಎಂದರೆ ವಿರೋಧವೆಂದುಕೊಳ್ಳುವ ಪ್ರಭುತ್ವವು ಖಂಡಿತವಾಗಿ ಸರ್ವಾಧಿಕಾರಿ ರಾಜಕೀಯದ ಕಡೆಗೆ ಹೊರಟಿದೆ. ಇದು ಖಂಡಿತವಾಗಿ ಅಪಾಯದ ಲಕ್ಷಣವಾಗಿದೆ. ಅಷ್ಟು ಮಾತ್ರವಲ್ಲ ಭಾರತದ ಪ್ರಜಾಪ್ರಭುತ್ವವನ್ನು ಟೀಕಿಸಿದರೂ ಅದರ ಬಗ್ಗೆ ಕುತೂಹಲ, ಮೆಚ್ಚುಗೆ ಇಟ್ಟುಕೊಂಡಿದ್ದ ಪಶ್ಚಿಮವು ಇಂದು ಭಾರತದ ಬಗ್ಗೆ ತೀವ್ರ ಅನುಮಾನಗಳನ್ನು ಇಟ್ಟುಕೊಂಡಿದೆ. ಒಂದು ಮುಖ್ಯ ಜಾಗತಿಕ ವರದಿಯ ಪ್ರಕಾರ ಜಗತ್ತಿನ Four Difficult Countries ನಲ್ಲಿ ಭಾರತವೂ ಒಂದಾಗಿದೆ. ರೈತ ಚಳುವಳಿಯು ಆಧುನಿಕ ಕಾಲದ ಅತಿ ದೊಡ್ಡ ಚಳುವಳಿಯಾಗಿರುವುದರಿಂದ ಇಡಿ ಜಗತ್ತು ಭಾರತದತ್ತ ನೋಡುತ್ತಿರುವುದು ಸಹಜವಾಗಿದೆ. ಜಗತ್ತು ನಮ್ಮ ಬಗ್ಗೆ ಏನು ಹೇಳಬೇಕು ಮತ್ತು ಏನು ಹೇಳಬಾರದು ಎನ್ನುವುದನ್ನು ತಾನು ನಿರ್ದೇಶಿಸುತ್ತದೆ ಎಂದು ಸರಕಾರವು ಅಂದುಕೊಳ್ಳುವುದು ಮೂರ್ಖತನದ ಪರಮಾವಧಿ. ಜಗತ್ತು ಸ್ವತಂತ್ರವಾಗಿದೆ. ಅದು ಮುಕ್ತ ವಿಮರ್ಶೆಯಲ್ಲಿ ನಂಬಿಕೆ ಹೊಂದಿದೆ. ಅಲ್ಲದೆ ಜಗತ್ತು ಒಂದು ಕುಟುಂಬವೆಂದು ಪ್ರಾಮಾಣಿಕವಾಗಿ ನಂಬಿರುವ ಅನೇಕರು ರೈತರ ಚಳುವಳಿ ಬಗ್ಗೆ ಖಂಡಿತ ಮಾತನಾಡುತ್ತಾರೆ. ಇದನ್ನು ನಿಲ್ಲಿಸುವ ಮುಳ್ಳುಗಳು, ತಂತಿ ಬೇಲಿಗಳು ಇಲ್ಲವೆನ್ನುವುದು ನೆನಪಿನಲ್ಲಿರಬೇಕು. ●

ಕೇಂದ್ರ ಬಜೆಟ್ 2021-22: ಜನತೆಗೆ ಬಹುದೊಡ್ಡ ವಿಶ್ವಾಸದ್ರೋಹ

ಕೋವಿಡ್ ನಿರ್ಮಿಸಿದ ಸಾರ್ವಜನಿಕ ಆರೋಗ್ಯ ಬಿಕ್ಕಟ್ಟು ಇನ್ನೂ ಮುಗಿದಿಲ್ಲ ಮತ್ತು ಲಸಿಕೆಗಳ ವೆಚ್ಚ ಅಗತ್ಯವಿರುವ ಹೆಚ್ಚುವರಿ ಖರ್ಚುಗಳಲ್ಲಿ ಒಂದು ಮಾತ್ರ. ಉದ್ಯೋಗ, ಜೀವನೋಪಾಯ ಮತ್ತು ಆದಾಯಗಳ ನಾಶ ಮತ್ತು ಬೇಡಿಕೆಯ ಕುಸಿತ ಆರ್ಥಿಕ ಬಿಕ್ಕಟ್ಟಿನ ಪ್ರಮುಖ ಅಂಶಗಳು. ಇದನ್ನು ನಿವಾರಿಸಲು ಇನ್ನೂ ದೊಡ್ಡ ಹೆಚ್ಚುವರಿ ವೆಚ್ಚಗಳ ಅಗತ್ಯವಿದೆ. ಇಂತಹ ಹಿನ್ನೆಲೆಯಲ್ಲಿ ಹಿಂದಿನ ವರ್ಷದ ಅತ್ಯಂತ ಅಸಮರ್ಪಕ ಮಟ್ಟದ ಖರ್ಚುಗಳನ್ನೂ ಕೂಡ ಕಡಿತಗೊಳಿಸುವ ಮತ್ತು ಕಾರ್ಪೊರೇಟ್‌ಗಳಿಗೆ ರಿಯಾಯಿತಿಗಳನ್ನು ನೀಡುವ ಕೇಂದ್ರ ಬಜೆಟ್ ಬಂದಿದೆ. ಇದು ಒಂದು ಅನಾಹುತಕ್ಕೆ ಆಹ್ವಾನ ನೀಡಿದಂತೆಯೇ, ಜನಗಳಿಗೆ ಹೆಚ್ಚಿನ ಸಂಕಷ್ಟಗಳು ಮತ್ತು ಈಗಾಗಲೇ ಭಾರತದ ಲಕ್ಷಣವಾಗಿ ಬಿಟ್ಟಿರುವ ಹೊಲಸು ಅಸಮಾನತೆಗಳನ್ನು ಮತ್ತಷ್ಟು ಹೆಚ್ಚಿಸಲು ದಾರಿ ಮಾಡಿಕೊಡುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಎಚ್ಚರಿಸಿದೆ. ಕಾರ್ಪೊರೇಟ್ ಪರವಾದ ಈ ಬಜೆಟ್ ವಿರುದ್ಧ ಪ್ರತಿಭಟಿಸಬೇಕು ಮತ್ತು ತಕ್ಷಣವೇ ನಗದು ವರ್ಗಾವಣೆ, ಉಚಿತ ಆಹಾರ ಮತ್ತು ಸಾರ್ವತ್ರಿಕ ಉದ್ಯೋಗ ಖಾತರಿ ಕಾರ್ಯಕ್ರಮಗಳಿಗಾಗಿ ಹೋರಾಟಗಳನ್ನು ಚುರುಕುಗೊಳಿಸಬೇಕು ಎಂದು ಅದು ಜನತೆಗೆ ಕರೆ ನೀಡಿದೆ.

ಈ ಬಜೆಟ್ ದುಡಿಯುವ ಜನಗಳಿಗೆ ಹೆಚ್ಚೆಚ್ಚು ಯಾತನೆ ಮತ್ತು ಸಂಕಟಗಳನ್ನು ಹೇರಿ ಬೆರಳೆಣಿಕೆಯಷ್ಟು ದೊಡ್ಡ ಉದ್ಯಮ ಗುಂಪುಗಳ ಹಿತಾಸಕ್ತಿಗಳನ್ನು ಉತ್ತೇಜಿಸುವ ಅಚಲವಾದ ಬದ್ಧತೆಯನ್ನು ಮೋದಿ ಸರ್ಕಾರ ಹೊಂದಿದೆ ಎಂಬುದಕ್ಕೆ ಒಂದು ಬಹು ಒಳ್ಳೇ ಉದಾಹರಣೆಯಾಗಿದೆ. ಇದರಲ್ಲಿ ಬಹಳಷ್ಟು ಅಬ್ಬರದ ಮಾತುಗಳಿದ್ದರೂ, ವಾಸ್ತವವಾಗಿ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಲು ಸರ್ಕಾರವು ನಿರಾಕರಿಸಿರುವುದು ಇದನ್ನೇ ಬಿಂಬಿಸುತ್ತದೆ.. 2021-22ಕ್ಕೆ ಬಜೆಟ್ ಮಾಡಲಾದ ಕೇಂದ್ರ ಸರ್ಕಾರದ ಒಟ್ಟು ಖರ್ಚು ರೂ.34.8 ಲಕ್ಷ ಕೋಟಿ ಎಂಬ ಸಂಖ್ಯೆ 2020-21ರ ಸಂಖ್ಯೆಯನ್ನೇ ಹೋಲುತ್ತದೆ. ಅಂದರೆ ರೂಪಾಯಿಯ ನಿಜಮೌಲ್ಯವನ್ನು ಪರಿಗಣಿಸಿದರೆ ವಾಸ್ತವವಾಗಿ ವೆಚ್ಚವನ್ನು ಕಡಿತಗೊಳಿಸಲಾಗಿದೆ. ಇದು ಸರಕಾರ ಜನರತ್ತ ತನ್ನ ಜವಾಬ್ದಾರಿಯನ್ನು ಸಂಪೂರ್ಣವಾಗಿ ಕೈಬಿಟ್ಟು, ರಾಷ್ಟ್ರದ ಉತ್ಪಾದಕ ಸ್ವತ್ತುಗಳ ಮೇಲೆ ಹೆಚ್ಚಿನ ನಿಯಂತ್ರಣವೂ ಒಳಗೊಂಡಂತೆ ಸವಲತ್ತು ಪಡೆದಿರುವ ಕೆಲವೇ ಮಂದಿಯ ಸಂಪತ್ತನ್ನು ಹೆಚ್ಚಿಸುತ್ತಿರುವುದನ್ನು ತೋರಿಸುತ್ತದೆ.

ಈಗ ಕೊನೆಗೊಳ್ಳುತ್ತಿರುವ (2020-2021) ವರ್ಷದಲ್ಲಿ ಹಣಕಾಸಿನ ಕೊರತೆ ಜಿಡಿಪಿ ಯ ಶೇಕಡಾ 9.5 ರಷ್ಟಿದೆ, ಇದು ಸರಕಾರ ಜನಗಳಿಗಾಗಿ ಹೆಚ್ಚು ಖರ್ಚು ಮಾಡಿದ್ದರಿಂದಾಗಿ ಎಂದು ಹೇಳಿಕೊಳ್ಳುತ್ತದೆ. ಆದರೆ ಪ್ರಥಮತಃ ಇದು ಸರಕಾರದ ವೆಚ್ಚದ ಹೆಚ್ಚಳದಿಂದಾಗಿ ಅಲ್ಲ, ಆದಾಯವು ಕುಸಿಯುತ್ತಿರುವುದರಿಂದಾಗಿ ಆಗಿದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ತೀವ್ರವಾಗಿ ಹೆಚ್ಚಿಸುವ ಮೂಲಕ ಸಾಮಾನ್ಯ ಜನರ ಮೇಲೆ ಭಾರೀ ಹೆಚ್ಚುವರಿ ತೆರಿಗೆ ಹೊರೆಯನ್ನು ಸರ್ಕಾರ ಸಿನಿಕತನದಿಂದ ಹೇರಿದ್ದರೂ ಕೂಡ, ಈ ಕುಸಿತ ಸಂಭವಿಸಿದೆ.

ಈ ಬಜೆಟಿನಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಒಟ್ಟು ಸಂಪನ್ಮೂಲಗಳ ವರ್ಗಾವಣೆ ಕಳೆದ ವರ್ಷದ ಪರಿಷ್ಕೃತ ಅಂದಾಜಿಗಿಂತ ನಲವತ್ತು ಸಾವಿರ ಕೋಟಿ ರೂ.ಗಿಂತಲೂ ಕಡಿಮೆಯಾಗಿದೆ. 2020-21ರಲ್ಲಿ ಕಾರ್ಪೊರೇಟ್ ಮತ್ತು ಆದಾಯ ತೆರಿಗೆಗಳಲ್ಲಿ ದೊಡ್ಡ ಕೊರತೆ ಉಂಟಾಗಿದೆ.

ಕಾರ್ಪೊರೇಟ್ ತೆರಿಗೆ ಸಂಗ್ರಹದಲ್ಲಿ 1ಲಕ್ಷ ಕೋಟಿ ರೂ. ಇಳಿಕೆ?

ಮಾತ್ರವಲ್ಲ, ಸರಕಾರವು ಕಾರ್ಪೊರೇಟ್ ವಲಯ ಮತ್ತು ಶ್ರೀಮಂತರು ಕೊವಿಡ್-ಪೂರ್ವದಲ್ಲಿ ಪಾವತಿ ಮಾಡಿದಷ್ಟೂ ತೆರಿಗೆಗಳನ್ನು ಕೂಡ 2021-22ರಲ್ಲಿ ತೆರಲಾರರು ಎಂದು ನಿರೀಕ್ಷಿಸುವ ಮೂಲಕ ಅವರು "ಸಂಕಟ"ದಲ್ಲಿದ್ದಾರೆ ಎಂದು ಗುರುತಿಸಲು ಉತ್ಸುಕವಾಗಿದೆ! ಏಕೆಂದರೆ 2020-21ರಲ್ಲಿ ಕಾರ್ಪೊರೇಟ್ ತೆರಿಗೆ ಮತ್ತು ಆದಾಯ ತೆರಿಗೆಗಳ ಬಜೆಟ್ ಅಂದಾಜು ಕ್ರಮವಾಗಿ 6.81 ಮತ್ತು 6.38 ಲಕ್ಷ ಕೋಟಿ ರೂ.ಗಳಾಗಿದ್ದರೆ, 2021-22ರ ಬಜೆಟಿನಲ್ಲಿ ಇದು ಅನುಕ್ರಮವಾಗಿ 5.47 ಮತ್ತು 5.61 ಲಕ್ಷ ಕೋಟಿ ರೂ.ಗೆ ಇಳಿದಿದೆ ಎಂಬ ಸಂಗತಿಯತ್ತ ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

2020-21ರಲ್ಲಿ 34.5 ಲಕ್ಷ ಕೋಟಿ ರೂ. ಗಳಷ್ಟು ಸರ್ಕಾರ ವೆಚ್ಚ ಮಾಡಿದೆ ಎಂಬ ಪರಿಷ್ಕೃತ ಅಂದಾಜುಗಳು ಸಹ ನಿಜವಾದ ಖರ್ಚಿನಲ್ಲಿ ಹಣದುಬ್ಬರದಿಂದಾಗಿ ಆಗಿರುವ ಹೆಚ್ಚಳವನ್ನು ಪ್ರತಿನಿಧಿಸುತ್ತವೆ, 2020 ರ ಡಿಸೆಂಬರ್ ಅಂತ್ಯದವರೆಗೆ ಇದರಲ್ಲಿ ಖರ್ಚಾಗಿರುವುದು ಕೇವಲ 22.8 ಲಕ್ಷ ಕೋಟಿ ರೂ.ಗಳು ಮಾತ್ರ ಎಂಬ ಅಂಕಿಯತ್ತವೂ ಸಿಪಿಐ(ಎಂ) ಪೊಲಿಟ್‌ಬ್ಯುರೋ ಗಮನ ಸೆಳೆದಿದೆ.

ಕೇಂದ್ರ ಸರ್ಕಾರದ ವೆಚ್ಚಗಳ ಪರಿಷ್ಕೃತ ಅಂದಾಜುಗಳು ಮತ್ತು ಬಜೆಟ್ ಅಂದಾಜುಗಳಲ್ಲಿ ಇರುವ 4 ಲಕ್ಷ ಕೋಟಿ ರೂ. ಗಳ ವ್ಯತ್ಯಾಸವು ಮುಖ್ಯವಾಗಿ ಆಹಾರ ಸಬ್ಸಿಡಿಗಾಗಿ ಭಾರತ ಆಹಾರ ನಿಗಮ(ಎಫ್.ಸಿ.ಐ.)ಕ್ಕೆ 'ರಾಷ್ಟ್ರೀಯ ಸಣ್ಣ ಉಳಿತಾಯಗಳ ನಿಧಿ'(ಎನ್.ಎಸ್.ಎಸ್.ಎಫ್.)ಯಿಂದ ಸಾಲವನ್ನು ಸ್ಥಗಿತಗೊಳಿಸಿ ಅದನ್ನು ಬಜೆಟ್‌ಗೆ ವರ್ಗಾಯಿಸಿದ ನಿಬಂಧನೆಯಿಂದಾಗಿ ಉಂಟಾಗಿದೆ. ಮತ್ತು 2021-22ರಲ್ಲಿ ಆಹಾರ ಸಬ್ಸಿಡಿಗಳಿಗಾಗಿ ನೀಡಿಕೆಯನ್ನು 2020-21ಕ್ಕೆ ಹೋಲಿಸಿದರೆ 41% ಕಡಿತಗೊಳಿಸಲಾಗುತ್ತದೆ ಎಂಬುದು ಕೂಡ ಗಮನಾರ್ಹ.

ಜನಗಳೊಂದಿಗೆ ಸರಕಾರದ ಈ ಆಟ!



ಹಣಕಾಸು ಸಚಿವರ ಭಾಷಣವು ಹೊರಗೆಡಹಿರದ ಸಂಗತಿಯೆಂದರೆ, ಹಲವಾರು ಬಾಬ್ತುಗಳಲ್ಲಿ, 2020-21ರಲ್ಲಿ ಖರ್ಚು ವಾಸ್ತವವಾಗಿ ಬಜೆಟ್‌ನಲ್ಲಿ ತೋರಿಸಿದ್ದಕ್ಕಿಂತ ಕಡಿಮೆಯಾಗಿದೆ. ಇವುಗಳಲ್ಲಿ ಕೃಷಿ, ಶಿಕ್ಷಣ, ಸಮಾಜ ಕಲ್ಯಾಣ, ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ, ವೈಜ್ಞಾನಿಕ ಇಲಾಖೆಗಳು, ನಗರಾಭಿವೃದ್ಧಿ, ಪಿಂಚಣಿ ಮತ್ತು ಅಂಗವೈಕಲ್ಯ ವ್ಯವಹಾರಗಳು ಮುಂತಾದವುಗಳು ಸೇರಿವೆ. ಈ ಕಡಿತಗಳನ್ನು ಮುಂದಿನ ವರ್ಷದಲ್ಲೂ ಸಹ ಮುಂದುವರಿಸಲಾಗುತ್ತಿದೆ, 2020-21 ರಲ್ಲಿ ಹೆಚ್ಚಿದ ಖರ್ಚಿನ ಕೆಲವೇ ಬಾಬ್ತುಗಳಲ್ಲಿ ಕೂಡ, ಆರೋಗ್ಯ ಮತ್ತು ಗ್ರಾಮೀಣಾಭಿವೃದ್ಧಿಯಂತಹ ಬಾಬ್ತುಗಳಲ್ಲಿ, ವೆಚ್ಚಗಳನ್ನು ಕಡಿತ ಮಾಡುವ ಪ್ರಸ್ತಾವನೆ ಈ ಬಜೆಟ್‌ನಲ್ಲಿದೆ.

ಆರೋಗ್ಯ ವೆಚ್ಚವನ್ನು ಗಮನಾರ್ಹವಾಗಿ ಹೆಚ್ಚಿಸಲಾಗುತ್ತಿದೆ ಎಂಬ ಹಣಕಾಸು ಸಚಿವರ ಹೇಳಿಕೆಯ ಹೊರತಾಗಿಯೂ, ಬಜೆಟ್ ದಾಖಲೆಗಳು ತೋರಿಸುವುದು ಬೇರೆಯೇ ಆಗಿದೆ. 2021-22ರ ಆರೋಗ್ಯಕ್ಕಾಗಿ ಬಜೆಟ್ ಹಂಚಿಕೆ 74,600 ಕೋಟಿಗಳು, ಇದು ಕಳೆದ ವರ್ಷದ ಪರಿಷ್ಕೃತ ಅಂದಾಜಿಗಿಂತ 8000 ಕೋಟಿ ರೂ. ಕಡಿಮೆ. ಇಂತಹ ಕಡಿತಗಳ ಮೂಲಕವೇ ಹಣಕಾಸು ಸಚಿವರು ಒಟ್ಟು ಖರ್ಚಿನಲ್ಲಿ ಕಡಿತವನ್ನು ಸಾಧಿಸುತ್ತಿದ್ದಾರೆ. ಇದು ಜನಗಳೊಂದಿಗೆ ಆಡುತ್ತಿರುವ ದೊಡ್ಡ ಆಟ, ದೈತ್ಯ ಮೋಸವೇ ಆಗಿದೆ ಎಂದು ಪೊಲಿಟ್‌ಬ್ಯುರೊ ವರ್ಣಿಸಿದೆ.

ಮಾರಾಟದ ಭರಾಟೆ

ಅರ್ಥವ್ಯವಸ್ಥೆಯನ್ನು ಉತ್ತಮಪಡಿಸಲು ಈ ಸರ್ಕಾರದ ಸಿದ್ಧೌಷಧವೆಂದರೆ ಭಾರತದ ರಾಷ್ಟ್ರೀಯ ಸ್ವತ್ತುಗಳನ್ನು ಮಾರಾಟ ಮಾಡುವುದು ಮತ್ತು ಲಾಭ ಗಳಿಸುವ ಸಾರ್ವಜನಿಕ ವಲಯದ ಕಂಪನಿಗಳನ್ನು ಕೂಡ ಖಾಸಗೀಕರಣಗೊಳಿಸುವುದು. ಈ ಬಜೆಟ್‌ನಲ್ಲಿ ಪ್ರಕಟಿಸಿರುವ ನಾಣ್ಯೀಕರಣ ಪರಿಯೋಜನೆಯಲ್ಲಿ ಸಾರ್ವಜನಿಕ ವಲಯದ ಕಂಪನಿಗಳು ಪ್ರಸ್ತುತ ಹೊಂದಿರುವ ಬೆಲೆಬಾಳುವ ಭೂಮಿಯನ್ನು ಮಾರಾಟ ಮಾಡುವುದು ಸೇರಿದೆ. ಹೂಡಿಕೆ ಹಿಂಪಡಿಕೆಯ ಮೂಲಕ 1.75 ಲಕ್ಷ ಕೋಟಿ ರೂ.ಗಳನ್ನು ಒಟ್ಟುಗೂಡಿಸುವ ಗುರಿಯನ್ನು ಹಾಕಿಕೊಳ್ಳಲಾಗಿದೆ. ವಿಮೆಯಲ್ಲಿ ಎಫ್.ಡಿ.ಐ.ಯನ್ನು ಶೇಕಡಾ 74 ಕ್ಕೆ ಹೆಚ್ಚಿಸುವುದು ಅತ್ಯಂತ ಆಕ್ಷೇಪಾರ್ಹ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಖಾಸಗೀಕರಣದ ಈ ಧಾವಂತವು ರಾಷ್ಟ್ರೀಯ ಹಿತಾಸಕ್ತಿಗಳನ್ನು ಬುಡಮೇಲು ಮಾಡುವ ಒಂದು ಕೃತ್ಯ ಮತ್ತು "ಆತ್ಮ ನಿರ್ಭರತಾ" ಎಂಬ ಘೋಷಣೆಯ ಅಪಹಾಸ್ಯವಾಗಿದೆ ಎಂದು ಟೀಕಿಸಿದೆ.

ಕ್ರೌರ್ಯ ತುಂಬಿದ ವಿನಾಶಕಾರಿ ಬಜೆಟ್-ಸಿಐಟಿಯು

2021-22ರ ಕೇಂದ್ರ ಬಜೆಟ್ ದುಡಿಯುವ ಜನಗಳ ಮೇಲೆ ಹೇರಿರುವ ಹತಾಶೆ ಮತ್ತು ಸಂಕಟಗಳ ಬಗ್ಗೆ ಕ್ರೂರ ಉಪೇಕ್ಷೆಯನ್ನು ಮತ್ತೊಮ್ಮೆ ಪ್ರದರ್ಶಿಸಿದೆ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ಪ್ರತಿಕ್ರಿಯಿಸಿದ್ದಾರೆ. ಆರ್ಥಿಕ ನಿಧಾನಗತಿಯನ್ನು ಎದುರಿಸಲು ಸರಕಾರದ ವೆಚ್ಚಗಳನ್ನು ಗಮನಾರ್ಹವಾಗಿ ಹೆಚ್ಚಿಸಿ ಜನಗಳ ಯೋಗಕ್ಷೇಮಕ್ಕೆ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂದು ಹಣಕಾಸು ಮಂತ್ರಿಗಳು ಬಾಯಿತುಂಬ ಮಾತಾಡಿದರೂ ಒಟ್ಟು ಪ್ರಸ್ತಾವಿತ ಬಜೆಟ್ ವೆಚ್ಚವು ಸುಮಾರಾಗಿ 2020-21ರ (ಪರಿಷ್ಕೃತ ಅಂದಾಜು) ಮಟ್ಟದಲ್ಲಿಯೇ ಉಳಿದಿದೆ, ಇದರರ್ಥ ವಾಸ್ತವವಾಗಿ (ಹಣದುಬ್ಬರವನ್ನು ಗಮನಕ್ಕೆ ತಗೊಂಡರೆ) ಕಡಿಮೆಯೇ ಆಗಿದೆ.

ಎಂದಿನಂತೆ, ಜನರ ಯೋಗಕ್ಷೇಮ ಮತ್ತು ಜೀವನೋಪಾಯಕ್ಕಾಗಿ ಸರ್ಕಾರದ ಬದ್ಧತೆಯ ಕುರಿತ ಸಚಿವರ ಅದ್ದೂರಿ ಹೇಳಿಕೆಯು ಬಜೆಟಿನ ವಾಸ್ತವಿಕ ಅಂಕೆ-ಸಂಖ್ಯೆಗಳಲ್ಲಿ ಕಾಣಿಸುತ್ತಿಲ್ಲ, ವಿಶೇಷವಾಗಿ ಸಾಮಾಜಿಕ ವಲಯದಲ್ಲಿ ಮತ್ತು ಮನರೇಗ, ಐಸಿಡಿಎಸ್, ಮಧ್ಯಾಹ್ನದ ಊಟ, ಉದ್ಯೋಗಗಳು ಮತ್ತು ಕೌಶಲ್ಯ ಅಭಿವೃದ್ಧಿಯಂತಹ ಕಲ್ಯಾಣ ಸಂಬಂಧಿತ ವೆಚ್ಚಗಳ ಅಂಕೆ-ಸಂಖ್ಯೆಗಳಲ್ಲಿ ಕಾಣಿಸುತ್ತಿಲ್ಲ ಎಂದು ಸಿಐಟಿಯು ಅಭಿಪ್ರಾಯ ಪಟ್ಟಿದೆ.

ಗ್ರಾಮೀಣ ನಿರುದ್ಯೋಗ ಮತ್ತು ಉದ್ಯೋಗಹೀನತೆ ಅಸಾಧಾರಣವಾಗಿ ಏರಿದ್ದರೂ, ಮನರೇಗಕ್ಕೆ 2020-21ರಲ್ಲಿ ಸರ್ಕಾರವು ಖರ್ಚು ಮಾಡಿದ ಮೊತ್ತದಲ್ಲಿ 41% ರಷ್ಟು ತೀವ್ರ ಕಡಿತವಾಗಿದೆ; ಮಧ್ಯಾಹ್ನ ಊಟದ ಸ್ಕೀಮಿಗೆ ಈ ವರ್ಷ ನಿಜವಾಗಿ ಖರ್ಚು ಮಾಡಿದ್ದಕ್ಕಿಂತ 1400 ಕೋಟಿ ರೂ. ಕಡಿತವಾಗಿದೆ; ಐಸಿಡಿಎಸ್‌ಗೆ, ಕಳೆದ ವರ್ಷದ ಬಜೆಟ್‌ನ ಹಂಚಿಕೆಗೆ ಹೋಲಿಸಿದರೆ ಹಂಚಿಕೆಯನ್ನು 30% ರಷ್ಟು ಕಡಿಮೆ ಮಾಡಲಾಗಿದೆ; ಉದ್ಯೋಗಗಳು ಮತ್ತು ಕೌಶಲ್ಯ ಅಭಿವೃದ್ಧಿಗೆ ಹಂಚಿಕೆಯನ್ನು 35% ಕಡಿತಗೊಳಿಸಲಾಗಿದೆ; ಇವೆಲ್ಲವೂ ಉದ್ಯೋಗ ಸೃಷ್ಟಿ ಮತ್ತು ಉದ್ಯೋಗ ಸಾಮರ್ಥ್ಯವನ್ನು ಸುಧಾರಿಸುವ ಕುರಿತು ಹಣಕಾಸು ಮಂತ್ರಿಗಳ ಉದ್ದುದ್ದ ಮಾತುಗಳನ್ನು ಅಪಹಾಸ್ಯ ಮಾಡುವಂತಿವೆ. ಇನ್ನೂ ಅನೇಕ ಉದಾಹರಣೆಗಳಿವೆ. 15 ನೇ ಹಣಕಾಸು ಆಯೋಗದ ಶಿಫಾರಸಿಗೆ ಅನುಗುಣವಾಗಿ ಸರಕಾರವು ಕೇಂದ್ರ ಪ್ರಾಯೋಜಿತ ಯೋಜನೆಗಳ ಸಂಖ್ಯೆಯನ್ನು ತಗ್ಗಿಸಲಿದೆ ಎಂದು ಮಂತ್ರಿಗಳು ಸೂಚಿಸಿದ್ದಾರೆ.

ರಾಷ್ಟ್ರೀಯ ಬೊಕ್ಕಸದ ಪ್ರಾಯೋಜಿತ ಲೂಟಿ

ಈ ಬಜೆಟ್ ಕಸರತ್ತಿನ ಎಲ್ಲ ಒತ್ತೂ

ಪುಟ 10 ನೋಡಿ

ರೈತರ ಬೇಡಿಕೆಗಳಿಗೆ ದ್ರೋಹ

ಸುಳ್ಳುಗಳ, ಲಜ್ಜೆಗೆಟ್ಟ ಖಾಸಗೀಕರಣದ ಮಾರಾಟವನ್ನು ಮುಂದುವರೆಸಿದೆ

2021-22ನೇ ಸಾಲಿನ ಕೇಂದ್ರ ಹಣಕಾಸು ಬಜೆಟ್‌ನಲ್ಲಿ ಭಾರತೀಯ ಕೃಷಿಗೆ ಹೊಸತೆನ್ನುವಂತದ್ದು ಸುಮಾರಾಗಿ ಏನೂ ಇಲ್ಲ. ತಮ್ಮ ಬೆವರಿಗೆ ಮತ್ತು ಶ್ರಮಕ್ಕೆ ನ್ಯಾಯಯುತ ಪ್ರತಿಫಲವನ್ನು ಆಗ್ರಹಿಸಿ ದೇಶಾದ್ಯಂತ ಪ್ರತಿಭಟನೆ ನಡೆಸುತ್ತಿರುವ ರೈತರನ್ನು ಅದು ಸಂಪೂರ್ಣವಾಗಿ ಕಡೆಗಣಿಸಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎ.ಐ.ಕೆ.ಎಸ್.) ಬೇಸರ ವ್ಯಕ್ತಪಡಿಸಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಸರ್ಕಾರವು ರೈತರನ್ನು ಹಿಂಡುವ ಕಾರ್ಯತಂತ್ರವನ್ನು ಅನುಸರಿಸುತ್ತಿರುವಂತೆ ಕಾಣುತ್ತಿದೆ. ಕೃಷಿಯಲ್ಲಿ ಯಾವುದೇ ಪ್ರಮುಖ ಹೆಚ್ಚುವರಿ ಹಂಚಿಕೆಗಳು ಅಥವಾ ಪ್ರಮುಖ ಹೊಸ ಯೋಜನೆಗಳಿಲ್ಲ. ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ಆಹಾರ ಭದ್ರತೆಯನ್ನು ಕಾಪಾಡಿಕೊಳ್ಳುವಲ್ಲಿ ಭಾರತೀಯ ರೈತರು ತೋರಿದ ಬದ್ಧತೆ ಸಾಟಿಯಿಲ್ಲದ್ದು. ಆದರೂ ಸರ್ಕಾರವು ಅವರಿಗೆ ಪ್ರತಿಯಾಗಿ ಏನನ್ನೂ ಕೊಟ್ಟಿಲ್ಲ. ಕೃಷಿಗೆ ನೀಡುವ ಹಣದಲ್ಲಿ ಗಮನಾರ್ಹ ಏರಿಕೆ ನಿರೀಕ್ಷಿಸಲಾಗಿತ್ತು, ಆದರೆ ಸರ್ಕಾರ ರೈತರನ್ನು ನಿರಾಶೆಗೊಳಿಸಿದೆ ಎಂದು ಎ.ಐ.ಕೆ.ಎಸ್. ಹೇಳಿದೆ.

2020-21ರಲ್ಲಿ ಕೃಷಿಗೆ ಬಜೆಟ್ ನೀಡಿಕೆ 1,34,349 ಕೋಟಿ ರೂ. ಇತ್ತು. ಇದು 2021-22ರಲ್ಲಿ 1,22,961 ಕೋಟಿ ರೂ.ಗೆ ಇಳಿದಿದೆ. ಅಂದರೆ ಹಣದುಬ್ಬರವನ್ನು ಲೆಕ್ಕಕ್ಕೆ ತಗೊಳ್ಳದಿದ್ದರೂ ಒಟ್ಟಾರೆ 8% ರಷ್ಟು ಕಡಿತ ಕಂಡುಬಂದಿದೆ. 2019-20 ಮತ್ತು 2020-21ರಲ್ಲಿ, ಅಕ್ಕಿ ಮತ್ತು ಗೋಧಿ ಸಂಗ್ರಹ ಖರೀದಿ ಹೆಚ್ಚಿತ್ತು. ಏಕೆಂದರೆ ಮುಕ್ತ ಮಾರುಕಟ್ಟೆ ಬೆಲೆಗಳು ತುಂಬಾ ಕಡಿಮೆಯಾಗಿದ್ದವು ಮತ್ತು ಸರಕಾರ ಹೆಚ್ಚಿನ ಧಾನ್ಯಗಳ ಖರೀದಿ ಮಾಡಬೇಕಾಗಿ ಬಂದಿತ್ತು, ಆದರೂ ಖರೀದಿ ಮಟ್ಟವು ಅವಶ್ಯಕತೆಗಿಂತ ಕಡಿಮೆ ಇತ್ತು, ಕೊನೆಯಲ್ಲಿ ಬಹುಪಾಲು ರೈತರು ತಮ್ಮ ಉತ್ಪನ್ನಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾಗಿ ಬಂದಿತ್ತು.

ಮತ್ತೊಂದೆಡೆ, ಕೋವಿಡ್ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು 2020-21ರಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಮೂಲಕ ಧಾನ್ಯಗಳ ವಿತರಣೆಯನ್ನು ಹೆಚ್ಚಿಸಬೇಕಾಗಿ ಬಂದಿತ್ತು. ಇವುಗಳನ್ನು ಬದಿಗಿಟ್ಟರೆ, ಕೃಷಿಯಲ್ಲಿನ ಹೆಚ್ಚಿನ ಯೋಜನೆಗಳಿಗೆ ಮಾಡಿದ ಖರ್ಚು 2020-21ರಲ್ಲಿ ಕುಸಿಯಿತು; 2021-22ರಲ್ಲಿಯೂ ಇದರಲ್ಲಿ ಏರಿಕೆಯಾಗುವ ಭರವಸೆಯನ್ನು ಬಜೆಟ್ ತೋರಿಸುವುದಿಲ್ಲ.

- ಉದಾಹರಣೆಗೆ, ಪಿಎಂ-ಕಿಸಾನ್ ಯೋಜನೆಗೆ 2020-21ರಲ್ಲಿ 75,000 ಕೋಟಿ ರೂ.ಗಳ ಬಜೆಟ್

ಪುಟ 10 ನೋಡಿ

ಈ ಬಜೆಟ್ ಜನಗಳಿಗಾಗಿಯೂ ಅಲ್ಲ, ದೇಶದ ಅರ್ಥವ್ಯವಸ್ಥೆಗಾಗಿಯೂ ಅಲ್ಲ

ಇದು ಹಿಂದಕ್ಕೆ ಹೋಗುವ ಮತ್ತು, ಅವನತಿ ತರುವ ಬಜೆಟ್ ಮಾತ್ರವೇ ಅಲ್ಲ, ಒಂದು ನಿರ್ದಯ ಹಾಗೂ ಕ್ರಿಮಿನಲ್ ಬಜೆಟ್ ಕೂಡ. ಇದು ಜನಗಳ ಜೀವನಾಧಾರಗಳ ಮೇಲಿನ ಇಬ್ಬಗೆಯ ದಾಳಿಯನ್ನು ಎದುರಿಸುವುದಿಲ್ಲ. ಬ್ರಿಟಿಶ್ ಆಳ್ವಿಕೆಯಲ್ಲಿ ಭಾರತದ "ಸಂಪತ್ತನ್ನು ಬರಿದು"ಗೊಳಿಸಲಾಗುತ್ತಿತ್ತು, ಈ ಸರಕಾರದ ಅಡಿಯಲ್ಲಿ ನಮ್ಮ ಸಂಪತ್ತಿನ ಲೂಟಿಯಾಗುತ್ತಿದೆ.

ಸೀತಾರಾಂ ಯೆಚುರಿ

"ಜನಗಳು ಇಬ್ಬಗೆಯ ಸಂಕಟಗಳಿಂದ ನರಳುತ್ತಿದ್ದಾರೆ. ಕೊರೊನ ಸೋಂಕು ಅವರ ಬದುಕುಗಳು ತತ್ತರಿಸುವಂತೆ ಮಾಡಿದ್ದರೆ, ಬಜೆಟ್ ಪ್ರಸ್ತಾವನೆಗಳು ಅವರ ಸಂಕಟಗಳನ್ನು ಮತ್ತಷ್ಟು ಉಲ್ಬಣಗೊಳಿಸಲಿವೆ" ಎಂದು ಫೆಬ್ರುವರಿ 2ರಂದು ಬಜೆಟ್ 2020–21ರ ಬಗ್ಗೆ ಆನ್‌ಲೈನ್ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದರು.

ಕೇಂದ್ರ ಸರಕಾರ ಬಹಳಷ್ಟು ಪ್ರತಿಪಾದಿಸುತ್ತಿರುವ V ಆಕಾರದ ಆರ್ಥಿಕ ಪುನಶ್ಚೇತನದ ಮಾತು ಸಂಪೂರ್ಣ ಸುಳ್ಳು, ಪುನಶ್ಚೇತನವೇನಾದರೂ ಆದರೆ ಅದು K ಆಕಾರದ್ದು ಆಗಿರುತ್ತದೆ, ಅಂದರೆ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಾರೆ, ಬಡವರು ಇನ್ನಷ್ಟು ಬಡವರಾಗುತ್ತಾರೆ ಎಂದು ಮುಂದುವರೆದು ಅವರು ಹೇಳಿದರು.

ಈ ಬಜೆಟ್ ದೇಶದ ಬಡಜನಗಳನ್ನು ಸುಲಿದು ಕೊಟ್ಟಿರುವ 'ಕಾರ್ಪೊರೇಟ್–ಪರ ಉಡುಗೊರೆ' ಎಂದು ಅಣಕಿಸುತ್ತ ಯೆಚುರಿ ಐದು ಮಹತ್ವದ ಅಂಶಗಳನ್ನು ಮುಂದಿಟ್ಟರು.

* **ಮೊದಲನೆಯದಾಗಿ, ಇದು ಸ್ವಾವಲಂಬಿ ಬಜೆಟ್ ಎಂಬ ತುತ್ತೂರಿ ಊದಲಾಗುತ್ತಿದೆ.** ಇದು ಸಂಪೂರ್ಣ ತಪ್ಪು. ಇದು ಕಾರ್ಪೊರೇಟ್ – ದೇಶೀ ಮತ್ತು ವಿದೇಶೀ ಎರಡೂ–ಬಂಡವಾಳಕ್ಕೆ ಸ್ವಯಂ–ಅಡಿಯಾಳುತನದ ಬಜೆಟ್. ಏಕೆ?

ಏಕೆಂದರೆ ಈ ಬಜೆಟ್ ಭಾರತೀಯ ಜನಗಳ ಸೊತ್ತುಗಳನ್ನು ಮಾರಿ ಅದರಿಂದ 1.75ಲಕ್ಷ ಕೋಟಿ ರೂ.ಗಳನ್ನು ಎತ್ತುವ ಗುರಿ ಇಟ್ಟುಕೊಂಡಿದೆ. ಇದು ನಮ್ಮ ರಾಷ್ಟ್ರೀಯ ಸಂಪತ್ತಿನ ಸಂಪೂರ್ಣ ಲೂಟಿ. ನಮ್ಮ ರಾಷ್ಟ್ರೀಯ ಸೊತ್ತುಗಳನ್ನು ಖಾಸಗೀಕರಿಸಲಗುತ್ತದೆ. ವಿಮಾ ವಲಯದಲ್ಲಿ ವಿದೇಶಿ ಹೂಡಿಕೆಗಳ ಮಿತಿಯನ್ನು 74ಶೇ.ಕ್ಕೆ ಏರಿಸಲಾಗಿದೆ; ಭಾರತೀಯ ಬ್ಯಾಂಕುಗಳನ್ನು ವಿದೇಶಿ ಬ್ಯಾಂಕುಗಳಿಗೆ ಮಾರುವ ಗುರಿಯಿಟ್ಟುಕೊಳ್ಳಲಾಗಿದೆ. ಇದು ವಿದೇಶಿ ಹಣಕಾಸು ಬಂಡವಾಳಕ್ಕೆ ಜನಗಳ ಸೊತ್ತುಗಳ ಶರಣಾಗತಿ. ಹೀಗೆ ವಹಿಸಿಕೊಂಡ ಮೇಲೆ, ಈ ಸಂಪತ್ತನ್ನು ಮತ್ತೆ ಭಾರತದಲ್ಲಿಯೇ ಹೂಡಲಿಕ್ಕಿಲ್ಲ, ವಿದೇಶಿ ಬಂಡವಾಳಕ್ಕೆ ಜಗತ್ತಿನಲ್ಲಿ ಎಲ್ಲಿ ಹೆಚ್ಚು ಲಾಭಗಳು ಸಿಗುತ್ತವೋ ಅಲ್ಲಿ ಅದು ಹೂಡಿಕೆಯಾಗುತ್ತದೆ. ಆದ್ದರಿಂದ ಈ ಬಜೆಟ್ ಜನಗಳಿಗಾಗಿಯೂ ಅಲ್ಲ, ದೇಶದ ಅರ್ಥವ್ಯವಸ್ಥೆಗಾಗಿಯೂ ಅಲ್ಲ.

* **ಎರಡನೆಯ ಅಂಶ: ಲಕ್ಷಾಂತರ ರೈತರು ರಸ್ತೆಗಳಲ್ಲಿ ಪ್ರತಿಭಟನೆಗಳ ನಡುವೆ ಇದ್ದಾರೆ. ಅವರು ಪರಿಹಾರ ಕೇಳುತ್ತಿದ್ದಾರೆ. ಅದರ ಬದಲಿಗೆ, ಸರಕಾರ ಕೊಟ್ಟಿರುವುದು ಗಮನಾರ್ಹ ಕಡಿತಗಳನ್ನೇ.**

ಕೋಟ್ಯಂತರ ರೂ.ಗಳಷ್ಟು ರಸಗೊಬ್ಬರ ಸಬ್ಸಿಡಿಯನ್ನು ಕಡಿತ ಮಾಡುತ್ತಿದೆ; ಆಹಾರ ಸಬ್ಸಿಡಿ ಗಮನಾರ್ಹವಾಗಿ ಕಡಿತವಾಗಿದೆ. ಇದು ರೇಶನ್ ಅಂಗಡಿಗಳನ್ನು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ತಟ್ಟುತ್ತದೆ; ಹಣದುಬ್ಬರ, ಒಟ್ಟು ಬೆಲೆಯೇರಿಕೆ ಇರುವಾಗ ಪೆಟ್ರೋಲ್ ಮತ್ತು ಡೀಸೆಲ್ ಸಬ್ಸಿಡಿಯನ್ನು ಕಡಿಮೆ ಮಾಡಲಾಗಿದೆ; ಹಿಂದಿನ ವರ್ಷದ ಮೂರನೇ ಒಂದು ಭಾಗ ಮಾತ್ರ ಉಳಿದಿದೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಹೆಚ್ಚು ತೆರಿಗೆ ಮತ್ತು ಅದರಿಂದ ಸಂಪತ್ತು ರಾಶಿ ಹಾಕುವ ದಿಕ್ಕಿನಲ್ಲಿ ಸಾಗುತ್ತಿದೆ. ನಿರುದ್ಯೋಗ ಏರುತ್ತಿದೆ, ಆದರೆ ಮನರೇಗ ಬಜೆಟಿನಲ್ಲಿ 42ಶೇ. ಕಡಿತವಾಗುತ್ತದೆ. ಇದರಿಂದ ಮತ್ತಷ್ಟು ನಿರುದ್ಯೋಗ. ಆರೋಗ್ಯ ಬಿಕ್ಕಟ್ಟಿನ ನಡುವೆ ಆರೋಗ್ಯದ ಮೇಲೆ ಬಜೆಟ್ ಕಡಿತವಾಗಿದೆ. ಜನಗಳ ಆಕಾಂಕ್ಷೆಗಳನ್ನು ಹುಸಿಗೊಳಿಸಲಾಗುತ್ತಿದೆ.

* **ಮೂರನೆಯದ್ದು, ಸರಕಾರ ಹೆಚ್ಚು ವೆಚ್ಚ ಮಾಡಿದಾಗಲೇ ಜನಗಳಿಗೆ ಪರಿಹಾರ ಸಿಗಲು ಸಾಧ್ಯ..ಆದರೆ ಒಟ್ಟು ಸರಕಾರೀ ವೆಚ್ಚದಲ್ಲಿ ಸ್ಥಗಿತತೆ ಇದೆ.**

ಸರಕಾರ ಹೆಚ್ಚು ವೆಚ್ಚ ಮಾಡಿದರೆ, ಅರ್ಥ ವ್ಯವಸ್ಥೆಯಲ್ಲಿ ಬೇಡಿಕೆ ನಿರ್ಮಾಣವಾಗುತ್ತದೆ, ಅದರ ಫಲಿತಾಂಶವಾಗಿ ಆರ್ಥಿಕ ಪುನಶ್ಚೇತನ ಉಂಟಾಗುತ್ತದೆ. ಆದರೆ ಒಟ್ಟು ಸರಕಾರೀ ವೆಚ್ಚದಲ್ಲಿ ಸ್ಥಗಿತತೆ ಇದೆ.

ಇದೂ ಅಲ್ಲದೆ, ಹಣಕಾಸು ಕೊರತೆಯಲ್ಲಿ ಹೆಚ್ಚಳ ಸರಕಾರ ಹೆಚ್ಚು ವೆಚ್ಚ ಮಾಡುತ್ತಿದೆ ಎಂಬುದರ ಸಂಕೇತ ಎಂದು ಕಣ್ಣಿಗೆ ಮಣ್ಣೆರಚುತ್ತದೆ. ನಿಜ ಹೇಳಬೇಕೆಂದರೆ, ಹಣಕಾಸು ಕೊರತೆ ಸರಕಾರ ಹೆಚ್ಚು ವೆಚ್ಚ ಮಾಡುತ್ತಿರುವುದರಿಮದಾಗಿ ಅಲ್ಲ, ಬದಲಾಗಿ ರೆವಿನ್ಯೂ ಆದಾಯ ಮುದುಡಿರುವುದರಿಂದಾಗಿ ಆಗಿದೆ. ಹಣದುಬ್ಬರವನ್ನು ಪರಿಗಣನೆಗೆ ತಗೊಂಡರೆ ಸರಕಾರದ ವೆಚ್ಚ ಈ ವರ್ಷ ಕಳೆದ ವರ್ಷಕ್ಕಿಂತ ಬಹಳ ಕಡಿಮೆಯಾಗುತ್ತದೆ. ಆದ್ದರಿಂದ ಆರ್ಥಿಕ ಹಿಂಜರಿತವನ್ನು ಬದಲಿಸುವ ಬದಲು, ಪರಿಸ್ಥಿತಿ ಇನ್ನಷ್ಟು ಹದಗೆಡಬಹುದು. ಕಾರ್ಪೊರೇಟ್ ತೆರಿಗೆಯನ್ನು ಮತ್ತಷ್ಟು ಇಳಿಸಲಾಗಿದೆ. 1ಲಕ್ಷ ಕೋಟಿ ರೂ.ಗಳಷ್ಟು ಕಾರ್ಪೊರೇಟ್ ತೆರಿಗೆ ಸಂಗ್ರಹದಲ್ಲಿ ಇಳಿಕೆಯಾಗಲಿದೆ. ಕಳೆದ ಒಂದು ವರ್ಷದಲ್ಲೇ 100 ಬಿಲಿಯಾಧಿಪತಿಗಳ ಸಂಪತ್ತಿನಲ್ಲಿ 13ಲಕ್ಷ ಕೊಟಿ ರೂ.ಗಳ ಏರಿಕೆಯಾಗಿದೆ. ಆದ್ದರಿಂದ ಈ ಬಜೆಟ್ ಯಾವ ದಿಕ್ಕಿನಲ್ಲಿದೆ ಎಂಬುದು ನಮಗೆ ತಿಳಿದಿದೆ.

* **ನಾಲ್ಕನೆಯ ಅಂಶವೆಂದರೆ, ಬಂಡವಾಳಕ್ಕೆ ಹೆಚ್ಚು ರಿಯಾಯ್ತಿಗಳನ್ನು ಕೊಡುವುದರ ಅರ್ಥ ಹೆಚ್ಚಿನ ಹೂಡಿಕೆ, ಅದರಿಂದಾಗಿ ಹೆಚ್ಚಿನ ಆರ್ಥಿಕ ಬೆಳವಣಿಗೆ ಎಂದು ಸರಕಾರ ಹೇಳುತ್ತಿರುವಾಗಲೇ ಇದೆಲ್ಲವೂ ಸಂಭವಿಸಿದೆ. ಹೆಚ್ಚು ರಿಯಾಯ್ತಿಗಳಿಂದ ಹೆಚ್ಚಿನ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂಬುದು ನಿಜವಲ್ಲ. ಇದು ದೋಷಪೂರಿತ ತರ್ಕ.**

ಹೂಡಿಕೆ ಹೆಚ್ಚಿ ಉತ್ಪಾದನೆ ಹೆಚ್ಚಿದರೂ, ಈ ಉತ್ಪನ್ನಗಳ ಮಾರಾಟವಾಗಲು ಮಾರುಕಟ್ಟೆಯಲ್ಲಿ ಬೇಡಿಕೆ ಇರಬೇಕಾಗುತ್ತದೆ. ಆದರೆ ಅಂತಹ ಬೇಡಿಕೆ ಇಲ್ಲ. ಆದ್ದರಿಂದ ಈ ರೀತಿಯ ಹೂಡಿಕೆ ಜನಗಳ ನಡುವೆ ಅಂತರವನ್ನು ಹೆಚ್ಚಿಸುತ್ತದೆ. ಆದ್ದರಿಂದ ಇದೇನೂ ಅಪೇಕ್ಷಣಿಯ ಮಾದರಿಯಾಗಲಾರದು. ಹೆಚ್ಚಿನ ಸರಕಾರೀ ವೆಚ್ಚ ಎಂದರೆ, ಹೆಚ್ಚಿನ ಉದ್ಯೋಗಾವಕಾಶ ನಿರ್ಮಾಣ ಮತ್ತು ಅದರಿಂದ ಹೆಚ್ಚಿನ ಬೇಡಿಕೆ ನಿರ್ಮಾಣ.

* **ಕೊನೆಯ ಅಂಶ ಒಕ್ಕೂಟ ರಚನೆ ಕುರಿತಾದ್ದು.**

ಕೇಂದ್ರ ಮತ್ತು ರಾಜ್ಯಗಳ ನಡುವೆ ತೆರಿಗೆ ಆದಾಯದ ಹಂಚಿಕೆ ಆಗುತ್ತದೆ. ಉಪಕರ(ಸೆಸ್) ಮತ್ತು ಅಧಿಕರ(ಸರ್ಚಾರ್ಜ್) ಹಂಚಿಕೆ ಇರುವುದಿಲ್ಲ. ಇವು ಕೇಂದ್ರ ಸರಕಾರದ ಬಳಿಯೇ ಉಳಿಯುತ್ತವೆ. ಈ ಬಜೆಟಿನಲ್ಲಿ ಕೃಷಿಯ ಹೆಸರಿನಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಒಂದು ಸೆಸ್ ಹಾಕಲಾಗಿದೆ. ಇದರಿಂದ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಏರುತ್ತವೆ. ಆದರೆ ಪ್ರಧಾನಿಗಳು ಹೇಳುತ್ತಾರೆ, ಅಬಕಾರಿ ಸುಂಕವನ್ನು ಇಳಿಸಲಾಗುತ್ತದೆ. ಇದರ ಅರ್ಥ ರಾಜ್ಯಗಳು ಈ ಬಾಬ್ತಿನಲ್ಲಿ ಪಡೆಯುವ ಆದಾಯ ಕಡಿತಗೊಳ್ಳುತ್ತದೆ. ಇದರಿಂದ ರಾಜ್ಯಗಳ ಪಾಲಿನಲ್ಲಿ ಖೋತಾ ಆಗುತ್ತದೆ. ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರದಲ್ಲಿ ಇಳಿಕೆ 20,000 ಕೋಟಿ ರೂ.ಗಳಿಗಿಂತಲೂ ಹೆಚ್ಚು. ರಾಜ್ಯಗಳಿಗೆ ಸಂಪನ್ಮೂಲಗಳು ಇಲ್ಲದಂತಾಗುತ್ತದೆ. ಇದು ಅವುಗಳ ಹಣಕಾಸನ್ನು ಬಹಳವಾಗಿ ತಟ್ಟುತ್ತದೆ. **ರಾಜ್ಯಗಳು ಭಿಕ್ಷಾಪಾತ್ರೆ ಹಿಡಿದು ಕೇಂದ್ರದ ಬಳಿ ಬರಬೇಕಾಗುತ್ತದೆ. ಇದು ಜನಗಳ ಮತ್ತು ರಾಜ್ಯಗಳ ಘನತೆಗೆ ಕುಂದು ತರುತ್ತದೆ. ಇದು ಬಹಳ ಪ್ರತಿಗಾಮಿ.**

ಒಟ್ಟಾಗಿ, ಇದು ಹಿಂದಕ್ಕೆ ಹೋಗುವ, ಅವನತಿ ತರುವ ಬಜೆಟ್ ಮಾತ್ರವೇ ಅಲ್ಲ, ಒಂದು ನಿರ್ದಯ ಮತ್ತು ಕ್ರಿಮಿನಲ್ ಬಜೆಟ್ ಕೂಡ. ಇದು ಜನಗಳ ಜೀವನಾಧಾರಗಳ ಮೇಲಿನ ಇಬ್ಬಗೆಯ ದಾಳಿಯನ್ನು ಎದುರಿಸುವುದಿಲ್ಲ. ಇದು ನಮ್ಮ ರಾಷ್ಟ್ರೀಯ ಸೊತ್ತುಗಳ ಲೂಟಿ. ಬ್ರಿಟಿಶ್ ಆಳ್ವಿಕೆಯಲ್ಲಿ ಭಾರತದ "ಸಂಪತ್ತನ್ನು ಬರಿದು"ಗೊಳಿಸಲಾಗುತ್ತಿತ್ತು, ಈ ಸರಕಾರದ ಅಡಿಯಲ್ಲಿ ನಮ್ಮ ಸಂಪತ್ತಿನ ಲೂಟಿಯಾಗುತ್ತಿದೆ.



ವ್ಯಂಗ್ಯಚಿತ್ರ ಕೃಪೆ: ಪಂಜು ಗಂಗೊಳ್ಳಿ, ಫೇಸ್‌ಬುಕ್

ಬಜೆಟ್ 2021–22–ಒಂದು ನಿಜಚಿತ್ರ

* ಒಟ್ಟು ಬಜೆಟ್ ವೆಚ್ಚ ವಾಸ್ತವವಾಗಿ ಇಳಿದಿದೆ. 2020–21ರ ಪರಿಷ್ಕೃತ ಅಂದಾಜಿನ ಪ್ರಕಾರ ಇದು ರೂ. 34.5ಲಕ್ಷ ಕೋಟಿ, ಅಂದರೆ ಜಿಡಿಪಿಯ 17.7%; ಈ ಬಜಟಿನಲ್ಲಿ ಅದು ರೂ. 4.83ಕೋಟಿ, ಅಂದರೆ ಜಿಡಿಪಿಯ 15.6%.!

* ಕೊರೊನ ಸೋಂಕು ತಂದ ಸಂಕಟಗಳು ಹೆಚ್ಚುತ್ತಿವೆ, ಆದರೂ ಆರೋಗ್ಯ ಬಜೆಟ್ ಕಳೆದ ವರ್ಷದ ಪರಿಷ್ಕೃತ ಬಜೆಟ್ ಮೊತ್ತ ರೂ. 82,928 ಕೋಟಿಯಿಂದ ರೂ.76,902 ಕೋಟಿಗೆ ಇಳಿದಿದೆ.

* ನಿರುದ್ಯೋಗ ನಾಗಾಲೊಟ ಹೂಡಿದೆ, ಆದರೆ ಮನರೇಗಕ್ಕೆ ಕೊಟ್ಟಿರುವ ಹಣ ಕಳೆದ ವರ್ಷದ ಪರಿಷ್ಕೃತ ಬಜೆಟ್ ಮೊತ್ತ ರೂ. 111,500 ಕೋಟಿಯಿಂದ ರೂ. 73,000 ಕೋಟಿಗೆ ಇಳಿದಿದೆ.

* ರೈತರು ಎರಡು ತಿಂಗಳಿಂದ ಪ್ರತಿಭಟಿಸುತ್ತಿದ್ದರೂ, ಕೃಷಿಗೆ ಕಳೆದ ವರ್ಷದ ಒಟ್ಟು ಬಜೆಟ್ ಅಂದಾಜು ಮೊತ್ತ ರೂ.1,54,775 ಕೋಟಿ , ಈ ಬಾರಿ ರೂ.1,48,301 ಕೋಟಿಗೆ ಇಳಿದಿದೆ.

ಕೃಷಿ ಬೆಲೆ ಬೆಂಬಲ ಸ್ಕೀಮ್‌ಗಳಿಗೆ ಹಣ ನೀಡಿಕೆಯನ್ನು ಕಡಿತ ಮಾಡಲಾಗಿದೆ.

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿಗೆ ರೂ.75,000 ಕೋಟಿಯಿಂದ ರೂ.65,000 ಕೋಟಿಗೆ ಇಳಿದಿದೆ.

ಪ್ರಧಾನ ಮಂತ್ರಿ ಫಸಲ್ ಬಿಮಾಯೋಜನಾಕ್ಕೆ ಕೇವಲ 2% ಮತ್ತು ಮತ್ತು ಕೃಷಿ ಸಿಂಚಾಯಿ ಯೋಜನಾಕ್ಕೆ 4% ಏರಿಕೆಯಾಗಿದೆ. 5% ಹಣದುಬ್ಬರವನ್ನು ಗಂನೆಗೆ ತಗೊಂಡರೆ ವಾಸ್ತವಿಕವಾಗಿ ಇಳಿಕೆಯಾಗಿದೆ


* ಶಿಕ್ಷಣಕ್ಕೆ ಕಳೆದ ಬಜೆಟ್ ಅಂದಾಜು ಮೊತ್ತ ರೂ99,312 ಕೋಟಿ ಇದ್ದದ್ದು ಈ ಬಾರಿ ರೂ. 93,224 ಕೋಟಿಗೆ ಇಳಿದಿದೆ.

* ಅಂಗನವಾಡಿ ಸೇವೆಗಳಿಗೆ ಬಜಟ್ ಹಂಚಿಕೆ ರೂ.20, 532 ಕೊಟಿ ಇತ್ತು. ಈ ಬಾರಿ ಅಂಗನವಾಡಿ ಸೇವೆಗಳು, ಪೋಷನದದ ಅಭಿಯಾನ್, ಹೆಣ್ಣುಮಕ್ಕಳ ಸ್ಕೀಮ್ ಮತ್ತು ರಾಷ್ಟ್ರೀಯ ಶಶುವಿಹಾರ ಸ್ಕೀಮ್ ಗಳನ್ನು ಒಟ್ಟು ಸೇರಿಸಿ 'ಸಕ್ಷಮ್ ಅಂಗನವಾಡಿ ಮತ್ತು ಪೋಷನ್2.0 ' ಎಂದು ಮಾಡಲಾಗಿದೆ. ಇದರ ಒಟ್ಟು ಮೊತ್ತ ರೂ. 24,557 ಕೋಟಿಯಿಂದ ಈ ಬಾರಿ ರೂ.20,105ಕ್ಕೆ ಇಳಿದಿದೆ.

* ಬೇಟಿ ಪಡಾವೊ, ಮಾತೃವಂದನಾ ಮತ್ತು ಲಿಂಗ ಬಜೆಟ್/ಕೌಶಲ್ಯ ತರಬೇತಿ ಇವನ್ನೆಲ್ಲ ಸೇರಿಸಿ 'ಸಾಮರ್ಥ್ಯ'ಎಂದು ಹೊಸ ಹೆಸರಿಡಲಾಗಿದೆ. ಇದಕ್ಕೆ ಕಳೆದ ವರ್ಷ ನೀಡಿದ ಒಟ್ಟು ಹಣ ರೂ. 2,728 ಕೊಟಿ ರೂ. ಈಬಾರಿ ರೂ2,522 ಕೋಟಿಗೆ ಇಳಿದಿದೆ.

* ಲಿಂಗ ಬಜೆಟ್ 2020–21ರ ಪರಿಷ್ಕೃತ ಅಂದಾಜಿನಲ್ಲಿ ರೂ.2.07 ಲಕ್ಷ ಕೋಟಿ ಇದ್ದದ್ದು ಈಗ ರೂ.1.53ಲಕ್ಷ ಕೋಟಿಗೆ ಇಳಿದಿದೆ. ಅಂದರೆ ಜಿಡಿಪಿಯ 1.06%ದಿಂದ 0.4%ಕ್ಕೆ ಇಳಿದಿದೆ.

ಮಕ್ಕಳು ಮತ್ತು ತಾಯಂದಿರ ಸ್ಕೀಮುಗಳ ಬಜೆಟ್ ಕುಂಠಿತ



ನಮಗೆ ನಾವೇ

ಆತ್ಮನಿರ್ಭರ್ ಭಾರತ್ ಮಾತಾಕೀ ಜೈ

ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ಆರೋಗ್ಯ ಬಜೆಟಿನಲ್ಲಿ ನಿರ್ದಯ ವಂಚನೆ

ಎಲ್ಲ ಸಮಸ್ಯೆಗಳಿಗೆ ಖಾಸಗೀಕರಣವೇ ಮದ್ದು ಎಂಬ ಆಳವಾದ ನಂಬಿಕೆಯೇ ಸಾರ್ವಜನಿಕ ಆರೋಗ್ಯ ಕ್ಷೇತ್ರ ಕುರಿತ ಮೋದಿ ಸರಕಾರದ ನಿರ್ದಯ ಧೋರಣೆಗೆ ಕಾರಣವಾಗಿದೆ. ಆರೋಗ್ಯ ಕ್ಷೇತ್ರದಲ್ಲಿ ಸರ್ಕಾರಿ ವೆಚ್ಚವನ್ನು ಜಿಡಿಪಿಯ ಶೇಕಡ 1 ರಿಂದ ಶೇ. 2.5–3ರವರೆಗೆ ಏರಿಸಬೇಕೆಂದು ಆರ್ಥಿಕ ಸಮೀಕ್ಷೆ ಸಲಹೆ ಮಾಡಿತ್ತು. ಆದರೆ ಕೇಂದ್ರ ಸರ್ಕಾರದ ಆರೋಗ್ಯ ಬಜೆಟ್ ಹಂಚಿಕೆ ಈ ನಿಟ್ಟಿನಲ್ಲಿ ಒಂದು ಪ್ರತಿಗಾಮಿ ಹೆಜ್ಜೆಯಾಗಿದೆ. ಸಾರ್ವಜನಿಕ ಆರೋಗ್ಯವನ್ನು ಜನರ ಪ್ರಶ್ನೆಯನ್ನಾಗಿ ಮಾಡಬೇಕಾದುದುರ ಅಗತ್ಯದತ್ತ ಈ ಆರೋಗ್ಯ ಬಜೆಟ್ ಬೆಳಕು ಚೆಲ್ಲುತ್ತದೆ. ಎಲ್ಲ ಪ್ರಜಾಪ್ರಭುತ್ವವಾದಿ ರಾಜಕೀಯ ಶಕ್ತಿಗಳು ತಮ್ಮ ರಾಜಕೀಯ ಅಜೆಂಡಾದಲ್ಲಿ ಇದಕ್ಕೆ ಆದ್ಯತೆ ನೀಡಬೇಕು.

* ಪ್ರಕಾಶ್ ಕಾರಟ್

ಇಡೀ ಜಗತ್ತನ್ನು ತಲ್ಲಣಗೊಳಿಸಿದ ಕೊವಿಡ್–19 ಮಹಾಸೋಂಕು ಭಾರತದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಕೆಟ್ಟ ಮುಖವನ್ನು ಬೆತ್ತಲುಗೊಳಿಸಿದ ನಂತರವಾದರೂ ಸರ್ಕಾರ ಕೆಲವು ಪಾಠಗಳನ್ನು ಕಲಿತೀತು ಎಂದು ಯಾರಾದರೂ ನಿರೀಕ್ಷಿಸಿದ್ದರೆ ಅದು ತಪ್ಪಲ್ಲ. ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ಅತಿ ಕಡಿಮೆ ಖರ್ಚು ಮಾಡುವ ಜಗತ್ತಿನ ಹಲವು ದೇಶಗಳಲ್ಲಿ ಭಾರತವೂ ಒಂದು. 2019ರಲ್ಲಿ ಅದು ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಶೇಕಡ 1.3ನ್ನು ಆರೋಗ್ಯಕ್ಕೆ ವೆಚ್ಚ ಮಾಡಿತ್ತು.

1991ರ ಉದಾರೀಕರಣ ನೀತಿಯೊಂದಿಗೆ ಆರಂಭವಾದ ಆರೋಗ್ಯ ಕ್ಷೇತ್ರದ ಸೇವೆಗಳ ಖಾಸಗೀಕರಣ ಪ್ರಕ್ರಿಯೆಯನ್ನು ಮೋದಿ ಸರಕಾರ ದೊಡ್ಡ ಪ್ರಮಾಣದಲ್ಲಿ ಮುಂದೊತ್ತಿದೆ. ಕಾರ್ಪೊರೇಟ್‌ಗಳು ನಡೆಸುವ ಆಸ್ಪತ್ರೆಗಳು, ಖಾಸಗಿ ನರ್ಸಿಂಗ್ ಹೋಮ್‌ಗಳು, ಕ್ಲಿನಿಕ್‌ಗಳು ಮತ್ತು ಡಯಾಗ್ನಸ್ಟಿಕ್(ರೋಗ ಪರೀಕ್ಷಣಾ) ಕೇಂದ್ರಗಳನ್ನು ಆರೋಗ್ಯ ವ್ಯವಸ್ಥೆಯಲ್ಲಿ ಹುಲುಸಾಗಿ ಬೆಳೆಸಿರುವ ಒಂದು ಆರೋಗ್ಯ ವ್ಯವಸ್ಥೆ ಬೆಳೆದಿದೆ. ಇವುಗಳಲ್ಲಿ ಹೆಚ್ಚಿನವು ಜನಸಾಮಾನ್ಯರ ಕೈಗೆಟುಕದ ಶುಲ್ಕಗಳನ್ನು ವಿಧಿಸಿ ಲಾಭ ಗಳಿಸುವ ಸೂತ್ರದಂತೆ ನಡೆಯುತ್ತಿವೆ. ಇವುಗಳ ಜೊತೆಯಲ್ಲಿ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿವೆ. ಇವಕ್ಕೆ ಸಾಕಷ್ಟು ಹಣ ನೀಡುತ್ತಿಲ್ಲ, ಸಿಬ್ಬಂದಿ ಕೊರತೆ ಕಾಡುತ್ತಿದೆ ಹಾಗೂ ಗುಣಮಟ್ಟವೂ ಕಳಪೆಯಾಗಿದೆ. ಅದರ ಪರಿಣಾಮವಾಗಿ ಜನರು ಒಟ್ಟು ಆರೋಗ್ಯಕ್ಕಾಗಿ ತಮ್ಮ ಆದಾಯಗಳಿಂದಲೇ ಮಾಡಬೇಕಾದ ಒಟ್ಟು ಆಹಾರ ವೆಚ್ಚದಲ್ಲಿ ವೆಚ್ಚದಲ್ಲಿ ಶೇಕಡ 62ರಷ್ಟಾಗಿದ್ದು ಬಡವರು ಹಾಗೂ ಮಧ್ಯಮ ವರ್ಗಗಳ ಜನರ ಮೇಲೆ ಭಾರೀ ಹೊರೆಯಾಗಿದೆ.

ದೇಶ ಅಭೂತಪೂರ್ವ ಕೊವಿಡ್ ಸವಾಲನ್ನು ಎದುರಿಸಿದ್ದು ಇಂಥದ್ದೊಂದು ಆರೋಗ್ಯ ವ್ಯವಸ್ಥೆಯೊಂದಿಗೆ. ಇದುವರೆಗೆ ಕೊವಿಡ್ ಸೋಂಕಿನ ಪ್ರಕರಣಗಳಲ್ಲಿ ಭಾರತ ಜಗತ್ತಿನಲ್ಲೇ ಎರಡನೇ ಸ್ಥಾನದಲ್ಲಿದೆ, ಮತ್ತು ಕರೊನಾ ಸಾವಿನ ಪ್ರಮಾಣದಲ್ಲಿ ಮೂರನೇ ಸ್ಥಾನದಲ್ಲಿದೆ.

ವಿವಿಧ ರಾಜ್ಯಗಳಲ್ಲಿ ಕೊವಿಡ್ ಸಾಂಕ್ರಾಮಿಕತೆ ಶಿಖರಕ್ಕೇರಿದಾಗಲೆಲ್ಲ ಸರ್ಕಾರಿ ಆಸ್ಪತ್ರೆಗಳು ರೋಗಿಗಳಿಂದ ಗಿಜಿಗುಟ್ಟಿದ್ದನ್ನು ನೋಡಿದ್ದೇವೆ. ಆರೋಗ್ಯ ಸಿಬ್ಬಂದಿಗೆ ಅಗತ್ಯವಾದ ಪಿಪಿಇ ಕಿಟ್‌ಗಳಿರಲಿಲ್ಲ, ಸೋಂಕಿತರ ಸಂಪರ್ಕ ಪತ್ತೆಗೆ ಪರಿಣಾಮಕಾರಿ ವ್ಯವಸ್ಥೆಯಿರಲಿಲ್ಲ. ವೈದ್ಯರು, ದಾದಿಯರು ಮತ್ತು ಇತರ ಸರ್ಕಾರಿ ಆಸ್ಪತ್ರೆಗಳಲ್ಲಿನ ಅರೆ–ವೈದ್ಯಕೀಯ ಸಿಬ್ಬಂದಿಗಳ ಉತ್ತಮ ಪ್ರಯತ್ನಗಳ ಹೊರತಾಗಿಯೂ ಹಲವು ವೈಫಲ್ಯಗಳು ಎದ್ದು ಕಂಡವು.

ಕಳೆದ ಒಂದು ತಿಂಗಳಿಂದ ಕೊವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖವಾಗುತ್ತಿದ್ದರೂ ಯುರೋಪ್ ನಲ್ಲಾದಂತೆ ಭಾರತದಲ್ಲೂ ಎರಡನೇ ಅಲೆ ಎದುರಾಗುವ ಭೀತಿ, ಅನುಮಾನ ಉಂಟಾಗಿದೆ.

ಸಾರ್ವಜನಿಕ ಆರೋಗ್ಯ ವಲಯವನ್ನು ನಿರ್ಲಕ್ಷಿಸಲಾಗಿದೆ ಎಂಬ ಕಟು ವಾಸ್ತವವನ್ನು ಒಪ್ಪಿಕೊಳ್ಳುವ ಹಾಗೂ ಅದಕ್ಕೆ ಪರಿಹಾರ ಹುಡುಕುವ ಬದಲು ಮೋದಿ ಸರ್ಕಾರ ಭಾರತದಲ್ಲಿ ವೈರಸ್‌ಅನ್ನು ಭಾರತದಲ್ಲಿ ಹೇಗೆ ಪರಿಣಾಮಕಾರಿಯಾಗಿ ಎದುರಿಸಲಾಯಿತು ಎಂಬ ಸ್ವಯಂ ಬೆನ್ನು ತಟ್ಟಿ ಕೊಳ್ಳುವ ಪ್ರಚಾರದಲ್ಲಿ ಮುಳುಗಿದೆ.

ಆರೋಗ್ಯ ಬಜೆಟಿನಲ್ಲಿ ಕಡಿತ

ಸಾರ್ವಜನಿಕ ಆರೋಗ್ಯದ ಈ ಘೋರ ನಿರ್ಲಕ್ಷ್ಯವನ್ನು ಗುರುತಿಸಲು ಸರಕಾರ ನಿರಾಕರಿಸುತ್ತಿರುವುದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ 2021–22ನೇ ಸಾಲಿನ ಬಜೆಟ್‌ನಲ್ಲಿ ಸ್ಪಷ್ಟವಾಗಿ ಪ್ರತಿಫಲಿಸಿದೆ. ಆದರೂ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಬಜೆಟ್ ಹಣ ನೀಡಿಕೆಯಲ್ಲಿ ಶೇಕಡ 137 ಹೆಚ್ಚಳವಾಗಿದೆ ಎಂಬ ಅಪ್ಪಟ ಮೋಸದ ದಾವೆಯನ್ನು ಅವರು ಮಾಡಿದ್ದಾರೆನ್ನುವುದು ಇನ್ನೂ ಕೊಳಕು ವಿಚಾರವಾಗಿದೆ. ಸತ್ಯದ ತಲೆ ಮೇಲೆ ಹೊಡೆಯುವಂಥ ಇಂಥ ಸುಳ್ಳಿಗೆ ಲೆಕ್ಕವೇ ಇಲ್ಲ ಈ ಸರ್ಕಾರದಲ್ಲಿ.

ಸರ್ಕಾರದ ಹೇಳಿಕೆ ಎಷ್ಟು ಪೊಳ್ಳು ಎಂಬುದನ್ನು ಬಜೆಟ್ ಭಾಷಣದೊಂದಿಗೆ ಒದಗಿಸಿರುವ ಅಡಕಗಳಲ್ಲಿನ ಅಂಕೆ–ಸಂಖ್ಯೆಗಳೇ ಸಾಬೀತುಪಡಿಸುತ್ತವೆ.

2020–21ನೇ ಸಾಲಿನ ಬಜೆಟ್ ಅಂದಾಜಿನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಒಟ್ಟು 69,234 ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿತ್ತು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಆಯುಷ್ ಸಚಿವಾಲಯ ಮತ್ತು ಆರೋಗ್ಯ ಸಂಶೋಧನಾ ಇಲಾಖೆಗೆ ಹಣ ನೀಡಿಕೆಗಳೂ ಅದರಲ್ಲಿ ಸೇರಿವೆ.

ಕೇವಲ ಕೈಚಳಕ

ಪರಿಷ್ಕೃತ ಅಂದಾಜಿನ ಪ್ರಕಾರ, 2020–21ರ ಈ ಬಾಬ್ತುಗಳಲ್ಲಿ ನಿಜವಾದ ಖರ್ಚು 85,250 ಕೋಟಿ ರೂಪಾಯಿ.

ಆದರೆ, 2021–22ನೇ ಸಾಲಿನ ಆಯವ್ಯಯ ಪತ್ರದಲ್ಲಿ ಈ ಬಾಬ್ತುಗಳಿಗೆ ನಿಗದಿ ಪಡಿಸಿರುವುದು ಒಟ್ಟು 76,907 ಕೋಟಿ ರೂಪಾಯಿ. ಅಂದರೆ, ಆರೋಗ್ಯ ಕ್ಷೇತ್ರಕ್ಕೆ ಕಳೆದ ವರ್ಷ ವೆಚ್ಚ ಮಾಡಿದ್ದಕ್ಕಿಂತ ಈ ಬಾರಿ ಶೇಕಡ 11ರಷ್ಟು ಹಣ ಕಡಿಮೆಯಾಗಿದೆ ಎಂದೇ ಇದರ ಅರ್ಥವಾಗಿದೆ.

"ಆರೋಗ್ಯ ಮತ್ತು ಯೋಗಕ್ಷೇಮಕ್ಕೆ" 2,23,846 ಕೋಟಿ ರೂಪಾಯಿಗಳ ಭಾರೀ ಮೊತ್ತವನ್ನು ಒದಗಿಸಲಾಗಿದೆ ಎಂಬ ಅಬ್ಬರದ ಹೇಳಿಕೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಮೋದಿ ಸರ್ಕಾರದ ಕೈಚಳಕ ಅನಾವರಣಗೊಳ್ಳುತ್ತದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಆಯುಷ್ ಹಾಗೂ ಆರೋಗ್ಯ ಸಂಶೋಧನಾ ವಲಯಕ್ಕೆ ಒದಗಿಸಿರುವ ಮೊತ್ತಗಳಿಗೆ ಕುಡಿಯುವ ನೀರು ಹಾಗೂ ನೈರ್ಮಲ್ಯದ 60,000 ಕೋಟಿ ರೂಪಾಯಿ ನೀಡಿಕೆಯನ್ನು ಕೂಡ ಸೇರಿಸಲಾಗಿದೆ. ಹಣಕಾಸು ಆಯೋಗವು ನೀರು ಮತ್ತು ನೈರ್ಮಲ್ಯಕ್ಕೆ ಒದಗಿಸಿದ 36,000 ಕೋಟಿ ರೂ. ಹಾಗೂ ಪೌಷ್ಟಿಕತೆಗೆ ಕೊಟ್ಟ 2,700 ಕೋಟಿ ರೂಪಾಯಿ ಅನುದಾನಗಳನ್ನು ಕೂಡ ಇದಕ್ಕೆ ಸೇರಿಸಿ ಗಾತ್ರವನ್ನು ಹಿಗ್ಗಿಸಿ ತೋರಿಸಲಾಗಿದೆ. ಪೌಷ್ಟಿಕತೆಗೆ ನಿಗದಿ ಮಾಡಿರುವ ಮೊತ್ತ ಕೂಡ ಕಳೆದ ವರ್ಷದ್ದಕ್ಕಿಂತ ಶೇಕಡ 30 ಕಡಿಮೆಯಾಗಿದೆ ಎನ್ನುವುದು ಗಮನಾರ್ಹ.

ಲಸಿಕೀಕರಣಕ್ಕೆ ಕೊಟ್ಟಿರುವ ಹಣ

ಇದಲ್ಲದೆ ಆರೋಗ್ಯ ಕ್ಷೇತ್ರಕ್ಕೆ ಹಣಕಾಸು ಆಯೋಗ ಕೊಡಬೇಕಿದ್ದ 13,192 ಕೋಟಿ ರೂಪಾಯಿ ಅನುದಾನ ಮತ್ತು ಲಸಿಕೆಗಳಿಗೆಂದೇ ಪ್ರತ್ಯೇಕವಾಗಿ ನಿಗದಿಪಡಿಸಿದ 35,000 ಕೋಟಿ ರೂಪಾಯಿಗಳು ಕೂಡ ಇದರಲ್ಲಿ ಸೇರ್ಪಡೆಯಾಗಿದೆ. ಸಾಗಾಟ, ಸಂಗ್ರಹ ಮತ್ತು ಲಸಿಕೆ ಹಾಕಲು ಬಳಸುವ ಇತರ ವಸ್ತುಗಳ ವೆಚ್ಚವನ್ನು ಪರಿಗಣನೆಗೆ ತೆಗೆದುಕೊಳ್ಳದಿದ್ದರೆ ಈ ಹಣದಿಂದ ಸುಮಾರು 70 ಕೋಟಿ ಜನರಿಗೆ ಲಸಿಕೆ ಹಾಕಬಹುದಾಗಿದೆ. ಈ ಎಲ್ಲ ವೆಚ್ಚಗಳನ್ನು ಸೇರಿಸಿದರೆ ಆ ಹಣದಲ್ಲಿ ಕೇವಲ 40 ಕೋಟಿ ಜನರಿಗೆ ಲಸಿಕೆ ಹಾಕಬಹುದು. ರಾಜ್ಯಗಳೊಂದಿಗೆ ವೆಚ್ಚವನ್ನು ಹೇಗೆ ಹಂಚಿಕೊಳ್ಳಲಾಗುತ್ತದೆ ಎಂಬ ಬಗ್ಗೆ ಕೇಂದ್ರ ಸರ್ಕಾರದ ಧೋರಣೆ ಅಪಾರದರ್ಶಕವಾಗಿದೆ. ಏನೇ ಇರಲಿ, ಉಚಿತ ಸಾರ್ವತ್ರಿಕ ಲಸಿಕೀಕರಣಕ್ಕೆ ಸರ್ಕಾರ ಹಣ ತೆಗೆದಿರಿಸಿಲ್ಲ ಎನ್ನುವುದನ್ನು ಇದು ಸೂಚಿಸುತ್ತದೆ.

"ಆತ್ಮನಿರ್ಭರ್ ಸ್ವಾಸ್ಥ್ಯ ಭಾರತ್ ಯೋಜನಾ" ಎಂಬ ಕೇಂದ್ರ ಪ್ರಾಯೋಜಿತ ಹೊಸ ಯೋಜನೆಯೊಂದನ್ನು ಪ್ರಕಟಿಸಿರುವುದು ಬಜೆಟ್‌ನಲ್ಲಿ ಆರೋಗ್ಯ ವಲಯದ ಮತ್ತೊಂದು ಅಂಶವಾಗಿದೆ. ರಾಷ್ಟ್ರೀಯ ಆರೋಗ್ಯ ಮಿಷನ್ ಬಜೆಟ್‌ಗೆ ಹೆಚ್ಚುವರಿಯಾಗಿ ಮುಂದಿನ ಆರು ವರ್ಷಗಳಲ್ಲಿ 64,180 ಕೋಟಿ ರೂಪಾಯಿ ವೆಚ್ಚ ಮಾಡುವುದು ಈ ಯೋಜನೆಯ ಗುರಿಯಾಗಿದೆ. ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಮಟ್ಟಗಳ ಆರೋಗ್ಯ ವ್ಯವಸ್ಥೆಗಳ ಸಾಮರ್ಥ್ಯವನ್ನು ಬೆಳೆಸುವುದು, ವೈದ್ಯಕೀಯ, ಸಂಶೋಧನೆ, ಪ್ರಯೋಗಾಲಯಗಳು ಮತ್ತಿತರ ಸಾರ್ವಜನಿಕ ಆರೋಗ್ಯ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸುವ ಗುರಿಯನ್ನು ಈ ಯೋಜನೆ ಹೊಂದಿದೆ. .

ಆದರೆ, ಈ ಯೋಜನೆಗಾಗಿ ಬಜೆಟ್‌ನಲ್ಲಿ ಪ್ರತ್ಯೇಕವಾಗಿ ಹಣ ನೀಡಿಕೆ ಮಾಡಿಲ್ಲ. ಇದೊಂದು ಕೇವಲ ಘೋಷಣೆಯಾಗಿದ್ದು ಪ್ರಸಕ್ತ ಹಣಕಾಸು ವರ್ಷದಲ್ಲಂತೂ ಅದರ ಅನುಷ್ಠಾನದ ಮಾತಿಲ್ಲ.

ಖಾಸಗೀಕರಣದ ಮಂತ್ರ

ಎಲ್ಲ ಸಮಸ್ಯೆಗಳಿಗೆ ಖಾಸಗೀಕರಣವೇ ಮದ್ದು ಎಂಬ ಆಳವಾದ ನಂಬಿಕೆಯೇ ಸಾರ್ವಜನಿಕ ಆರೋಗ್ಯ ಕ್ಷೇತ್ರ ಕುರಿತ ಈ ನಿರ್ದಯ ಧೋರಣೆಗೆ ಕಾರಣವಾಗಿದೆ. ಸಾರ್ವಜನಿಕ ಕ್ಷೇತ್ರದ ಉದ್ಯಮಗಳು ಮತ್ತು ಹಣಕಾಸು ಸಂಸ್ಥೆಗಳ ಭಾರೀ ಪ್ರಮಾಣದಲ್ಲಿ ಖಾಸಗೀಕರಣವನ್ನು ಹೆಚ್ಚಿಸುವ ಬಜೆಟ್‌ನ ದೃಷ್ಟಿಕೋನವೇ ಆರೋಗ್ಯ ಕ್ಷೇತ್ರದ ವಿಚಾರದಲ್ಲೂ ಢಾಳಾಗಿ ಕಂಡು ಬರುತ್ತದೆ.

ಆರೋಗ್ಯ ಕ್ಷೇತ್ರದಲ್ಲಿ ಸರ್ಕಾರಿ ವೆಚ್ಚವನ್ನು ಜಿಡಿಪಿಯ ಶೇಕಡ 1 ರಿಂದ ಶೇ. 2.5–3ರವರೆಗೆ ಏರಿಸಬೇಕೆಂದು ಆರ್ಥಿಕ ಸಮೀಕ್ಷೆ ಸಲಹೆ ಮಾಡಿತ್ತು. ಆದರೆ ಕೇಂದ್ರ ಸರ್ಕಾರದ ಆರೋಗ್ಯ ಬಜೆಟ್ ನೀಡಿಕೆ ಈ ನಿಟ್ಟಿನಲ್ಲಿ ಒಂದು ಪ್ರತಿಗಾಮಿ ಹೆಜ್ಜೆಯಾಗಿದೆ.

ಸಾರ್ವಜನಿಕ ಆರೋಗ್ಯವನ್ನು ಜನರ ಪ್ರಶ್ನೆಯನ್ನಾಗಿ ಮಾಡಬೇಕಾದುದುರ ಅಗತ್ಯದತ್ತ ಈ ಆರೋಗ್ಯ ಬಜೆಟ್ ಬೆಳಕು ಚೆಲ್ಲುತ್ತದೆ. ಎಲ್ಲ ಪ್ರಜಾಪ್ರಭುತ್ವವಾದಿ ರಾಜಕೀಯ ಶಕ್ತಿಗಳು ತಮ್ಮ ರಾಜಕೀಯ ಅಜೆಂಡಾದಲ್ಲಿ ಇದಕ್ಕೆ ಆದ್ಯತೆ ನೀಡಬೇಕು.

ಅನು: ವಿಶ್ವ

ಕೈಚಳಕದ ವಿವರ



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್

ಸಚಿವಾಲಯ/ಇಲಾಖೆ	2020–21ರ ಬಜೆಟ್‌ನಲ್ಲಿ	2021–22ರ ಬಜೆಟಿನಲ್ಲಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ	65,012	71,269
ಆರೋಗ್ಯ ಸಂಶೋಧನೆ	2,100	2,663
ಆಯುಷ್ ಸಚಿವಾಲಯ	2,122	2,970
ಒಟ್ಟು	**69,234** *	**76,902**
ಕೊವಿಡ್‌ಸಂಬಂಧಿತ ವಿಶೇಷ ಹಂಚಿಕೆ		
ಕುಡಿಯುವ ನೀರು ಮತ್ತು ನೈರ್ಮಲ್ಯ	21,518	60,030
ಪೌಷ್ಟಿಕತೆ	3,700	2,700
ಒಟ್ಟು	**94,452**	**1,39,632**
ಲಸಿಕೀಕರಣ		35,000
ನೀರು ಮತ್ತು ನೈರ್ಮಲ್ಯಕ್ಕೆ ಹಣಕಾಸು ಅಯೋಗದ ಅನುದಾನ	–	36,022
ಆರೋಗ್ಯಕ್ಕೆ ಹಣಕಾಸು ಅಯೋಗದ ಅನುದಾನ		13,192
ಒಟ್ಟು	**94,452**	**2,23,846**

1.ಜಾಗತಿಕವಾಗಿ ಆರೋಗ್ಯ ಲೆಕ್ಕಾಚಾರದ ವಿಧಾನ (ಎಸ್.ಹೆಚ್.ಎ.)ದ ಚೌಕಟ್ಟಿನ ಪ್ರಕಾರ ಪೌಷ್ಟಿಕತೆ, ನೀರು ಪೂರೈಕೆ ಮತ್ತು ನೈರ್ಮಲ್ಯವನ್ನು ಆರೋಗ್ಯಪಾಲನೆ ವೆಚ್ಚ ಎಂದು ಪರಿಗಣಿಸಲಾಗುವುದಿಲ್ಲ. ಭಾರತದಲ್ಲೂ ಇದುವರೆಗಿನ ಹಣಕಾಸು ಮಂತ್ರಿಗಳೂ ಇದೇ ವಿಧಾನವನ್ನು ಬಳಸುತ್ತ ಬಂದಿದ್ದಾರೆ. ಅಪ್ರಕಾರ ಆರೋಗ್ಯವೆಚ್ಚದಲ್ಲಿ ಆಗಿರುವ ಹೆಚ್ಚಳ ಕೇವಲ 11%. ವಾಸ್ತವವಾಗಿ 2020–21ರ ಪರಿಷ್ಕೃತ ಅಂದಾಜು 82928 ಕೋಟಿ ರೂ. ಅಂದರೆ 7% ಇಳಿಕೆಯಾಗಿದೆ.

2. ಈ ಬಜೆಟಿನಲ್ಲಿ ಪೌಷ್ಟಿಕತೆ, ನೀರು ಪೂರೈಕೆ ಮತ್ತು ನೈರ್ಮಲ್ಯವನ್ನು ಸೇರಿಸಿದ್ದಲ್ಲದೆ ಲಸಿಕೀಕರಣದ ವೆಚ್ಚವನ್ನು, ಜತೆಗೆ ಹಣಕಾಸು ಆಯೋಗದ ಅನುದಾನಗಳನ್ನೂ (ಒಟ್ಟು 49,212 ಕೋಟಿ) ಸೇರಿಸಲಾಗಿದೆ. ವಾಸ್ತವವಾಗಿ ಇದು ಕೇಂದ್ರ ಸರಕಾರದ ವೆಚ್ಚ ಎಂದು ಪರಿಗಣಿಸಲ್ಪಡುವುದಿಲ್ಲ.

3. ಇವನ್ನು ಬಿಟ್ಟರೆ ಹೆಚ್ಚಳದ ಪ್ರಮಾಣ 48% ಆಗುತ್ತದೆ.ಇದರಲ್ಲಿ ಬಹುಪಾಲು ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ನೀಡಿದ ಸುಮಾರು 39,000 ಕೋಟಿ ರೂ. ಅಂದರೆ 179% ಹೆಚ್ಚಳವನ್ನು ಬಿಟ್ಟರೆ ಒಟ್ಟು ಹೆಚ್ಚಳ ಕೇವಲ 7%ಕ್ಕೆ ಇಳಿಯುತ್ತದೆ!

4.ಪೌಷ್ಟಿಕತೆಗೆ 27%ಇಳಿಕೆಯಾಗಿರುವುದನ್ನು ಇಲ್ಲಿ ಗಮನಿಸಬಹುದು.

ರೈತರ ಬೇಡಿಕೆಗಳಿಗೆ ದ್ರೋಹ – ಎಐಕೆಎಸ್

ಪುಟ 7 ರಿಂದ

ಹಂಚಿಕೆಯನ್ನು ಮಾಡಲಾಯಿತು, ಆದರೆ ನಿಜವಾದ ಖರ್ಚು ಕೇವಲ 65,000 ಕೋಟಿ ರೂ. ಲಾಕ್ ಡೌನ್ ಅವಧಿಯಲ್ಲಿ ರೈತರಿಗೆ ಸಹಾಯ ಮಾಡಲು ಪಿಎಂ–ಕಿಸಾನ್ ಯೋಜನೆಯನ್ನು ಬಳಸಿದೆ ಎಂಬ ಸರ್ಕಾರದ ದಾವೆಯ ಟೊಳ್ಳುತನವನ್ನು ಇದು ತೋರಿಸುತ್ತದೆ. ಇದಲ್ಲದೆ, 2021–22ಕ್ಕೂ ಕೇವಲ 65,000 ಕೋಟಿ ರೂ. ನೀಡಲಾಗಿದೆ.

• ಇನ್ನೊಂದು ಉದಾಹರಣೆ ನೀಡಬೇಕಾದರೆ, ಪ್ರಧಾನ ಮಂತ್ರಿ ಕೃಷಿ ನೀರಾವರಿ ಯೋಜನೆ(ಪಿಎಂ–ಕೆಎಸ್‌ವೈ)ಯಲ್ಲಿ, 2019–20ರಲ್ಲಿ ನಿಜವಾದ ಖರ್ಚು 2700 ಕೋಟಿ ರೂ. ಮತ್ತು 2020–21ರ ಬಜೆಟ್ ವೆಚ್ಚ 4000 ಕೋಟಿ ರೂ. ಆದರೆ 2020–21ರಲ್ಲಿ ನಿಜವಾದ ಖರ್ಚು ಮಾಡಿದ್ದು 2563 ಕೋಟಿ ರೂ., ಅಂದರೆ 2019–20ರಲ್ಲಿ ನಿಜವಾದ ಖರ್ಚುಗಿಂತಲೂ ಕಡಿಮೆಯಾಗಿದೆ.

ಎಂ.ಎಸ್.ಪಿ.–ಸುಳ್ಳುಗಳ ಮುಂದುವರಿಕೆ

ಈಗಾಗಲೇ ಉತ್ಪಾದನಾ ವೆಚ್ಚಕ್ಕಿಂತ 50% ಹೆಚ್ಚಿರುವ ಕನಿಷ್ಟ ಬೆಂಬಲ ಬೆಲೆ(ಎಂ.ಎಸ್.ಪಿ.)ಗಳನ್ನು ಕೊಡಲಾಗುತ್ತಿದೆ ಎಂಬ ಸುಳ್ಳನ್ನು ಹೇಳುವುದನ್ನು ಹಣಕಾಸು ಸಚಿವರು ಮುಂದುವರಿಸಿದ್ದಾರೆ. ಸತ್ಯ ಏನೆಂದರೆ, ಸರ್ಕಾರವು ಎ 2 + ಎಫ್‌ಎಲ್ ವೆಚ್ಚವನ್ನು ಉತ್ಪಾದನಾ ವೆಚ್ಚವೆಂದು ಪರಿಗಣಿಸುತ್ತದೆ. ಆದರೆ ಸ್ವಾಮಿನಾಥನ್ ಆಯೋಗ ಶಿಫಾರಸು ಮಾಡಿರುವುದು ಎಫ್‌ಎಲ್ ವೆಚ್ಚವನ್ನು ಅಲ್ಲ, ಸಿ 2 ವೆಚ್ಚವನ್ನು. ಭಾರತದಲ್ಲಿ ಬಹುಪಾಲು ರೈತರು ಇನ್ನೂ ಸರಕಾರದ ಬೆಳೆ ಖರೀದಿ ವ್ಯವಸ್ಥೆಯಿಂದ ಹೊರಗಿದ್ದಾರೆ, ಅವರಿಗೆ ಈ ಎಂ.ಎಸ್.ಪಿ.ಗಳು ಕೂಡ ಲಭ್ಯವಿಲ್ಲ. ಇದನ್ನು ಲಭ್ಯಗೊಳಿಸುವುದು ಹೇಗೆ ಎಂಬುದರ ಕುರಿತು ಯಾವುದೇ ಯೋಜನೆಯನ್ನು ಸರ್ಕಾರ ಘೋಷಿಸಿಲ್ಲ. ವಾಸ್ತವವಾಗಿ, ಹಣಕಾಸು ಸಚಿವರು ಕಳೆದ ವರ್ಷದ ಬಜೆಟ್ ಭಾಷಣದಲ್ಲಿ ಕಳೆದ ವರ್ಷದ ಖರೀದಿಯನ್ನು 2013–14ರ ಖರೀದಿಯೊಂದಿಗೆ ಹೋಲಿಸುವ ಮೂಲಕ ದಾರಿತಪ್ಪಿಸಲು ಪ್ರಯತ್ನಿಸಿದ್ದರು. ಏಕೆಂದರೆ 2013–14ರಲ್ಲಿ ಬಹಿರಂಗ ಮಾರುಕಟ್ಟೆ ಬೆಲೆಗಳು ಅನೇಕ ಬೆಳೆಗಳಿಗೆ ಎಂಎಸ್‌ಪಿಗಿಂತ ಹೆಚ್ಚಾಗಿತ್ತು, ಆದರಿಂದಾಗಿ ರೈತರು ಅವನ್ನು ಸರ್ಕಾರಕ್ಕೆ ಮಾರಾಟ ಮಾಡುವ ಅಗತ್ಯವಿರಲಿಲ್ಲ.. 2020–21ರಲ್ಲಿ ಕೇವಲ 1.54 ಕೋಟಿ ರೈತರು ಮಾತ್ರ ಭತ್ತ ಮತ್ತು ಗೋಧಿಗಾಗಿ ಎಂಎಸ್‌ಪಿಗಳಿಂದ ಲಾಭ ಪಡೆದಿದ್ದಾರೆ ಎಂದು ಸ್ವತಃ ಹಣಕಾಸು ಸಚಿವರು ಹೇಳಿದ್ದಾರೆ. ಈ ಮೂಲಕ ಎಂ.ಎಸ್.ಪಿ. ಆಧಾರಿತ ಸರಕಾರೀ ಖರೀದಿಯಿಂದ ಬಹುಪಾಲು ರೈತರಿಗೆ ಪ್ರಯೋಜನವಾಗಿಲ್ಲ ಎಂದು ಅವರು ಒಪ್ಪಿಕೊಂಡಂತಾಗಿದೆ. ವಾಸ್ತವವಾಗಿ, ಇಂತಹ ಖರೀದಿಯನ್ನು ಕಡಿಮೆ ಮಾಡುವುದು ಅದರ ಮಧ್ಯಮ–ಅವಧಿಯ ಯೋಜನೆಯಾಗಿದೆ ಎಂಬುದು ಮೂರು ಕೃಷಿ ಕಾಯ್ದೆಗಳನ್ನು ಅನುಷ್ಠಾನಗೊಳಿಸಬೇಕೆಂಬ ಅದರ ಒತ್ತಾಯದಲ್ಲಿ ಗೋಚರಿಸುತ್ತದೆ ಎಂದು ಎ.ಐ.ಕೆ.ಎಸ್. ಹೇಳಿದೆ.

ಆಹಾರ ಸಬ್ಸಿಡಿ ಹೆಚ್ಚಳವೆಂಬ ಮತ್ತೊಂದು ಭ್ರಾಂತಿ

ಆಹಾರ ಸಬ್ಸಿಡಿಯನ್ನು ಹೆಚ್ಚಿಸಲಾಗಿದೆ ಎನ್ನುವುದು ಕೇವಲ ಭ್ರಾಂತಿಯಾಗಿದೆ. ಏಕೆಂದರೆ, ಕಳೆದ ಕೆಲವು ವರ್ಷಗಳಿಂದ ಸರ್ಕಾರವು ಭಾರತ ಆಹಾರ ನಿಗಮ(ಎಫ್.ಸಿ.ಐ)ಕ್ಕೆ ರೈತರಿಂದ ಖರೀದಿಗೆ ಕೊಡಬೇಕಾದ ಬಾಕಿ ಪಾವತಿಸಿಲ್ಲ, ಅದರಿಂದಾಗಿ 'ರಾಷ್ಟ್ರೀಯ ಸಣ್ಣ ಉಳಿತಾಯಗಳ ನಿಧಿ'(ಎನ್‌ಎಸ್‌ಎಸ್‌ಎಫ್)ಯಿಂದ ಹೆಚ್ಚಿನ ಬಡ್ಡಿ ತೆತ್ತು ಸಾಲವನ್ನು ಪಡೆಯುವಂತೆ ಎಫ್.ಸಿ.ಐ.ಯನ್ನು ಬಲವಂತ ಮಾಡಿತ್ತು. ಎಫ್.ಸಿ.ಐ.ಗೆ ಸಾಲದ ಹೊರೆ ಹಾಕಬಾರದು ಎಂಬ ಆಶಯವನ್ನು ಬಜೆಟ್ ಪ್ರಕಟಿಸಿರುವುದೇನೋ ಸ್ವಾಗತಾರ್ಹ, ಆದರೆ ಎಫ್‌ಸಿಐಗೆ ಪಾವತಿಸಬೇಕಾದ ಹಿಂದಿನ ಬಾಕಿಗಳ ಬಗ್ಗೆ ಅದು ಮೌನವಾಗಿದೆ. ಈ ಬಾಕಿಗಳನ್ನು ಪಾವತಿಸದಿದ್ದರೆ, ಎಫ್.ಸಿ.ಐ.ನ ಹಣಕಾಸು ಸಾಮರ್ಥ್ಯದ ಮೇಲೆ ಒತ್ತಡ ಮುಂದುವರೆಯುತ್ತದೆ ಎಂದಿರುವ ಎ.ಐ.ಕೆ.ಎಸ್. 2021–22ರಲ್ಲಿ ಈ ಬಾಧ್ಯತೆಯನ್ನು ಸರ್ಕಾರ ಪೂರೈಸುತ್ತದೆಯೇ ಎಂದು ಸಹ ನೋಡಬೇಕಾಗಿದೆ ಎಂದಿದೆ.

ಹೆಚ್ಚಿನ ಖಾಸಗೀಕರಣದ ಮಾರ್ಗ–ನಕಾಶೆಯನ್ನು ಕೊಟ್ಟಿದೆ, ಅದಕ್ಕೆ 'ನಗದೀಕರಣ'(monetisation) ಎಂಬ ವೇಷ ತೊಡಿಸಿದೆ. ಇದು ಎನ್.ಎ.ಎಫ್.ಇ.ಡಿ. (ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಒಕ್ಕೂಟ) ನಡೆಸುವ ದಾಸ್ತಾನು ಮಳಿಗೆಗಳೂ ಸೇರಿದಂತೆ ಸಾರ್ವಜನಿಕ ಮೂಲಸೌಕರ್ಯಗಳ ಖಾಸಗೀಕರಣವನ್ನು ಒಳಗೊಂಡಿದೆ. ಇದು ಹಗೇವುಗಳನ್ನು ನಿರ್ಮಿಸಲು ಮತ್ತು ನಿರ್ವಹಿಸಲು ಭಾರತದ ಆಹಾರ ನಿಗಮ ಮತ್ತು ಅದಾನಿ ಲಾಜಿಸ್ಟಿಕ್ಸ್ ನಡುವೆ ಈಗಾಗಲೇ ಅಸ್ತಿತ್ವದಲ್ಲಿರುವ ಒಪ್ಪಂದಗಳ ಮುಂದುವರಿಕೆಯಾಗಿ ಬರುತ್ತಿದೆ.. ಇದಲ್ಲದೆ, ಕೇಂದ್ರ ಸರ್ಕಾರವು 'ಆಪರೇಷನ್ ಗ್ರೀನ್ಸ್' ಯೋಜನೆಯನ್ನು 22 ಬೇಗ ಕೆಟ್ಟು ಹೋಗುವ ಸರಕುಗಳಿಗೆ ವಿಸ್ತರಿಸುವುದಾಗಿ ಘೋಷಿಸಿದೆ. ಕೃಷಿ–ಸಾಗಾಟವನ್ನು ಉತ್ತೇಜಿಸಲು ಈ ಯೋಜನೆಯು ಸಾಲ ನೆರವುಗಳನ್ನು ಒದಗಿಸುತ್ತದೆ, ಇದನ್ನು ಪ್ರಸ್ತುತ ಬಹುಪಾಲು ದೊಡ್ಡ ಕೃಷಿ ಆಧಾರಿತ ಕಂಪನಿಗಳೇ ನಿಯಂತ್ರಿಸುತ್ತವೆ. ಆದ್ದರಿಂದ ಈ ಕೇಂದ್ರ ಬಜೆಟ್ ಒದಗಿಸುತ್ತಿರುವುದು ಕೃಷಿ–ವ್ಯಾಪಾರಸ್ಥರ ನೇತೃತ್ವದ ಮೂಲಸೌಕರ್ಯ ಅಭಿವೃದ್ಧಿಯ ಕಣ್ಣೋಟವನ್ನೇ ಎಂದು ಎ.ಐ.ಕೆ.ಎಸ್. ವಿಶ್ಲೇಷಿಸಿದೆ.

ಮೂಲರಚನೆ ಅಭಿವೃದ್ಧಿ–ಸುಳ್ಳು ದಾವೆ

ಬಜೆಟ್ ಭಾಷಣವು ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತಿರುವುದಾಗಿ ಹೇಳಿಕೊಂಡಿದೆ. ಆದರೆ ಇದು ಕೂಡ ಒಂದು ಟೊಳ್ಳು ದಾವೆ ಎಂದು ಎ.ಐ.ಕೆ.ಎಸ್. ಟೀಕಿಸಿದೆ. ಪ್ರಧಾನ್ ಮಂತ್ರಿ ಗ್ರಾಮ ಸಡಕ್ ಯೋಜನಾ(ಗ್ರಾಮೀಣ ರಸ್ತೆ ಯೋಜನೆ) ಅಥವಾ ಗ್ರಾಮೀಣ ಪ್ರದೇಶಗಳಲ್ಲಿ ಪ್ರಧಾನ್ ಮಂತ್ರಿ ಆವಾಸ್ ಯೋಜನಾ(ಗೃಹ ಯೋಜನೆ)ಗಾಗಿ ನಿಜವಾದ ಬಜೆಟ್ ಹಂಚಿಕೆಗಳು ಈಗ ಸುಮಾರು ಎರಡು ವರ್ಷಗಳಿಂದ ಸ್ಥಗಿತವಾಗಿದ್ದು, ಹೆಚ್ಚಳವಾಗುತ್ತಿಲ್ಲ. ಖಾಸಗಿ ಸಹಭಾಗಿತ್ವದ ಮೂಲಕ ದೊಡ್ಡ ಪ್ರಮಾಣದ ಮೂಲಸೌಕರ್ಯ ಯೋಜನೆಗಳ ಮೇಲೆ ಗಮನ ಕೇಂದ್ರೀಕರಿಸುವುದರಿಂದ ಕೃಷಿ ಭೂಮಿಯನ್ನು ದೊಡ್ಡ ಪ್ರಮಾಣದಲ್ಲಿ ಭೂಸ್ವಾಧೀನಗೊಳಿಸುವ ಅಗತ್ಯ ಬರುತ್ತದೆ. ಆದರೆ ಭೂಸ್ವಾಧೀನ ಮತ್ತು ಪರಿಹಾರದ ಬಗ್ಗೆ ಬಜೆಟ್ ಮೌನವಾಗಿದೆ!

ಮನರೇಗಾದ ಬಗ್ಗೆ ಮೌನ

ಸಿ.ಎಮ್.ಐ.ಇ. ಸರ್ವೆ ಪ್ರಕಾರ 2020 ರ ಡಿಸೆಂಬರ್‌ನಲ್ಲಿಯೂ ಸಹ ಗ್ರಾಮೀಣ ಭಾರತದ ನಿರುದ್ಯೋಗ ಶೇಕಡಾ 9 ರಷ್ಟಿತ್ತು. ಆದರೂ ಹಣಕಾಸು ಸಚಿವರ ಭಾಷಣದಲ್ಲಿ ಮನರೇಗಾದ ಬಗ್ಗೆ ಒಂದೇ ಒಂದು ಉಲ್ಲೇಖ ಇರಲಿಲ್ಲ ಎಂಬುದು ಅಕ್ಷಮ್ಯ ಎಂದು ಎ.ಐ.ಕೆ.ಎಸ್. ಹೇಳಿದೆ. ಈ ಯೋಜನೆಯು ಗ್ರಾಮೀಣ ಬಡವರಿಗೆ ಮತ್ತು ಲಾಕ್‌ಡೌನಿನಿಂದಾಗಿ ತಂತಮ್ಮ ಊರುಗಳಿಗೆ ಮರಳಿದ ವಲಸೆ ಕಾರ್ಮಿಕರಿಗೂ ಅತ್ಯಗತ್ಯ ಜೀವಸೆಲೆ ಎಂದು ಸಾಬೀತಾಗಿದೆ. ಆದರೂ ಇದಕ್ಕೆ ಈ ಬಜೆಟಿನಲ್ಲಿ 2020–21ರ ಪರಿಷ್ಕೃತ ಅಂದಾಜುಗಳಿಗೆ ಹೋಲಿಸಿದರೆ ಶೇಕಡಾ 34 ರಷ್ಟು ಗಮನಾರ್ಹವಾಗಿ ಕಡಿತ ಮಾಡಲಾಗಿದೆ. ವಾಸ್ತವವಾಗಿ, ನಾವು 2019–20ರಲ್ಲಿನ ನಿಜವಾದ ವೆಚ್ಚವನ್ನು(71686 ಕೋಟಿ ರೂ.) 2021–22ರ ಬಜೆಟ್ ವೆಚ್ಚದೊಂದಿಗೆ (73000 ಕೋಟಿ ರೂ.) ಹೋಲಿಸಿದರೆ, ನಿಜಮೌಲ್ಯದಲ್ಲಿ ಇಳಿಕೆ ಕಂಡುಬರುತ್ತದೆ. ಈಗಿನ ನಿರುದ್ಯೋಗದ ಸನ್ನಿವೇಶದಲ್ಲಿ ಈ ಕಾಯ್ದೆಯ ಅಡಿಯಲ್ಲಿ ಉದ್ಯೋಗದ ದಿನಗಳ ಸಂಖ್ಯೆಯನ್ನು 150 ದಿನಗಳಿಗೆ ಹೆಚ್ಚಿಸಬೇಕಾಗಿತ್ತು. ಆದರೆ ಅಂತಹ ವಿಚಾರವೇನೂ ಈ ಸರಕಾರಕ್ಕೆ ಇಲ್ಲ ಎಂಬುದನ್ನು ಈ ಬಜೆಟ್ ತೋರಿಸಿದೆ. ಇದು ಖಂಡಿತವಾಗಿಯೂ ಗ್ರಾಮೀಣ ಉದ್ಯೋಗದ ನಿರ್ಮಾಣ, ಸಾರ್ವಜನಿಕ ಮೂಲಸೌಕರ್ಯಗಳ ನಿರ್ಮಾಣ ಮತ್ತು ಗ್ರಾಮೀಣ ಆರ್ಥಿಕತೆಯಲ್ಲಿ ಒಟ್ಟಾರೆ ಬೇಡಿಕೆಯ ನಿರ್ಮಾಣದ ಮೇಲೆ ದುಷ್ಪರಿಣಾಮ ಬೀರುತ್ತದೆ

ಬಜೆಟ್ ಕ್ರಮಗಳು ಪಶುಸಾಕಣೆ ಮಾಡುವ ರೈತರ ಮೇಲೂ ದುಷ್ಪರಿಣಾಮಗಳನ್ನು ಉಂಟುಮಾಡುತ್ತವೆ. ಇದು ಸರ್ಕಾರದ ಸಂಪೂರ್ಣ ಇಬ್ಬಂದಿತನವನ್ನು ತೋರಿಸುತ್ತದೆ. ಅವರ ವಕ್ತಾರರು ಜಾನುವಾರುಗಳ ಪಾತ್ರವನ್ನು "ಗೌ–ಮಾತಾ" ಎಂದು ಹೊಗಳುತ್ತಾರೆ. ಆದರೆ ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆಗೆ ಬಜೆಟ್ ಕೊಡಬೇಕೆಂದಿರುವುದು 3057 ಕೋಟಿ ರೂ. ಮಾತ್ರ. 2019–20ರಲ್ಲೇ ಈ ಬಾಬ್ತು 2706 ಕೋಟಿ ರೂ. ನೀಡಲಾಗಿತ್ತು. ಹಣದುಬ್ಬರವನ್ನು ಪರಿಗಣಿಸಿದರೆ ಇದು ಏರಿಕೆಯಂತೂ ಅಲ್ಲ ಎಂದು ಎ.ಐ.ಕೆ.ಎಸ್. ಅಭಿಪ್ರಾಯ ಪಟ್ಟಿದೆ.



ವೋವ್! ನೀವು ಬಾಗಿಲಷ್ಟೇ ತೆರೆಯುತ್ತೀರಿ ಎಂದು ಭಾವಿಸಿದ್ದೆ
ವ್ಯಂಗ್ಯಚಿತ್ರ ಕೃಪೆ: ಸುಭಾನಿ, ಡೆಕ್ಕನ್ ಕ್ರಾನಿಕಲ್

ಕ್ರೌರ್ಯ ತುಂಬಿದ ವಿನಾಶಕಾರಿ ಬಜೆಟ್–ಸಿಐಟಿಯು

ಪುಟ 7 ರಿಂದ

ಕಾರ್ಪೊರೇಟ್‌ಗಳು ಮತ್ತು ದೇಶಿ–ವಿದೇಶಿ ದೊಡ್ಡ ಬಂಡವಳಿಗಾರರ 'ಸುಗಮ ವ್ಯವಹಾರ'ವನ್ನು ಉತ್ತೇಜಿಸುವುದರ ಮೇಲೆಯೇ ಇದೆ. ಅಂದರೆ ಕಂಪನಿ ಕಾಯ್ದೆಯಡಿ ಶಾಸನಬದ್ಧ ಕಟ್ಟುಪಾಡುಗಳನ್ನು ಪಾಲಿಸುವ ಮತ್ತು ತೆರಿಗೆ ಲೆಕ್ಕಾಚಾರ, ಪಾವತಿಸದ ತೆರಿಗೆಗಳ ವಸೂಲಿ ಕುರಿತಾದ ಹೊರೆಯನ್ನು ಸರಾಗಗೊಳಿಸುವುದು ಹಾಗೂ ವಿವಿಧ ಬಾಬ್ತುಗಳಲ್ಲಿ ಹಲವಾರು ವಿನಾಯಿತಿಗಳನ್ನು ಕೊಡುವುದು.

ಸಾಂಕ್ರಾಮಿಕದ ಅವಧಿಯಲ್ಲಿ ಹಣಕಾಸಿನ ಬಿಕ್ಕಟ್ಟು ಮತ್ತು ಕಂದಾಯ ವಸೂಲಿಯಲ್ಲಿ ಇಳಿಕೆಯ ಬಗ್ಗೆ ವಿಷಾದ ಸೂಚಿಸಿದರೂ,ಹಣಕಾಸು ಸಚಿವರು ಕಳೆದ ಐದು ವರ್ಷಗಳ ತಮ್ಮ ಆಳ್ವಿಕೆಯಲ್ಲಿ ಸರಕಾರಕ್ಕೆ ಪಾವತಿಯಾಗದೆ ಬಾಕಿಯಾಗಿರುವ 10.57 ಲಕ್ಷ ಕೋಟಿ ರೂ.ಗಳ ನೇರ ತೆರಿಗೆಗಳ (ಕಾರ್ಪೊರೇಟ್ ತೆರಿಗೆ ಮತ್ತು ಆದಾಯ ತೆರಿಗೆ) ದೊಡ್ಡ ಮೊತ್ತವನ್ನು ವಸೂಲಿ ಮಾಡುವ ಅಗತ್ಯತೆಯ ಬಗ್ಗೆ ಒಂದೇ ಒಂದು ಮಾತನ್ನೂ ಹೇಳಲಿಲ್ಲ. ಇದರಲ್ಲಿ 2.29 ಲಕ್ಷ ಕೋಟಿ ರೂ. ತೆರಿಗೆ ಬಾಕಿಗೆ ಯಾವುದೇ ವಿವಾದವಿಲ್ಲ, ಆದರೂ ವಸೂಲಿಯಾಗಿಲ್ಲ. ಅದೇ ಐದು ವರ್ಷಗಳ ಅವಧಿಯಲ್ಲಿ ಕಾರ್ಪೊರೇಟ್ ತೆರಿಗೆಗಳ ಪಾವತಿ ಸರಿಯಾಗಿ ಆಗುವಂತೆ ಉತ್ತೇಜಿಸಲೆಂದು ತೆರಿಗೆ ದರಗಳನ್ನು ತೀವ್ರವಾಗಿ ಕಡಿತಗೊಳಿಸಲಾಯಿತು. ಆದರೆ ತೆರಿಗೆ ವಸೂಲಿ ಮಾತ್ರ ಆಗಿಲ್ಲ. ಕಾರ್ಪೊರೇಟ್‌ಗಳು ಯಾವುದೇ ಹಿಂಜರಿಕೆಯಿಲ್ಲದೆ ತೆರಿಗೆ ವಂಚನೆಯನ್ನು ಮಾಡಲು ಉತ್ತೇಜಿಸುವುದು ಮೋದಿ ಸರ್ಕಾರದ "ಸುಗಮ ವ್ಯವಹಾರ ಧೋರಣೆ"ಯ ವಿಶಿಷ್ಟ ಲಕ್ಷಣವಾಗಿದೆ, ಇದನ್ನು ರಾಷ್ಟ್ರೀಯ ಬೊಕ್ಕಸದ ಪ್ರಾಯೋಜಿತ ಲೂಟಿ ಎಂದೇ ಹೇಳಬೇಕಾಗುತ್ತದೆ ಎಂದು ಸಿಐಟಿಯು ಟೀಕಿಸಿದೆ.

ಅದೇ ಮೋಸದ ಆಟ

"ಆತ್ಮನಿರ್ಭರ್" ಎಂಬ ಯೋಜನೆಯ ಪ್ರಕಾರ ಉತ್ಪಾದನಾ ವಲಯವನ್ನು ಉತ್ತೇಜಿಸುವ ಎಲ್ಲಾ ಮಾತುಗಳೂ ಟೊಳ್ಳಾದ ಘೋಷಣೆಯಲ್ಲದೆ ಬೇರೇನೂ ಅಲ್ಲ; ಇದು ಮೂಲತಃ ವಿದೇಶಿ ಮತ್ತು ದೇಶೀಯ ಕಾರ್ಪೊರೇಟ್‌ಗಳಿಗೆ ರಾಷ್ಟ್ರೀಯ ಬೊಕ್ಕಸದಿಂದ ಯಾವುದೇ ಜವಾಬುದಾರಿಕೆಯಿಲ್ಲದೆ ಉತ್ತೇಜನೆ ನೀಡುವ ಕ್ರಮವಷ್ಟೇ. ಈ ಸರ್ಕಾರದ ಅಡಿಯಲ್ಲಿ ಕಳೆದ ಆರು ವರ್ಷಗಳಿಂದ ಈ ಕಾರ್ಪೊರೇಟ್‌ಗಳಿಗೆ ಈಗಾಗಲೇ ಅಪಾರ ರಿಯಾಯಿತಿಗಳು ಹರಿದು ಹೋಗಿವೆ, ಆದರೆ ಇದಕ್ಕೆ ಪ್ರತಿಯಾಗಿ ಅವುಗಳಿಂದ ಉತ್ಪಾದಕ ಹೂಡಿಕೆಯಾಗಲೀ ಅಥವಾ ಉದ್ಯೋಗಾವಕಾಶ ನಿರ್ಮಾಣವಾಗಲೀ ಏನೂ ಇಲ್ಲ. ಈ ಬಜೆಟ್‌ನಲ್ಲೂ ಅದೇ ಮೋಸದ ಆಟವನ್ನು ಆಡಲಾಗಿದೆ.


ಒಟ್ಟಾರೆಯಾಗಿ, ಸರ್ಕಾರದ ನೀತಿಯು ರಾಷ್ಟ್ರೀಯ ಅರ್ಥವ್ಯವಸ್ಥೆಗೆ ವಿನಾಶಕಾರಿಯಾಗಿಯೇ ಮುಂದುವರೆದಿದೆ.

ಕಾರ್ಮಿಕ ಸಂಹಿತೆಗಳನ್ನು ಉಲ್ಲೇಖಿಸುತ್ತ, ಇವು ಎಲ್ಲರಿಗೂ ಸಾರ್ವತ್ರಿಕ ಸಾಮಾಜಿಕ ಭದ್ರತೆ ಮತ್ತು ಶಾಸನಬದ್ಧ ಕನಿಷ್ಠ ವೇತನವನ್ನು ಖಾತರಿಪಡಿಸುತ್ತವೆ ಎಂಬ ಹಣಕಾಸು ಸಚಿವರ ಹೇಳಿಕೆಯಲ್ಲಿ ಏನೇನೂ ಸತ್ಯಾಂಶ ಇಲ್ಲ. ಈ ಕಾರ್ಮಿಕ ಸಂಹಿತೆಗಳು ಸಾಮಾಜಿಕ ಭದ್ರತೆ ಮತ್ತು ಕನಿಷ್ಠ ವೇತನ ಸೇರಿದಂತೆ ಎಲ್ಲಾ ಕಾರ್ಮಿಕ ಹಕ್ಕುಗಳನ್ನು ನಿರ್ಮೂಲಗೊಳಿಸಲಿವೆ. ಅದಕ್ಕಾಗಿಯೇ ಇಡೀ ಕಾರ್ಮಿಕ ಆಂದೋಲನ ಈ ಕಾರ್ಮಿಕ ಸಂಹಿತೆಗಳನ್ನು ನೇರವಾಗಿ ತಿರಸ್ಕರಿಸಿದೆ ಮತ್ತು ಅವುಗಳನ್ನು ರದ್ದುಗೊಳಿಸುವಂತೆ ಒತ್ತಾಯಿಸಿದೆ.



ಬಹಳ ಹೆಚ್ಚು ಶಿಕ್ಷಣದಿಂದಾಗಿ ಬಹಳ ಹೆಚ್ಚು ಪ್ರಜಾಪ್ರಭುತ್ವದ ಅಡಿಯಲ್ಲ ನರಳುತತಿರುವ ಅರ್ಥವ್ಯವಸ್ಥೆಗೆ ಮುಲಾಮು
ವ್ಯಂಗ್ಯಚಿತ್ರ ಕೃಪೆ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್

ಭಾರತದ ಕಾರ್ಮಿಕರ ಪ್ರಥಮ ರಾಜಕೀಯ ಮುಷ್ಕರ



ಸಾಮ್ರಾಜ್ಯಶಾಹಿಯ ವಿರುದ್ಧ ಎದ್ದೇಳಲು ಮುಂಬೈ ಕಾರ್ಮಿಕರು ಅನ್ವಯಿಸಿದ ವಿಧಾನವೆಂದರೆ ಐತಿಹಾಸಿಕವಾಗಿ (ಭಾಗ 2) ಪರೀಕ್ಷಿಸಲ್ಪಟ್ಟ ಕಾರ್ಮಿಕ ವರ್ಗದ ರಾಜಕೀಯ ಸಾರ್ವತ್ರಿಕ ಮುಷ್ಕರ ಮತ್ತು ದಮನಕೋರರ ಸಶಸ್ತ್ರ ಪಡೆಗಳೊಂದಿಗೆ ನೇರ ಮುಖಾಮುಖಿ. ಪ್ಯಾರಿಸ್ ಕಮ್ಯೂನ್ ಅನ್ನು 1871 ರಲ್ಲಿ ಪ್ಯಾರಿಸ್ ಕಾರ್ಮಿಕರು ಸಶಸ್ತ್ರ ಮುಖಾಮುಖಿಯ ಮೂಲಕ ಸ್ಥಾಪಿಸಿದ್ದರು, ಅದೇ ರೀತಿ 1905 ರಲ್ಲಿ ರಷ್ಯಾದ ಕಾರ್ಮಿಕ ವರ್ಗವು ರಾಜಕೀಯ ಸಾರ್ವತ್ರಿಕ ಮುಷ್ಕರ ಮತ್ತು ಸಶಸ್ತ್ರ ಪ್ರತಿರೋಧದ ವಿಧಾನವನ್ನು ಅಳವಡಿಸಿಕೊಂಡು ಮುನ್ನಡೆದಿತ್ತು. ಆದ್ದರಿಂದ ಅಂತರರಾಷ್ಟ್ರೀಯ ಶ್ರಮಜೀವಿಗಳ ಕ್ರಾಂತಿಕಾರಿ ಸಂಪ್ರದಾಯವನ್ನು ಅನುಸರಿಸಿ, ಮುಂಬಯಿ ಕಾರ್ಮಿಕರು 1908ರ ಸಾಮ್ರಾಜ್ಯಶಾಹಿ-ವಿರೋಧಿ ದಂಗೆಯಲ್ಲಿ ರಾಜಕೀಯ ಸಾರ್ವತ್ರಿಕ ಮುಷ್ಕರ ಮತ್ತು ಬಹಿರಂಗ ಪ್ರತಿರೋಧದ ಅದೇ ವಿಧಾನವನ್ನು ಆಶ್ರಯಿಸಿದರು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: ಸಿ.ಆರ್.ಶಾನಭಾಗ

ಜುಲೈ 22 ತಿಲಕ್ ಅವರ ವಿಚಾರಣೆಯು ಮುಕ್ತಾಯದ ದಿನವಾಗಿತ್ತು. ಬಲವಾದ ಗಾಳಿ ಮತ್ತು ಧಾರಾಕಾರ ಮಳೆಯನ್ನು ಲೆಕ್ಕಿಸದೆ ಹೈಕೋರ್ಟ್ ಬಳಿ ಸಾವಿರಾರು ಜನರು ಜಮಾಯಿಸಿದರು. ತಿಲಕರಿಗೆ ಆರು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಯಿತು ಮತ್ತು ನ್ಯಾಯಾಲಯದಿಂದ ಕೂಡಲೆ ಹೊರಗೆ ಕರೆದೊಯ್ಯಲಾಯಿತು. ನಂತರ ಏನು ಮಾಡಬೇಕೆಂದು ತಿಳಿಯದೆ, ಕೋಪಗೊಂಡ ಜನಸಮೂಹವು ಸಂಪೂರ್ಣ ಗೊಂದಲದ ಸ್ಥಿತಿಯಲ್ಲಿ ಸ್ಥಳವನ್ನು ತೊರೆದರು, ಆದರೆ ಕಾರ್ಮಿಕರು ಪರಿಣಾಮಕಾರಿ ಕಾರ್ಯಕ್ರಮದೊಂದಿಗೆ ಹೊರಬಂದರು. ಡಿ. ಸಿ. ಹೋಮ್ ಅವರ ಮಾತಿನಲ್ಲಿ, "ಅವರು ಕೆಲಸ ಸ್ಥಗಿತ ಮಾಡಿದರು". ಮರುದಿನ, ಜುಲೈ 23, ಮೊದಲ "ಸಂಪೂರ್ಣ ಮುಷ್ಕರವನ್ನು ಆಚರಿಸಲಾಯಿತು."

ಜುಲೈ 23 ಮುಷ್ಕರ ಚಳವಳಿಯ ಅತ್ಯುನ್ನತ ಹಂತದ ಆರಂಭಕ್ಕೆ ಸಾಕ್ಷಿಯಾಯಿತು. ಮುಂಬಯಿ ಶ್ರಮಜೀವಿಗಳು ತಿಲಕ್ ಅವರ ಶಿಕ್ಷೆಯನ್ನು ವಿರೋಧಿಸಿ ಆ ದಿನದಿಂದ ತಮ್ಮ ಮೊದಲ ರಾಜಕೀಯ ಮುಷ್ಕರವನ್ನು ಪ್ರಾರಂಭಿಸಿದರು.

ಆ ದಿನ ರಾಜಕೀಯ ಮುಷ್ಕರದಲ್ಲಿ 1,00,000 ಕಾರ್ಮಿಕರು ಸೇರಿಕೊಂಡರು ಮತ್ತು ಸಾಮಾನ್ಯ ಜನರು ಹರತಾಳ ಆಚರಿಸಿದರು. ನಗರ ಜನಸಂಖ್ಯೆಯ ವಿಶಾಲ ವಿಭಾಗವು ಒಂದು ರಾಜಕೀಯ ಕಾರ್ಯಕ್ರಮದಲ್ಲಿ ಶ್ರಮಜೀವಿಗಳೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಭಾಗವಹಿಸಿತು.

ಜುಲೈ 24 ರಿಂದ ಜನಸಾಮಾನ್ಯರು ಸಶಸ್ತ್ರ ಪೊಲೀಸರು ಮತ್ತು ಸೈನಿಕರನ್ನು ಎದುರಿಸಲು ಪ್ರಾರಂಭಿಸಿದರು ಮತ್ತು ಬೀದಿ ಯುದ್ಧಗಳು ನಡೆದವು. ಪ್ರತೀಕಾರದಿಂದ ಕೆರಳಿದ ಬ್ರಿಟಿಶ್ ಆಡಳಿತಗಾರರು ಜನಸಾಮಾನ್ಯರ ಮೇಲೆ ಹರಿಹಾಯ್ದರು, ಆದರೆ ಭಯಭೀತರಾಗದ ಕಾರ್ಮಿಕರು ಪ್ರತಿರೋಧವನ್ನು ಸಂಘಟಿಸಿದರು. ಇಡೀ ಮುಂಬಯಿ ನಗರವು ಸಾವಿರಾರು ಕಾರ್ಮಿಕರು ವೀರರಂತೆ ಹೋರಾಡಿದ ಬೀದಿ ಕಾಳಗಗಳಿಂದ ಪ್ರತಿಧ್ವನಿಸಿತು. ಹೀಗೆ ಮುಂಬಯಿಯ ಬೀದಿಗಳಲ್ಲಿ, ಭಾರತದ ಶ್ರಮಜೀವಿಗಳು 'ಬೀದಿ-ಹೋರಾಟದ' ಮೊದಲ ಶಾಲಾ -ಶಿಕ್ಷಣವನ್ನು ಪಡೆದರು. ಇದು ಕಾರ್ಮಿಕ ವರ್ಗದ ಕ್ರಾಂತಿಕಾರಿ ಹೋರಾಟದ ಹೊಸ ಅಧ್ಯಾಯಕ್ಕೆ ಕಾರಣವಾದ ಒಂದು ದೊಡ್ಡ ಘಟನೆಯಾಗಿದೆ. ಆ ದಿನ ಕಾರ್ಮಿಕರ ಈ ಪ್ರತಿರೋಧದ ಕ್ರಮವನ್ನು ಉಲ್ಲೇಖಿಸಿ, ಡಿ. ಸಿ. ಹೋಮ್ "ಯಾವುದೇ ರಾಜಕೀಯ ವಿಳಯದ ಬಗ್ಗೆ ಕಾರ್ಮಿಕರಿಂದ ಅಲ್ಲಿಯ ವರೆಗೂ ಯಾವುದೇ ಸಂಘಟಿತ ವಿರೋಧವನ್ನು ನೋಡಿರದಿದ್ದರಿಂದ, ಅಧಿಕಾರಿಗಳು ಇದನ್ನು ಗಂಭೀರವಾಗಿ ಗಮನಿಸಿರಲಿಲ್ಲ. ಕಾನೂನಿನ ಬಿಳಿ ಚರ್ಮದ ಪ್ರತಿನಿಧಿಗಳು ದಿಗಂತದಲ್ಲಿ ಕಾಣಿಸಿಕೊಂಡ ಕ್ಷಣಕ್ಕೆ "ಸ್ಥಳೀಯ" ಕಾರ್ಮಿಕರು ನೊಣಗಳಂತೆ ದಿಕ್ಕಾಪಾಲಾಗಿ ಓಡಿಹೋಗುತ್ತಾರೆ ಎಂದು ಅವರು ತಿಳಿದಿದ್ದರು." ಎಂದು ಬರೆದಿದ್ದಾರೆ.

ಆದ್ದರಿಂದ, ಬ್ರಿಟಿಶ್ ಅಧಿಕಾರಿಗಳ ನೇತೃತ್ವದಲ್ಲಿ ಒಂದು ದೊಡ್ಡ ಸಶಸ್ತ್ರ ಬೆಟಾಲಿಯನ್ ಮುಂದುವರಿಯಿತು ಮತ್ತು ತಕ್ಷಣವೇ ಚದುರಿಹೋಗುವಂತೆ ಕಾರ್ಮಿಕರ ಗುಂಪನ್ನು ಆದೇಶಿಸಿತು. ಡಿ.ಸಿ. ಹೋಮ್ ಮತ್ತೆ ಬರೆಯುತ್ತಾರೆ, "ತಮ್ಮದೇ ಆದ ಸಾಮರ್ಥ್ಯ ಮತ್ತು ವರ್ಗದ ಘನತೆಯನ್ನು ತಿಳಿದುಕೊಳ್ಳುವಷ್ಟು ಪ್ರಬುದ್ಧರಾಗಿದ್ದ ಅಪಾರ ಪ್ರಮಾಣದ ಕಾರ್ಮಿಕರನ್ನು ತಾವು ಎದುರಿಸುತ್ತಿದ್ದೇವೆಂದು ಪೊಲೀಸರಿಗೆ ತಿಳಿದಿರಲಿಲ್ಲ."

ಉತ್ಸಾಹಭರಿತ ಜನಸಮೂಹವು ಅವರ ಆದೇಶಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದು ಮತ್ತು ಗೇಲಿ ಮಾಡಿದ್ದು ಬ್ರಿಟಿಶ್ ಅಧಿಕಾರಿಗಳ ಬೆರಗುಗೊಳಿಸಿತು. ಕೋಪಗೊಂಡ ಪೋಲೀಸರು ಆಗ ಗುಂಪಿನ ಮೇಲೆ ಮನಬಂದಂತೆ ಗುಂಡು ಹಾರಿಸಲಾರಂಭಿಸಿದರು. ಹೀಗೆ ಪೊಲೀಸರು ತೀವ್ರ ಹಲ್ಲೆ ನಡೆಸಿದಾಗ, ಮೊದಲಿಗೆ ಜನಸಮೂಹವು ಸ್ವಲ್ಪ ಹಿಂದೆ ಸರಿಯಬೇಕಾಯಿತು, ಸ್ವಲ್ಪೇ ಸಮಯದಲ್ಲಿ ಅವರು ತಮ್ಮನ್ನು ಎರಡು ಭಾಗಗಳಾಗಿ ವಿಂಗಡಿಸಿ ಮತ್ತೆ ಒಟ್ಟುಗೂಡಿದರು. ಆದರೆ ಈ ಬಾರಿ ಅವರ ಶಾಂತತೆಯು ಸಕ್ರಿಯ ಪ್ರತಿರೋಧವಾಯಿತು. ಭಾರೀ ಇಟ್ಟಿಗೆಗಳನ್ನು ತೂರುವ ಮೂಲಕ ಅವರು ಪ್ರತಿ-ದಾಳಿಯನ್ನು ಪ್ರಾರಂಭಿಸಿದರು. ಒರಟು ಧೈರ್ಯ ಮತ್ತು ಶೌರ್ಯದಿಂದ ಮುಂಬಯಿಯ ಕಾರ್ಮಿಕರು ಕೈಯಲ್ಲಿ ಇಟ್ಟಿಗೆ ಮತ್ತು ಕಲ್ಲುಗಳನ್ನು ಮಾತ್ರ ಇಟ್ಟುಕೊಂಡು ಭಾರೀ ಶಸ್ತ್ರಸಜ್ಜಿತ ಪಡೆಗಳ ವಿರುದ್ಧ ಹೋರಾಡಿದರು. ಆದರೆ ಈ ಅಸಮಾನ ಯುದ್ಧವು ಹೆಚ್ಚು ಕಾಲ ಮುಂದುವರೆಯಲು ಸಾಧ್ಯವಾಗಲಿಲ್ಲ. ಅನೇಕ ಕಾರ್ಮಿಕರು ಹುತಾತ್ಮರಾದರು, ಇನ್ನೂ ಅನೇಕರು ಗಾಯಗೊಂಡರು. ಹುತಾತ್ಮರಲ್ಲಿ ಒಬ್ಬ ಗಣಪತ್ ಗೋವಿಂದ್ ತನ್ನ ಕೊನೆಯ ಉಸಿರಿರುವವರೆಗೂ ಜನಸಮೂಹವನ್ನು ನಿರ್ಭಯವಾಗಿ ಹೋರಾಡಲು ನಿರ್ದೇಶಿಸುತ್ತಿದ್ದನು.

ಆ ದಿನ ನಡೆದ ಘರ್ಷಣೆಯ ಸಮಯದಲ್ಲಿ ಯಾವುದೇ ಭಾರತೀಯ ಪೊಲೀಸರನ್ನು ನಿಯೋಜಿಸಲಾಗಿರಲಿಲ್ಲ, ಏಕೆಂದರೆ ತಿಲಕರ ವಿರುದ್ಧ ಕಾನೂನು ಕ್ರಮ ಜರುಗಿಸುವುದರ ವಿರುದ್ಧ ಭಾರತದ ಪೊಲೀಸ್ ಪಡೆಯಲ್ಲಿ ಅಸಮಾಧಾನ ಉಂಟಾಗಿರುವ ಬಗ್ಗೆ ಬ್ರಿಟಿಶ್ ಸರ್ಕಾರಕ್ಕೆ ಮಾಹಿತಿ ಇತ್ತು. ದಂಡನಾ ಪಡೆಗಳಲ್ಲಿರುವವರು ಸೇರಿದಂತೆ ಭಾರತದ ಜನರ ಎಲ್ಲಾ ಸ್ತರಗಳಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಮನೋಭಾವ ಹೆಚ್ಚುತ್ತಿತ್ತು ಎನ್ನುವ ಸಂಗತಿ ನಿಜಕ್ಕೂ ಗಮನಾರ್ಹವಾಗಿದೆ.

ಕಾರ್ಮಿಕರ ರಾಜಕೀಯ ಸಾರ್ವತ್ರಿಕ ಮುಷ್ಕರ ಮತ್ತು ಮುಂಬಯಿಯ ಇತರ ಜನಸಮೂಹದ ಹರತಾಳದ ನಡುವಿನ ನಿಕಟ ಸಂಬಂಧವನ್ನು ಎತ್ತಿ ತೋರಿಸುವ ಹೆಚ್ಚಿನ ಮಾಹಿತಿ ಲಭ್ಯವಿದೆ. ಅಂತಹ ಒಂದು ಉದಾಹರಣೆಯೆಂದರೆ, ವ್ಯಾಪಾರಿಗಳು ಕಾರ್ಮಿಕರಿಗೆ ಅಕ್ಕಿಯನ್ನು ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಮಾರಾಟ ಮಾಡಿದರು. ಸಾಮ್ರಾಜ್ಯಶಾಹಿಯ ವಿರುದ್ಧ ಕ್ರಾಂತಿಕಾರಿ ಹೋರಾಟದ ಸಂದರ್ಭದಲ್ಲಿ ಶ್ರಮಜೀವಿ ಮತ್ತು ಕಿರಿ-ಬೂರ್ಜ್ವಾ ಜನರ ನಡುವಿನ ಏಕತೆಯ ಬಂಧದ ಬೆಳವಣಿಗೆಯನ್ನು ಇದು ತೋರಿಸುತ್ತದೆ.

ಈ ಆಂದೋಲನದಲ್ಲಿ ಭಾರತೀಯ ಗಿರಣಿ ಮಾಲೀಕರು ವಹಿಸಿದ ಪಾತ್ರವನ್ನೂ ಗಮನಿಸಬೇಕು. ಘಟನೆಗಳ ನಡೆಯಿಂದ ಗಾಬರಿಗೊಂಡ ಪೊಲೀಸ್ ಆಯುಕ್ತರು ಜುಲೈ 24 ರಂದು ಗಿರಣಿ ಮಾಲೀಕರ ಸಭೆ ನಡೆಸಿ ಈ ಆಂದೋಲನವನ್ನು ವಿರೋಧಿಸುವಂತೆ ಕೇಳಿಕೊಂಡರು. ವಸಾಹತುಶಾಹಿ ಆಡಳಿತಗಾರರ ಈ ಅಪ್ಪಣೆಗೆ ಪ್ರತಿಕ್ರಿಯಿಸಿದ ಗಿರಣಿ ಮಾಲೀಕರು ತಮ್ಮ ಸಂಘದ ಸಭೆಯನ್ನು ನಡೆಸಿದರು, ಅದರಲ್ಲಿ ಟೈಮ್ಸ್ ಆಫ್ ಇಂಡಿಯಾ ವರದಿಯ ಪ್ರಕಾರ, ಅದರ ಅಧ್ಯಕ್ಷರು 'ಸಾರ್ವತ್ರಿಕ ಮುಷ್ಕರಕ್ಕೆ ಹೋಗದಂತೆ ಕೆಲಸಗಾರರನ್ನು ತಡೆಯುವುದು ಉದ್ಯಮದ ಹಿತಾಸಕ್ತಿ' ಎಂದು ಒತ್ತಾಯಿಸಿದರು. ಸರ್ಕಾರವನ್ನು ಯಾವುದೇ ರೀತಿಯಲ್ಲಿ ಇಕ್ಕಟ್ಟಿಗೆ ಸಿಲುಕಿಸದಿರುವುದು ಗಿರಣಿ ಮಾಲೀಕರ ಕರ್ತವ್ಯ ಮತ್ತು ಕಾನೂನು ಮತ್ತು ಅಧಿಕಾರವನ್ನು ಗೌರವಿಸಲು ಮತ್ತು ಕೆಲಸವನ್ನು ಪುನರಾರಂಭಿಸಲು ಕೆಲಸಗಾರರ ಮೇಲೆ ತಮ್ಮ ಪ್ರಭಾವವನ್ನು ಬೀರುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ಅಧ್ಯಕ್ಷರು ಹೇಳಿದರು.

ಈ ಘಟನೆಗಳು ಈ ಸಾಮೂಹಿಕ ದೇಶಭಕ್ತಿಯ ಆಂದೋಲನಕ್ಕೆ ಸಂಬಂಧಿಸಿದಂತೆ ಹಿರಿ-ರಾಷ್ಟ್ರೀಯ ಬೂರ್ಜ್ವಾ ವರ್ಗದವರು ತಳೆದ ನಿಲುವನ್ನು ಎತ್ತಿ ತೋರಿಸುತ್ತವೆ. ಸಣ್ಣ ವ್ಯಾಪಾರೀ ಸಮುದಾಯವು ಹೋರಾಟನಿರತ ಶ್ರಮಜೀವಿಗಳೊಂದಿಗೆ ಮೈತ್ರಿ ಮಾಡಿಕೊಂಡಿದ್ದರೆ, ಹಿರಿ-ರಾಷ್ಟ್ರೀಯ ಬೂರ್ಜ್ವಾ ವರ್ಗ ಪ್ರಧಾನವಾಗಿ ನಿರ್ಧಾರವಿಲ್ಲದೇ ಸಮಯ ತಳ್ಳುವ ಧೋರಣೆಯನ್ನು ಅನುಸರಿಸಿತು. ಇದಲ್ಲದೆ, ಶ್ರಮಜೀವಿಗಳ ರಾಜಕೀಯ ಜಾಗೃತಿಯಿಂದ ಭಯಭೀತರಾದ ಅವರಲ್ಲಿನ ದೊಡ್ಡ ವಿಭಾಗವು ವಸಾಹತುಶಾಹಿ ಆಡಳಿತಗಾರರಿಗೆ ಸಹಾಯ ಮಾಡುವ ಇಚ್ಛೆಯನ್ನು ವ್ಯಕ್ತಪಡಿಸಿತು ಮತ್ತು ಕೆಲವರು ಕ್ರಾಂತಿಕಾರಿ ಚಳವಳಿಯನ್ನು ಮುರಿಯಲು ಸಾಮ್ರಾಜ್ಯಶಾಹಿ ದಮನಕೋರರೊಂದಿಗೆ ಬಹಿರಂಗವಾಗಿ ಸೇರಿಕೊಂಡರು. ಆದರೆ ಹಿರಿ ರಾಷ್ಟ್ರೀಯ ಬೂರ್ಜ್ವಾ ವರ್ಗದ ಹೇಡಿತನಕ್ಕೆ ಮತ್ತು ಅದರ ಒಂದು ಭಾಗದ ಈ ಶರಣಾಗತಿಗೆ ವ್ಯತಿರಿಕ್ತವಾಗಿ, ಬಡತನದಿಂದ ನರಳುತ್ತಿದ್ದ ಮತ್ತು ಅಜ್ಞಾನದಿಂದ ತುಂಬಿದ್ದ ಕಾರ್ಮಿಕರು ನಮ್ರವಾಗಿ ಗುಲಾಮಗಿರಿ ಮತ್ತು ವಸಾಹತುಶಾಹಿ ದಬ್ಬಾಳಿಕೆಗೆ ತಲೆಬಾಗಲು ನಿರಾಕರಿಸಿದರು. ಎ. ಐ. ಚಿಚೆರೋವ್ ಹೇಳಿದಂತೆ, "ಬಾಂಬೆಯ ಯುವ ಶ್ರಮಜೀವಿಗಳ ಹೋರಾಟದಲ್ಲಿನ ದೃಢತೆ, ಪರಿಣಾಮಕಾರಿ ಕಾರ್ಯತಂತ್ರಗಳನ್ನು ಉತ್ತಮಪಡಿಸುವ, ಬೆಳೆಸುವ ಸಾಮರ್ಥ್ಯ ವಿಶೇಷವಾಗಿ ಗಮನಾರ್ಹವಾದುದು. ಅವರ ಅನೇಕ ಕಾರ್ಯಕ್ರಮಗಳು ಉತ್ತಮವಾಗಿ ಸಂಘಟಿತವಾಗಿವೆ. ಸಾಮ್ರಾಜ್ಯಶಾಹಿಯೊಂದಿಗಿನ ಮೊದಲ ಗಂಭೀರ ಕದನದಲ್ಲಿ ಯುವ ಶ್ರಮಜೀವಿಗಳ ಉನ್ನತ ಸ್ಥೈರ್ಯಕ್ಕೆ ಇದು ಸಾಕ್ಷಿಯಾಗಿದೆ."

ಜುಲೈ 27 ರಂದು ಹೊಸ ಪಡೆಗಳು ಕಣದಲ್ಲಿ ಸೇರಿಕೊಂಡವು. ಇಲ್ಲಿಯವರೆಗೆ ಶ್ರಮಜೀವಿಗಳ ಜೊತೆಗಿದ್ದ ಕಿರಿ- ಬೂರ್ಜ್ವಾಗಳು ಈಗ ಸಶಸ್ತ್ರ ಪಡೆಗಳ ವಿರುದ್ಧ ಬೀದಿ ಹೋರಾಟಕ್ಕೆ ಸೇರಿಕೊಂಡರು. ಇತರ ಕೈಗಾರಿಕೇತರ ಕಾರ್ಮಿಕರೂ ಸಹ ಹಾಗೆ ಮಾಡಿದರು. ವ್ಯಾಪಾರೀ ಸಮುದಾಯದ ಬಡ ವರ್ಗದವರು ರ್‍ಯಾಲಿಗಳು ಮತ್ತು ಪ್ರದರ್ಶನಗಳಲ್ಲಿ ಭಾಗವಹಿಸಿದರು. ತಿಲಕ್ ಅವರ ಭಾವಚಿತ್ರವನ್ನು ಹೊಂದಿದ್ದ ಗುಜರಾತಿ ಭಾಷೆಯಲ್ಲಿ ಮುದ್ರಿತ ಮತ್ತು ಸೌಹಾರ್ದತೆಯನ್ನು ವ್ಯಕ್ತಪಡಿಸಿದ ಮತ್ತು ಹೋರಾಟದ ಮುಂದುವರಿಕೆಗೆ ಒತ್ತಾಯಿಸಿದ ಕರಪತ್ರಗಳನ್ನು ಜನರಲ್ಲಿ ವಿತರಿಸಲಾಯಿತು.

ವಸಾಹತುಶಾಹಿ ಆಡಳಿತಗಾರರಿಗೆ ಅದನ್ನು ಸಹಿಸಲಾಗಲಿಲ್ಲ. ಅವರ ನಿರ್ದೇಶನದಲ್ಲಿ, ಸೈನಿಕರು ಸಾವಿರಾರು ಸಂಖ್ಯೆಯಲ್ಲಿದ್ದ ಪ್ರತಿಭಟನಾಕಾರರ ಮೇಲೆ ಗುಂಡು ಹಾರಿಸಿದರು. ಆದರೆ ಸೋತು ಹಿಮ್ಮೆಟ್ಟುವ ಬದಲಾಗಿ ಜನಸಮೂಹವು ಹಲವಾರು ಸಣ್ಣ ಸಣ್ಣಗುಂಪುಗಳಾಗಿ ವಿಂಗಡಿಸಲ್ಪಟ್ಟು ಗಲ್ಲಿಗಳು ಮತ್ತು ಕಿರುದಾರಿಗಳಲ್ಲಿ ಸೇರಿ ಕಲ್ಲುಗಳು ಮತ್ತು ಇಟ್ಟಿಗೆಗಳನ್ನು ಪೊಲೀಸ್ ಮತ್ತು ಸೈನಿಕರ ಮೇಲೆ ಎಸೆಯುವ ಮೂಲಕ ತೀವ್ರ ಪ್ರತಿರೋಧವನ್ನು ವ್ಯಕ್ತಪಡಿಸಿತು. ಆ ದಿನದ ಚಟುವಟಿಕೆಯ ಪ್ರಮುಖ ನಾಯಕ ಕೇಶವಲಾಲ್ ಕಾಂಜಿ ಎಂಬ ಗುಜರಾತಿ ಉದ್ಯಮಿ. ಇತರರೊಂದಿಗೆ, ಕಾಂಜಿ ಕೂಡ ಪೊಲೀಸ್ ಗುಂಡಿನ ದಾಳಿಗೆ ಬಲಿಯಾಗಿ ಹುತಾತ್ಮ ಮರಣವನ್ನು ಅಪ್ಪಿದ.

ಜುಲೈ 28 ರಂದು, ದುಡಿಯುವ ಜನರ ಸಂಪೂರ್ಣ ಹೊಸದಾದ ಒಂದು ವಿಭಾಗವು ಕದನ ಭೂಮಿಗೆ ಪ್ರವೇಶಿಸಿತು. ಅವರು ಮನೆಗೆಲಸದ ಸೇವಕರು. ಜೀವನೋಪಾಯಕ್ಕಾಗಿ ನಗರಕ್ಕೆ ಸೇರುವ ಮೊದಲು, ಈ ಬಡ ಜನರು ರತ್ನಾಗಿರಿಯ ರೈತ ಸಮುದಾಯಕ್ಕೆ ಸೇರಿದವರು. ವಿವಿಧ ಕಟ್ಟಡಗಳ ತಾರಸಿಗಳ ಮೇಲೆ ಮತ್ತು ಕಿರಿದಾದ ಹಾದಿಗಳಲ್ಲಿ ಸೇರಿಕೊಂಡ ಅವರು ಸೈನಕರ ಮೇಲೆ ನಿರಂತರವಾಗಿ ಕಲ್ಲುಗಳನ್ನು ಸುರಿಸುವ ಮೂಲಕ ಹೋರಾಡಿದರು. ಆ ದಿನ, ಕಾರ್ಮಿಕರು ಸಹ ದೊಡ್ಡ ಪ್ರದರ್ಶನದಲ್ಲಿ ಹೊರಬಂದು ಸಶಸ್ತ್ರ ಕಾಲಾಳು ಪಡೆಯನ್ನು ಎದುರಿಸಿದರು.

ಜುಲೈ 23 ರಂದು ಪ್ರಾರಂಭವಾದ ರಾಜಕೀಯ ಸಾರ್ವತ್ರಿಕ ಮುಷ್ಕರದ ಮುಕ್ತಾಯದ ದಿನ ಜುಲೈ 28. ತಿಲಕರಿಗೆ ಆರು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿತು, ಕಾರ್ಮಿಕರು ಮತ್ತು ಜನಸಾಮಾನ್ಯರು ತಮ್ಮ ಪ್ರತಿಜ್ಞೆಯನ್ನು ಉಳಿಸಿಕೊಂಡರು. ತಿಲಕರಿಗೆ ವಿಧಿಸಲಾದ ಶಿಕ್ಷೆಯ ಪ್ರತಿ ವರ್ಷವೂ ಒಂದು ದಿನದ ಮುಷ್ಕರ ಆದರೆ ಈ ಧೀರಕೃತ್ಯ ಭಾರೀ ಪ್ರಾಣಹಾನಿಗಳನ್ನು ಕಂಡಿತು. ಕನಿಷ್ಟ 200 ಜನರು ಸಾವನ್ನಪ್ಪಿದರು, ಅನೇಕರು ಗಾಯಗೊಂಡರು ಮತ್ತು ಇನ್ನೂ ಅನೇಕರನ್ನು ದಸ್ತಗಿರಿ ಮಾಡಲಾಯಿತು.

ಮುಂಬಯಿಯ ದುಡಿಯುವ ಜನಸಾಮೂಹದ ಎಲ್ಲಾ ವಿಭಾಗಗಳು ಈ ಕದನಗಳಲ್ಲಿ ಸೇರಿಕೊಂಡವು. ಈ ಸಾರ್ವತ್ರಿಕ ಮುಷ್ಕರದಿಂದ ನಗರದ ಮುಸ್ಲಿಂ ಸಮುದಾಯವು ದೂರ ಉಳಿದಿದೆ ಎಂದು ಬ್ರಿಟಿಶ್ ಅಧಿಕಾರಿಗಳು ಪ್ರಚಾರ ಮಾಡಲು ಪ್ರಯತ್ನಿಸಿದರು. ಆದರೆ ಮುಷ್ಕರಕ್ಕೆ ಸಹಾನುಭೂತಿಯಾಗಿ ಹಿಂದೂ ಮತ್ತು ಮುಸ್ಲಿಮರ ಒಡೆತನದ ನಗರದ ಎಲ್ಲಾ ಅಂಗಡಿಗಳನ್ನು ಮುಚ್ಚಲಾಗಿತ್ತು ಎಂದು ಲಭ್ಯವಿರುವ ವರದಿಗಳು ಖಚಿತಪಡಿಸುತ್ತವೆ. ಶೇಕಡಾ ಇಪ್ಪತ್ತರಷ್ಟು ಕಾರ್ಮಿಕರು ಮುಸ್ಲಿಂ ಸಮುದಾಯಕ್ಕೆ ಸೇರಿದವರಾಗಿದ್ದು, ಅವರು ಕೂಡ ಮುಷ್ಕರಕ್ಕೆ ಸೇರಿದರು.


ಕೆಲವು ಪಾಠಗಳು

ಈ ರಾಜಕೀಯ ಸಾರ್ವತ್ರಿಕ ಮುಷ್ಕರ ಮುಂಬಯಿ ಕಾರ್ಮಿಕರ ದರಿದ್ರ ಆರ್ಥಿಕ ಪರಿಸ್ಥಿತಿಯ ಕಾರಣ ನಡೆಯಿತು. ವಸಾಹತು ದೇಶದ ಕಾರ್ಮಿಕರಾಗಿ, ಬ್ರಿಟಿಶ್ ಮತ್ತು ಸ್ಥಳೀಯ ಬಂಡವಾಳಶಾಹಿಗಳ ಅತಿಯಾದ ಶೋಷಣೆಯ ವಿರುದ್ಧ ಹೋರಾಡುತ್ತಿದ್ದಾಗ, ಈ ಶೋಷಣೆಗೆ ಮೂಲ ಕಾರಣವಾಗಿ ಬ್ರಿಟಿಶ್ ವಸಾಹತುಶಾಹಿ ಆಳ್ವಿಕೆಯ ಪಾತ್ರವನ್ನು ಅವರು ವೇಗವಾಗಿ ಅರಿತುಕೊಂಡರು. ಈ ಸಾಕ್ಷಾತ್ಕಾರವು ರಾಷ್ಟ್ರೀಯ ವಿಮೋಚನಾ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವರನ್ನು ಪ್ರಚೋದಿಸಿತು. ತಮ್ಮ ಪ್ರೀತಿಯ ನಾಯಕ ತಿಲಕರ ಬಂಧನ ಮತ್ತು ಶಿಕ್ಷೆ, ಸಾಮ್ರಾಜ್ಯಶಾಹಿಯ ಸುಲಿಗೆ ಮತ್ತು ದಮನಕಾರಿ ಲಕ್ಷಣವನ್ನು ಬಿಚ್ಚಿಟ್ಟಿತು. ಇದನ್ನು ಕಂಡ ಅವರು ತಕ್ಷಣವೇ ಪ್ರತಿರೋಧದಲ್ಲಿ ದಂಗೆಯೆದ್ದರು.

ಸಾಮ್ರಾಜ್ಯಶಾಹಿಯ ವಿರುದ್ಧ ಎದ್ದೇಳಲು ಮುಂಬೈ ಕಾರ್ಮಿಕರು ಅನ್ವಯಿಸಿದ ವಿಧಾನವೆಂದರೆ ಐತಿಹಾಸಿಕವಾಗಿ ಪರೀಕ್ಷಿಸಲ್ಪಟ್ಟ ಕಾರ್ಮಿಕ ವರ್ಗದ ರಾಜಕೀಯ ಸಾರ್ವತ್ರಿಕ ಮುಷ್ಕರ ಮತ್ತು ದಮನಕೋರರ ಸಶಸ್ತ್ರ ಪಡೆಗಳೊಂದಿಗೆ ನೇರ ಮುಖಾಮುಖಿ. ಪ್ಯಾರಿಸ್ ಕಮ್ಯೂನ್ ಅನ್ನು 1871 ರಲ್ಲಿ ಪ್ಯಾರಿಸ್ ಕಾರ್ಮಿಕರು ಸಶಸ್ತ್ರ ಮುಖಾಮುಖಿಯ ಮೂಲಕ ಸ್ಥಾಪಿಸಿದ್ದರು, ಅದೇ ರೀತಿ 1905 ರಲ್ಲಿ ರಷ್ಯಾದ ಕಾರ್ಮಿಕ ವರ್ಗವು ರಾಜಕೀಯ ಸಾರ್ವತ್ರಿಕ

ಪುಟ 12 ನೋಡಿ

ಬಿಡೆನ್ ಮತ್ತು ಮೋದಿ ರಕ್ಷಣಾ ಪ್ಯಾಕೇಜ್‌ಗಳು: ಎಷ್ಟೊಂದು ಅಂತರ!



ಜೋ ಬಿಡೆನ್ ಅಮೆರಿಕದ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವ ಮುನ್ನವೇ ಆದೇಶದ ಜಿಡಿಪಿಯ 10%ದಷ್ಟು ಗಾತ್ರದ ಒಂದು ರಕ್ಷಣಾ ಪ್ಯಾಕೇಜ್ ಘೋಷಿಸಿದ್ದಾರೆ. ಈ ಮೊತ್ತದಲ್ಲಿ ಒಂದು ಟ್ರಿಲಿಯನ್ ಡಾಲರ್‌ನಷ್ಟು ಹಣ ದುಡಿಯುವ ಜನರಿಗೆ ನೇರ ವರ್ಗಾವಣೆ ರೂಪದಲ್ಲಿ ತಲುಪಲಿದೆ. ಗಮನಾರ್ಹ ಸಂಗತಿಯೆಂದರೆ, ಈ ಪ್ಯಾಕೇಜ್ ಒದಗಿಸಲು ಬೇಕಾಗುವ ಹಣವನ್ನು ಹೊಂದಿಸಿಕೊಳ್ಳಲು, ಸಾಮಾನ್ಯ ಜನರ ಮೇಲೆ ತೆರಿಗೆ ಹಾಕುವ ಬದಲು ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆ ವಿಧಿಸಲು ಬಿಡೆನ್ ಮಾಡಿರುವ ಕೆಲವು ಪ್ರಸ್ತಾಪಗಳು. ಕೊರೊನಾ ಸಾಂಕ್ರಾಮಿಕದ ಕಾಲದಲ್ಲಿ ಒಟ್ಟು ಸರ್ಕಾರಿ ವೆಚ್ಚಗಳು ತಗ್ಗಿದ ವಿಶ್ವದ ಕೆಲವೇ ಕೆಲವು ದೇಶಗಳಲ್ಲಿ ಭಾರತವೂ ಒಂದು. ಮೋದಿ ಸರ್ಕಾರದ ಈ ಬುದ್ಧಿಹೀನ ನೀತಿಗಳಿಗೆ ಅದರ ನಿರ್ದಯತೆ ಮಾತ್ರ ಸಾಟಿಯಾಗಬಲ್ಲದು. ಹಾಗಾಗಿ, ನರೇಂದ್ರ ಮೋದಿಗೆ ಹೋಲಿಸಿದರೆ ಜೋ ಬಿಡೆನ್ ಪ್ರಕಾಶಮಾನವಾಗಿ ಕಾಣುತ್ತಾರೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಅಮೆರಿಕದ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವ ಮುನ್ನವೇ ಜೋ ಬಿಡೆನ್ ಅವರು 1.9 ಟ್ರಿಲಿಯನ್ ಡಾಲರ್ ಗಾತ್ರದ ಒಂದು ರಕ್ಷಣಾ ಪ್ಯಾಕೇಜ್ ಘೋಷಿಸಿದ್ದರು. ಈ ಮೊತ್ತದಲ್ಲಿ ಒಂದು ಟ್ರಿಲಿಯನ್ ಡಾಲರ್‌ನಷ್ಟು ಹಣ ದುಡಿಯುವ ಜನರಿಗೆ ನೇರ ವರ್ಗಾವಣೆ ರೂಪದಲ್ಲಿ ತಲುಪಲಿದೆ. ಅಮೇರಿಕಾದ 2020ರ ಜಿಡಿಪಿಯು ಗಾತ್ರ 20.8 ಟ್ರಿಲಿಯನ್ ಡಾಲರ್ ಎಂಬ ಅಂದಾಜಿನ ಮೇಲೆ, ಬಿಡೆನ್ ಅವರು ಘೋಷಿಸಿರುವ ಪ್ರಸ್ತುತ ರಕ್ಷಣಾ ಪ್ಯಾಕೇಜಿನ ಗಾತ್ರವು ಅಮೇರಿಕಾದ ಜಿಡಿಪಿಯ ಸುಮಾರು ಶೇ.10ರಷ್ಟಾಗುತ್ತದೆ. ಕೋರೋನಾ ಸಾಂಕ್ರಾಮಿಕವು ಉಂಟುಮಾಡಿದ ಆರ್ಥಿಕ ಬಿಕ್ಕಟ್ಟಿನಿಂದ ಪಾರಾಗುವ ಸಲುವಾಗಿ ಹಿಂದಿನ ಅಧ್ಯಕ್ಷ ಟ್ರಂಪ್ ಅವರು ಕೆಲವು ತಿಂಗಳುಗಳ ಹಿಂದೆ ಘೋಷಿಸಿದ್ದ ಜಿಡಿಪಿಯ ಸುಮಾರು ಶೇ.10ರಷ್ಟು ಮೊತ್ತದ ಪರಿಹಾರ ಪ್ಯಾಕೇಜಿನ ಜೊತೆಗೆ, ಬಿಡೆನ್ ಅವರು ಈಗ ಮತ್ತೊಂದು ರಕ್ಷಣಾ ಪ್ಯಾಕೇಜ್ (1.9 ಟ್ರಿಲಿಯನ್ ಡಾಲರ್) ಘೋಷಿಸಿದ್ದಾರೆ. ವಾಸ್ತವವಾಗಿ, ಕೋರೋನಾ ಸಾಂಕ್ರಾಮಿಕದ ಕಾರಣದಿಂದಾಗಿ ಅಮೆರಿಕಾದಲ್ಲಿ, ಏಪ್ರಿಲ್‌ನಲ್ಲಿ ಶೇ.15ಕ್ಕೆ ಏರಿದ್ದ ನಿರುದ್ಯೋಗವು ಡಿಸೆಂಬರ್ ತಿಂಗಳ ಹೊತ್ತಿಗೆ ಶೇ.6.7ಕ್ಕೆ ಇಳಿದಿತ್ತು. ಇದೇ ಕಾರಣವನ್ನು ಮುಂದೊಡ್ಡಿ, ಇನ್ನು ಮುಂದೆ ದುಡಿಯುವ ಜನರಿಗೆ ಸಹಾಯವನ್ನು ವಿಸ್ತರಿಸುವ ಅಗತ್ಯವಿಲ್ಲ ಎಂದು ರಿಪಬ್ಲಿಕನ್ ಪಕ್ಷದ ಸಂಪ್ರದಾಯವಾದಿಗಳು ಈಗ ತಗಾದೆ ತೆಗೆಯಬಹುದು. ಆದಾಗ್ಯೂ, ಬಿಡೆನ್ ಅವರು ಉದ್ದೇಶಿಸಿರುವ ಈ ಪಾರು ಯೋಜನೆಯು ಅಮೇರಿಕಾದಲ್ಲಿ ದುಡಿಯುವ ಜನರಿಗೆ ಈಗ ಒದಗಿಸುತ್ತಿರುವ ನೇರ ವರ್ಗಾವಣೆಯ ನೆರವನ್ನು ದೀರ್ಘಾವಧಿಯ ವರೆಗೆ ಮುಂದುವರಿಸುವ ಮತ್ತು ಈ ನೆರವಿನ ಪ್ರಮಾಣವನ್ನು ಹೆಚ್ಚಿಸುವ ಗುರಿ ಹೊಂದಿದೆ.

ಬಿಡೆನ್ ಈಗ ಘೋಷಿಸಿರುವ ತಮ್ಮ ಪ್ಯಾಕೇಜನ್ನು ಕೋವಿಡ್–19ರ ಚೇತರಿಕೆಯ ಪ್ಯಾಕೇಜ್ ಎಂದು ಕರೆದಿದ್ದರೂ ಸಹ, ಅದಕ್ಕಿಂತಲೂ ಹೆಚ್ಚಿನದು ಎಂದೇ ಹೇಳಬಹುದು. ಸಾಮಾಜಿಕ ವೆಚ್ಚಗಳಲ್ಲಿ ಬಹಳ ಹೆಚ್ಚಳವಾಗಿದೆ ಮತ್ತು ಅದರ ವ್ಯಾಪ್ತಿಯು ಸಾಂಕ್ರಾಮಿಕ ರೋಗದ ತಕ್ಷಣದ ಸನ್ನಿವೇಶದ ಆಚೆಗೆ ಚಾಚುತ್ತದೆ. ಜೊತೆಗೆ, ತೆರಿಗೆ ಪಾವತಿದಾರರಿಗೆ ಅಮೆರಿಕದ ಕಾಂಗ್ರೆಸ್ ಕಳೆದ ತಿಂಗಳು ಸಮ್ಮತಿಸಿದ ನಗದು ಪರಿಹಾರವನ್ನು 600 ಡಾಲರ್‌ಗಳಷ್ಟು ಹೆಚ್ಚಿಸಿ, ಅದನ್ನು 1400 ರಿಂದ 2000 ಡಾಲರ್‌ಗೆ ಏರಿಸಲಾಗಿದೆ. ಪ್ರಸ್ತುತ ನಿರುದ್ಯೋಗ ಭತ್ಯೆ ಪಡೆಯುತ್ತಿರುವ 18 ದಶಲಕ್ಷ ಅಮೆರಿಕನ್ನರಿಗೆ ನಿರುದ್ಯೋಗ ಪ್ರಯೋಜನವನ್ನು ವಾರಕ್ಕೆ 300 ರಿಂದ 400 ಡಾಲರ್‌ಗಳಿಗೆ ಏರಿಸಿ ಅದರ ಪ್ರಯೋಜನವನ್ನು ಸೆಪ್ಟೆಂಬರ್ ಅಂತ್ಯದವರೆಗೂ ವಿಸ್ತರಿಸಲಾಗಿದೆ. ಕನಿಷ್ಠ ವೇತನವನ್ನು ಪ್ರತಿ ಗಂಟೆಗೆ 15 ಡಾಲರ್‌ಗಳಿಗೆ ಏರಿಸಲಾಗಿದೆ. ಜನವರಿ ಅಂತ್ಯಕ್ಕೆ ಮುಕ್ತಾಯಗೊಳ್ಳಬೇಕಿದ್ದ ಮನೆ ಖಾಲಿ ಮಾಡಿಸುವುದನ್ನು ತಡೆದಿರುವ ರಾಷ್ಟ್ರವ್ಯಾಪಿ ಕಾರ್ಯಾಚರಣೆಯನ್ನು ಈಗ ಸೆಪ್ಟೆಂಬರ್ ಅಂತ್ಯದವರೆಗೆ ಮುಂದಕ್ಕೆ ಹಾಕಲಾಗಿದೆ. ಇಷ್ಟೇ ಅಲ್ಲದೆ, ಲಸಿಕೆ ವಿತರಣೆ, ಸಣ್ಣ ಉದ್ಯಮಗಳಿಗೆ ನೆರವು, ಶಿಕ್ಷಣ ಸಂಸ್ಥೆಗಳಿಗೆ ನೆರವು ಮುಂತಾದ ಅನೇಕ ವೆಚ್ಚಗಳು ಪ್ಯಾಕೇಜಿನಲ್ಲಿವೆ.

ಅಮೇರಿಕಾದ ಸರ್ಕಾರವು ಕೈಗೊಳ್ಳುತ್ತಿರುವ ಖರ್ಚು ವೆಚ್ಚಗಳಿಗಿಂತಲೂ ಹೆಚ್ಚು ಗಮನ ಸೆಳೆಯುವ ಅಂಶವೆಂದರೆ, ಈ ಪ್ಯಾಕೇಜ್ ಒದಗಿಸಲು ಬೇಕಾಗುವ ಹಣವನ್ನು ಹೊಂದಿಸಿಕೊಳ್ಳಲು, ಸಾಮಾನ್ಯ ಜನರ ಮೇಲೆ ತೆರಿಗೆ ಹಾಕುವ ಬದಲು ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆ ವಿಧಿಸಲು ಬಿಡೆನ್ ಮಾಡಿರುವ ಕೆಲವು ಪ್ರಸ್ತಾಪಗಳು. ಈ ಪ್ರಸ್ತಾಪಗಳ ಪೈಕಿ, ಷೇರು ಮಾರಾಟ–ಲಾಭದ ಮೇಲೆ ತೆರಿಗೆ ಹಾಕುವ ಮತ್ತು ಅತ್ಯಧಿಕ ಆದಾಯ ಸಂಪಾದಿಸುವವರ ಮೇಲೆ ವಿಧಿಸುವ ತೆರಿಗೆಯನ್ನು ಶೇ.40ಕ್ಕೆ ಏರಿಸುವ ಕ್ರಮಗಳು ಪ್ರಮುಖವಾಗಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ದುಡಿಯುವ ಜನರಿಗೆ ನೆರವು ಒದಗಿಸುವ ಸಲುವಾಗಿ ಶ್ರೀಮಂತರ ಮೇಲೆ ತೆರಿಗೆ ವಿಧಿಸುವುದು ಬಿಡೆನ್ ಅವರ ಕಾರ್ಯತಂತ್ರವಾಗಿದೆ. ದುಡಿಯುವ ಜನರಿಗೆ ನೆರವು ಒದಗಿಸುವ ಅಂಶವನ್ನು ಬಹಳ ದಿನಗಳಿಂದಲೂ ಎಡಪಂಥೀಯರು ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಬಿಡೆನ್ ಎಡಪಂಥದತ್ತ ವಾಲುತ್ತಿದ್ದಾರೆ ಎಂಬುದನ್ನು ಈ ಪ್ಯಾಕೇಜ್ ಸೂಚಿಸುತ್ತದೆ ಎಂಬುದು ಬಹುತೇಕ ಟೀಕಾಕಾರರ ಅಂಬೋಣ. ಆದರೆ, ಈ ಬದಲಾವಣೆಯು ಒಂದು ಹಠಾತ್ ವಿದ್ಯಮಾನವಲ್ಲ. ಬಿಡೆನ್ ಅವರ ಬದಲಾವಣೆಯನ್ನು ಗಮನಿಸಿರುವುದಾಗಿ ಅನೇಕ ಪ್ರಮುಖ ಅಮೆರಿಕನ್ ಪತ್ರಿಕೆಗಳು ಅಧ್ಯಕ್ಷೀಯ ಚುನಾವಣಾ ಪ್ರಚಾರದ ಅವಧಿಯುದ್ದಕ್ಕೂ ಹೇಳಿವೆ. ಬಿಡೆನ್ ಅವರು ಈಗ ಮಾಡಿರುವುದು ಏನೆಂದರೆ, ಚುನಾಯಿತರಾದ ಬಳಿಕ, ಒಬ್ಬ ಅವಕಾಶವಾದಿಯಾಗಿ ಭರವಸೆಗಳನ್ನು ಹುಸಿಗೊಳಿಸುವ ಬದಲು, ತಮ್ಮ ಚುನಾವಣಾ ಭರವಸೆಗಳಿಗೆ ನಿಷ್ಠರಾಗಿಯೇ ಉಳಿದಿದ್ದಾರೆ.

ಬಿಡೆನ್ ಅವರ ಸೈದ್ಧಾಂತಿಕ ನಿಲುವಿನ ಬಗ್ಗೆ ಹೇಳುವುದಾದರೆ, ಅಧ್ಯಕ್ಷ ಸ್ಥಾನಕ್ಕೆ ಡೆಮಾಕ್ರೆಟಿಕ್ ಪಕ್ಷದ ಪ್ರತಿನಿಧಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ, ಪಕ್ಷದ ಆಂತರಿಕ ಸ್ಪರ್ಧೆಯಲ್ಲಿ ಸೋತ ಅಧ್ಯಕ್ಷೀಯ–ಅಭ್ಯರ್ಥಿ ಬರ್ನಿ ಸ್ಯಾಂಡರ್ಸ್ ಅವರಂತೆ ಬಿಡೆನ್ ಎಡಪಂಥದ ಅನುಯಾಯಿ ಅಲ್ಲ. ತಾನು ಎಡಪಂಥೀಯನೆಂದು ಬಿಡೆನ್ ಎಂದೂ ಹೇಳಿಕೊಂಡಿರಲಿಲ್ಲ. ಬರಾಕ್ ಒಬಾಮಾ ಅವರಿಗೆ ಉಪಾಧ್ಯಕ್ಷರಾಗಿದ್ದ ಬಿಡೆನ್, ಅವರದೇ ಸೈದ್ಧಾಂತಿಕ ನಿಲುವಿನವರು, ಅದು ಎಡ ಪಂಥದಿಂದ ಬಹಳ ದೂರದಲ್ಲಿರುವ ನಿಲುವು. ಹಾಗಾದರೆ, ಅವರ ಈ ಹೊಸ ನಿಲುವನ್ನು ಅರ್ಥೈಸುವುದು ಹೇಗೆ? ಅವರ ನಿಲುವನ್ನು ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲುವು ಸಾಧಿಸುವ ಉದ್ದೇಶದಿಂದ ತಳೆದ ಅವಕಾಶವಾದಿ ನಿಲುವು ಎನ್ನುವಂತಿಲ್ಲ. ಅದಾಗಿದ್ದರೆ, ಅವರು ಚುನಾಯಿತರಾದ ನಂತರ ತಮ್ಮ ನಡು ಪಂಥೀಯ ನಿಲುವಿಗೆ ಸದ್ದಿಲ್ಲದೆ ಹಿಂದಿರುಗುತ್ತಿದ್ದರು.

ಬಿಡೆನ್ ಅವರ ಬದಲಾದ ನಿಲುವು, ಬಂಡವಾಳಶಾಹಿ ಬಿಕ್ಕಟ್ಟಿನ ಗಂಭೀರತೆಯನ್ನು ಸೂಚಿಸುತ್ತದೆ. ಈ ಬಿಕ್ಕಟ್ಟನ್ನು ನಿರ್ಲಕ್ಷಿಸುವುದು ಅಥವಾ ಅದು ಬಿಕ್ಕಟ್ಟೇ ಅಲ್ಲ ಎಂದು ಸೋಗು ಹಾಕುವುದು ಹಾನಿಕಾರಕವಾಗಿ ಪರಿಣಮಿಸಿದೆ. ಅಮೆರಿಕದ ಈ ಹಿಂದಿನ ಅಧ್ಯಕ್ಷೀಯ ಚುನಾವಣೆಯಲ್ಲಿ, ಅಂದಿನ ದಿನಮಾನಗಳಲ್ಲಿ ಅಮೇರಿಕಾ ಮತ್ತು ಇತರ ದೇಶಗಳನ್ನು ಕಾಡುತ್ತಿದ್ದ 2008ರ ಆರ್ಥಿಕ ಬಿಕ್ಕಟ್ಟನ್ನು ನಿರ್ಲಕ್ಷಿಸಿದ ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷೀಯ–ಅಭ್ಯರ್ಥಿ ಹಿಲರಿ ಕ್ಲಿಂಟನ್ ಅವರ ಧೋರಣೆಯೇ ಅವರ ಸೋಲಿಗೆ ಕಾರಣವಾಯಿತು ಮತ್ತು ಟ್ರಂಪ್ ಅವರನ್ನು ಅಧಿಕಾರಕ್ಕೆ ತಂದಿತು. ಟ್ರಂಪ್ ಅವರ ಗೆಲುವನ್ನು ಮತದಾರರು ಇದ್ದಕ್ಕಿದ್ದಂತೆ ಬಲಪಂಥೀಯರಾಗಿ ಬದಲಾದರು ಎಂದು ಅರ್ಥೈಸಲಾಗದು. ಬಿಕ್ಕಟ್ಟಿನಲ್ಲಿದ್ದ ಅರ್ಥವ್ಯವಸ್ಥೆಯು ದುಡಿಯುವ ಜನರಿಗೆ ಅತೀವ ಸಂಕಟವನ್ನು ಉಂಟುಮಾಡಿತ್ತು ಮತ್ತು ಅದರ ಬಗ್ಗೆ ಹಿಲರಿ ಕ್ಲಿಂಟನ್ ಕಾಳಜಿ ವಹಿಸಲಿಲ್ಲ. ಹಿಲರಿ ಕ್ಲಿಂಟನ್ ಮಾಡಿದ ತಪ್ಪನ್ನು ಬಿಡೆನ್ ಮಾಡಲಿಲ್ಲ. ಬಿಕ್ಕಟ್ಟು ನೆಲೆಸಿರುವುದು ನಿಜ ಮತ್ತು ಅದು ಗಂಭೀರ ಸ್ವರೂಪದ್ದು ಎಂಬುದನ್ನು ಮತ್ತು ಅದು ಕೊರೊನಾ ಹರಡುವ ಮುನ್ನವೇ ನೆಲೆಸಿತ್ತು ಎಂಬುದನ್ನು, ಮತ್ತು, ಕೊರೊನಾ ಸಾಂಕ್ರಾಮಿಕವು ಬಿಕ್ಕಟ್ಟನ್ನು ತೀವ್ರಗೊಳಿಸಿತು ಎಂಬುದನ್ನು ಬಿಡೆನ್ ಗುರುತಿಸಿದರು.

ಬಂಡವಾಳಗಾರರು ಹೊಂದಿದ್ದಾರೆ ಎಂದು ಭಾವಿಸಲಾದ "ಮೃಗೀಯ ಧೈರ್ಯೋತ್ಸಾಹ"ವನ್ನು ಬಡಿದೆಬ್ಬಿಸುವ ಸಲುವಾಗಿ ಕಾರ್ಪೊರೇಟ್–ಪರ ನೀತಿಗಳನ್ನು ಅನುಸರಿಸುವುದರಿಂದ ಏನೂ ಪ್ರಯೋಜನವಾಗದು ಎಂಬುದು ಮತ್ತು ಬಿಕ್ಕಟ್ಟಿನ ಬಗ್ಗೆ ಈ ಸನ್ನಿವೇಶದಲ್ಲಿ ಏನಾದರೂ ಮಾಡಲೇಬೇಕು ಎಂಬುದು ಬಹುತೇಕ ಮಂದಿಗೆ ಈಗಾಗಲೇ ಸ್ಪಷ್ಟವಾಗಿದೆ. ಹಾಗಾಗಿ, ಒಟ್ಟಾರೆ ಬೇಡಿಕೆ–ಕೊರತೆಯ ಕಾರಣದಿಂದ ಉಂಟಾಗಿರುವ ಈ ಬಿಕ್ಕಟ್ಟನ್ನು ಪರಿಹರಿಸಬೇಕು ಎಂದಾದರೆ, ಅರ್ಥವ್ಯವಸ್ಥೆಯಲ್ಲಿ ಬೇಡಿಕೆ ಹೆಚ್ಚುವಂತಹ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಮತ್ತು ಅದನ್ನು ಸಾಧಿಸಬಹುದಾದ ಒಂದು ಸ್ಪಷ್ಟ ವಿಧಾನವೆಂದರೆ, ಈ ಬಿಕ್ಕಟ್ಟಿನ ವಿಶೇಷ ಸಂದರ್ಭವನ್ನು ಪರಿಗಣಿಸಿ, ಹಣ ವರ್ಗಾವಣೆಯ ಮೂಲಕ, ದುಡಿಯುವ ಜನರ ಕೈಗೆ ಕೊಳ್ಳುವ ಶಕ್ತಿಯನ್ನು ತುಂಬಬೇಕಾಗುತ್ತದೆ. ಅಂದರೆ, ಎಡಪಂಥದ ಮರುಹಂಚಿಕೆಯ ಕಾರ್ಯಸೂಚಿಯನ್ನು ಅಳವಡಿಸಿಕೊಳ್ಳುವ ಮೂಲಕ ಈ ಕಾರ್ಯವನ್ನು ಸಾಧಿಸಬೇಕಾಗುತ್ತದೆ. ಈ ಅನಿವಾರ್ಯತೆಯಿಂದಾಗಿಯೇ ಬಿಡೆನ್ ಅವರು ಎಡಪಂಥದತ್ತ ವಾಲಿದರು; ವೈಯುಕ್ತಿಕವಾಗಿ ಬಿಡೆನ್ ಒಬ್ಬ ನಡುಪಂಥೀಯ ನಿಲುವಿನ ಕಟ್ಟಾ ಸಮರ್ಥಕರಾಗಿದ್ದರೂ ಸಹ.

ಬಿಡೆನ್ ಅವರ ರಕ್ಷಣಾ ಪ್ಯಾಕೇಜಿನ ಬಗ್ಗೆ ಕಾರ್ಪೊರೇಟ್ ಅಮೇರಿಕಾಗೆ ಸಮಾಧಾನವಿಲ್ಲ. ಶೀಘ್ರದಲ್ಲೇ ಹಣಕಾಸು ಬಂಡವಾಳವು ತನ್ನ ಅಸಮಾಧಾನವನ್ನು ಹೊರಹಾಕಲಿದೆ. ವಿಶ್ವದ ಪ್ರಧಾನ ಬಂಡವಾಳಶಾಹಿ ದೇಶವಾಗಿರುವ ಮತ್ತು ಅದರ ಡಾಲರ್ ಕರೆನ್ಸಿಯನ್ನು "ಚಿನ್ನಕ್ಕೆ ಸಮ" ಎಂದು ವಿಶ್ವವೇ ಭಾವಿಸಿರುವ ಕಾರಣದಿಂದ, ವಿಶ್ವದ ಇತರ ಪ್ರಮುಖ ಬಂಡವಾಳಶಾಹಿ ದೇಶಗಳಿಗೆ ಹೋಲಿಸಿದರೆ, ಯಾವ ದೇಶಕ್ಕೂ ಇಲ್ಲದ ಹೆಚ್ಚು ಸ್ವಾತಂತ್ರ್ಯವನ್ನು ಅಮೇರಿಕಾದ ಹೊಂದಿದೆ ಎಂಬುದು ನಿಜವೇ. ಆದರೆ, ಬಿಡೆನ್ ತಮ್ಮ ಪ್ರಸಕ್ತ ನೀತಿ–ನಿಲುವುಗಳನ್ನು ಇದೇ ದಿಕ್ಕಿನಲ್ಲಿ ಮುಂದುವರಿಸಿದ್ದೇ ಆದರೆ, ಅಮೇರಿಕಾ ಹೊಂದಿರುವ ವಿಶೇಷ ಸ್ಥಾನ–ಮಾನ ಬಹಳ ಕಾಲ ಮುಂದುವರಿಯುವುದು ಶಕ್ಯವಿಲ್ಲ. ಅಂತಹ ಪರಿಸ್ಥಿತಿ ಎದುರಾದ ಸಂದರ್ಭದಲ್ಲಿ, ಬಿಡೆನ್ ಈ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿ ಕೊಳ್ಳಬೇಕಾಗುತ್ತದೆ: ಒಂದೋ ತಮ್ಮ ಪ್ರಸಕ್ತ ನೀತಿ–ನಿಲುವುಗಳ ಸಮರ್ಥನೆ, ಇಲ್ಲವೇ ಜಾಗತೀಕರಣಗೊಂಡ ಹಣಕಾಸು ಬಂಡವಾಳದ ನೀತಿಗಳಿಗೆ ಶರಣಾಗತಿ. ಒಂದು ವೇಳೆ ಅವರು ತಮ್ಮ ಪ್ರಸಕ್ತ ನೀತಿ–ನಿಲುವುಗಳನ್ನು ಸಮರ್ಥಿಸಿಕೊಳ್ಳುವ ಆಯ್ಕೆ ಮಾಡಿಕೊಂಡರೆ, ಆಗ, ಅವರು ಎಡಪಂಥದತ್ತ ವಾಲುತ್ತಿರುವ ತಮ್ಮ ನೀತಿ–ನಿಲುವುಗಳನ್ನು ಮತ್ತಷ್ಟು ಬಲಪಡಿಸಿಕೊಳ್ಳಬೇಕಾಗುತ್ತದೆ.

ಬಿಡೆನ್ ಅವರು ಘೋಷಿಸಿರುವ ರಕ್ಷಣಾ ಪ್ಯಾಕೇಜನ್ನು ಮೋದಿ ಸರ್ಕಾರವು ಈಗಾಗಲೇ ಕಂತುಗಳಲ್ಲಿ ಘೋಷಣೆ ಮಾಡಿರುವ ಪ್ಯಾಕೇಜ್‌ಗಳೊಂದಿಗೆ ಹೋಲಿಸುವುದು ಬಾಲಿಷವಾಗುತ್ತದೆ. ಸಂಕಷ್ಟಕ್ಕೀಡಾದ ಜನರಿಗೆ ನೆರವು ಒದಗಿಸುವಲ್ಲಿ ಮೋದಿ ಸರ್ಕಾರವು ಒಂದು ನಿರ್ದಯ ನೀತಿಯನ್ನು ಅನುಸರಿಸಿತು. ಆಸ್ತಿ–ಪಾಸ್ತಿ ಹೊಂದಿದ ವರ್ಗಗಳ ಸವಲತ್ತು–ಹಕ್ಕುಗಳಿಗೆ ಚ್ಯುತಿ ತಾರದಂತಹ ರೀತಿಯ ನೆರವು ಒದಗಿಸುವುದನ್ನೂ ಸಹ ಬಿಟ್ಟುಬಿಟ್ಟಿತು. ಕೊನೆಯ ಪಕ್ಷ, ಒಂದು ಅಸಾಧಾರಣ ಸನ್ನಿವೇಶವೆಂದು ಎಲ್ಲರೂ ಗುರುತಿಸುವ ಈ ಸಾಂಕ್ರಾಮಿಕದ ಸಂದರ್ಭದಲ್ಲಾದರೂ, ಜಾಗತೀಕರಣಗೊಂಡ ಹಣಕಾಸು ಬಂಡವಾಳದ ವಿರೋಧವನ್ನು ಕೆರಳಿಸದೆ, ದುಡಿಯುವ ಜನರಿಗೆ ಸಹಾಯ ಮಾಡುವ ಕೆಲವು ಕ್ರಮಗಳನ್ನಾದರೂ ಸರ್ಕಾರವು ಕೈಗೊಳ್ಳಬಹುದಿತ್ತು. ಆದರೆ ಮೋದಿ ಸರಕಾರದ ನಿರ್ದಯತೆ ಎಷ್ಟೆಂದರೆ, ಈ ಕನಿಷ್ಠ ಕರ್ತವ್ಯದ ನಿರ್ವಹಣೆಯಿಂದಲೂ ಅದು ತಪ್ಪಿಸಿಕೊಂಡಿತು. ಆರ್ಥಿಕ ಬಿಕ್ಕಟ್ಟನ್ನು ನಿವಾರಿಸಲು ಅದು ಜನರನ್ನು ಹಿಂಡಿ ಹಿಪ್ಪೆಮಾಡುವ ಕಾರ್ಪೊರೇಟ್–ಹಣಕಾಸು ಕುಳಗಳ ಕಾರ್ಯಸೂಚಿಯೇ ಪರಿಹಾರವೆಂದು ತಿಳಿದು ಅದನ್ನೇ ನಿಷ್ಠಾಪೂರ್ವಕವಾಗಿ ಜಾರಿ ಮಾಡುವಲ್ಲಿ ತೊಡಗಿದೆ. ಆದರೆ, ಸರ್ಕಾರವು ಅನುಸರಿಸುತ್ತಿರುವ ಈ ಮಾರ್ಗವು ದೇಶದ ಆರ್ಥಿಕ ಬಿಕ್ಕಟ್ಟನ್ನು ನಿವಾರಿಸಲು ಅಸಮರ್ಥವಾಗಿದೆ ಮಾತ್ರವಲ್ಲ, ಹಾನಿಕಾರಕವೂ ಹೌದು. ಆದ್ದರಿಂದಲೇ, ದೇಶದ ಜನರ ಅತಿ ದೊಡ್ಡ ವಿಭಾಗವಾದ ರೈತರು ಈ ಕಡು ಚಳಿಯಲ್ಲೂ ದೆಹಲಿ ಗಡಿಯ ಹೊರಗೆ ಪ್ರತಿಭಟನೆ ನಡೆಸುತ್ತಿದ್ದಾರೆ.

ಕೊರೊನಾ ಕಾರಣದಿಂದಾಗಿ ಬಾಡಿಗೆ ತೆರಲಾರದ ಜನರನ್ನು ಮನೆಯಿಂದ ಹೊರ ಹಾಕದಂತೆ ಟ್ರಂಪ್‌ನಂತಹ ಅಧ್ಯಕ್ಷರೂ ಸಹ ಆಜ್ಞೆ ಹೊರಡಿಸಿದ್ದರು. ಆದರೆ, ಕೇವಲ ನಾಲ್ಕು ಗಂಟೆಗಳ ಎಚ್ಚರಿಕೆಯ ನೋಟೀಸ್ ಕೊಟ್ಟು ಒಂದು ಅಮಾನವೀಯ ಲಾಕ್‌ಡೌನ್ ಘೋಷಿಸಿದ ಮೋದಿ ಸರ್ಕಾರವು ➚



ಒಟ್ಟಾರೆ ಬೇಡಿಕೆ-ಕೊರತೆಯ ಕಾರಣದಿಂದ ಉಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸಬೇಕು ಎಂದಾದರೆ, ಅರ್ಥವ್ಯವಸ್ಥೆಯಲ್ಲಿ ಬೇಡಿಕೆ ಹೆಚ್ಚುವಂತಹ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಮತ್ತು ಅದನ್ನು ಸಾಧಿಸಬಹುದಾದ ಒಂದು ಸ್ಪಷ್ಟ ವಿಧಾನವೆಂದರೆ, ಈ ಬಿಕ್ಕಟ್ಟಿನ ವಿಶೇಷ ಸಂದರ್ಭವನ್ನು ಪರಿಗಣಿಸಿ, ಹಣ ವರ್ಗಾವಣೆಯ ಮೂಲಕ, ದುಡಿಯುವ ಜನರ ಕೈಗೆ ಕೊಳ್ಳುವ ಶಕ್ತಿಯನ್ನು ತುಂಬಬೇಕಾಗುತ್ತದೆ. ಅಂದರೆ, ಎಡಪಂಥದ ಮರುಹಂಚಿಕೆಯ ಕಾರ್ಯಸೂಚಿಯನ್ನು ಅಳವಡಿಸಿಕೊಳ್ಳುವ ಮೂಲಕ ಈ ಕಾರ್ಯವನ್ನು ಸಾಧಿಸಬೇಕಾಗುತ್ತದೆ. ಈ ಅನಿವಾರ್ಯತೆಯಿಂದಾಗಿಯೇ ಬಿಡೆನ್ ವೈಯುಕ್ತಿಕವಾಗಿ ಒಬ್ಬ ನಡುಪಂಥೀಯ ನಿಲುವಿನ ಕಟ್ಟಾ ಸಮರ್ಥಕರಾಗಿದ್ದರೂ ಸಹ ಎಡಪಂಥೀಯ ಕಾರ್ಯಸೂಚಿಯತ್ತ ವಾಲಿದರು.



ಆದರೆ ಮೋದಿ ಸರಕಾರದ ನಿರ್ದಯತೆ ಎಷ್ಟೆಂದರೆ, ತನ್ನ ಕನಿಷ್ಠ ಕರ್ತವ್ಯದ ನಿರ್ವಹಣೆಯಿಂದಲೂ ಅದು ತಪ್ಪಿಸಿಕೊಂಡು, ಆರ್ಥಿಕ ಬಿಕ್ಕಟ್ಟನ್ನು ನಿವಾರಿಸಲು ಅದು ಜನರನ್ನು ಹಿಂಡಿ ಹಿಪ್ಪೆಮಾಡುವ ಕಾರ್ಪೊರೇಟ್-ಹಣಕಾಸು ಕುಳಗಳ ಕಾರ್ಯಸೂಚಿಯೇ ಪರಿಹಾರ ವೆಂದು ತಿಳಿದು ಅದನ್ನೇ ನಿಷ್ಠಾ ಪೂರ್ವಕವಾಗಿ ಜಾರಿ ಮಾಡುವಲ್ಲಿ ತೊಡಗಿದೆ.

ಭಾರತದ ಕಾರ್ಮಿಕರ ಪ್ರಥಮ ರಾಜಕೀಯ ಮುಷ್ಕರ



ಪುಟ 11 ರಿಂದ

ಮುಷ್ಕರ ಮತ್ತು ಸಶಸ್ತ್ರ ಪ್ರತಿರೋಧದ ವಿಧಾನವನ್ನು ಅಳವಡಿಸಿಕೊಂಡು ಮುನ್ನಡೆದಿತ್ತು. ಆದ್ದರಿಂದ ಅಂತರರಾಷ್ಟ್ರೀಯ ಶ್ರಮಜೀವಿಗಳ ಕ್ರಾಂತಿಕಾರಿ ಸಂಪ್ರದಾಯವನ್ನು ಅನುಸರಿಸಿ, ಮುಂಬಯಿ ಕಾರ್ಮಿಕರು 1908ರ ಸಾಮ್ರಾಜ್ಯಶಾಹಿ-ವಿರೋಧಿ ದಂಗೆಯಲ್ಲಿ ರಾಜಕೀಯ ಸಾರ್ವತ್ರಿಕ ಮುಷ್ಕರ ಮತ್ತು ಬಹಿರಂಗ ಪ್ರತಿರೋಧದ ಅದೇ ವಿಧಾನವನ್ನು ಆಶ್ರಯಿಸಿದರು.

ಇದಲ್ಲದೆ, ಆ ಅವಧಿಯಲ್ಲಿ ಕಾರ್ಮಿಕ ವರ್ಗದ ಯಾವುದೇ ರಾಜಕೀಯ ಪಕ್ಷವು ಭಾರತದಲ್ಲಿ ಜನಿಸಿದ್ದಿರಲಿಲ್ಲ, ತಮ್ಮದೇ ವರ್ಗದ ಸಿದ್ಧಾಂತದ ದೃಷ್ಟಿಯಿಂದ ಕಾರ್ಮಿಕ ವರ್ಗಕ್ಕೆ ಯಾವುದೇ ರಾಜಕೀಯ ಮಾರ್ಗದರ್ಶನ ಇರಲಿಲ್ಲ. ಈ ನಕಾರಾತ್ಮಕ ವೈಶಿಷ್ಟ್ಯದ ಹೊರತಾಗಿಯೂ, ಕಾರ್ಮಿಕರು ತಮ್ಮದೇ ಆದ ಕ್ರಾಂತಿಕಾರಿ ಮಾರ್ಗವನ್ನು ಆರಿಸಿಕೊಳ್ಳಲು ವಿಫಲರಾಗಲಿಲ್ಲ, ಇದು ಮುಂಬೈ ಶ್ರಮಜೀವಿಗಳ ಈ ಹೋರಾಟದ ಐತಿಹಾಸಿಕ ಲಕ್ಷಣವನ್ನು ಎತ್ತಿತೋರಿಸುತ್ತದೆ.

ಭಾರತ ರಾಷ್ಟ್ರೀಯ ಕಾಂಗ್ರೆಸ್ ರೂಪಿಸಿದ ಮಾರ್ಗವು ಅಧೈರ್ಯ ಮತ್ತು ಸಾಮ್ರಾಜ್ಯಶಾಹಿಯೊಂದಿಗೆ ಸಾಂದರ್ಭಿಕ ರಾಜಿ ಮಾಡಿಕೊಳ್ಳುವ ಮಾರ್ಗವಾಗಿತ್ತು. ಆದರೆ ಕಾರ್ಮಿಕ ವರ್ಗ ತೋರಿಸಿದ ಮಾರ್ಗವು ಕಾಂಗ್ರೆಸ್ಸಿನ ಬೂರ್ಜ್ವಾ ನೇತೃತ್ವದ ಹಾದಿಗೆ ನೇರವಾಗಿ ವಿರುದ್ಧವಾಗಿತ್ತು ಮತ್ತು ಆದ್ದರಿಂದ ಮುಂಬೈ ಕಾರ್ಮಿಕರ ಈ ರಾಜಿಯಾಗದ ಹೋರಾಟವನ್ನು ಭಾರತದ ಬೂರ್ಜ್ವಾ ವರ್ಗಕ್ಕೆ ಹೃತ್ಪೂರ್ವಕವಾಗಿ ಸ್ವೀಕರಿಸಲು ಸಾಧ್ಯವಾಗಲಿಲ್ಲ.

ರಾಜಕೀಯ ಅಪಕ್ವತೆ, ರಾಜಕೀಯ ತತ್ವಶಾಸ್ತ್ರದ ಮತ್ತು ತಮ್ಮದೇ ಆದ ಒಂದು ಪಕ್ಷದ ಅನುಪಸ್ಥಿತಿಯ ಹೊರತಾಗಿಯೂ, ಮುಂಬೈ ಕಾರ್ಮಿಕ ವರ್ಗದ ಈ ಹೋರಾಟ ಬೆಳೆದದ್ದು ಮತ್ತು ಭಾರತದ ಜನರಿಗೆ ಸಾಮ್ರಾಜ್ಯಶಾಹಿ-ವಿರೋಧಿ ಸಾಮೂಹಿಕ ಹೋರಾಟದ ಸರಿಯಾದ ಹಾದಿಯನ್ನು ತೋರಿಸಿದ್ದು, ಭಾರತದ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಮಹತ್ವದ್ದು.

ಧರ್ಮ-ಒಂದು ನಕಾರಾತ್ಮಕ ಲಕ್ಷಣ

ತಮ್ಮ ಕಿರಿ ಬೂರ್ಜ್ವಾ ಸಾಮಾಜಿಕ ನೆಲೆ ಮತ್ತು ಪುನರುಜ್ಜೀವನ ದೃಷ್ಟಿಕೋನದ ಕಾರಣ, ತಥಾಕಥಿತ ತೀವ್ರಗಾಮಿ-ರಾಷ್ಟ್ರೀಯವಾದಿಗಳು ತಮ್ಮ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಮತ್ತು ರಾಜಕೀಯ ಚಟುವಟಿಕೆಗಳನ್ನು ಧರ್ಮಕ್ಕಿಂತ ಮೇಲಿರಿಸಲು ಅಸಮರ್ಥರಾಗಿದ್ದರು. ಬದಲಾಗಿ, ಅವರ ರಾಜಕೀಯ ನಿಲುವು ಹೆಚ್ಚಾಗಿ ಜನರ ಧಾರ್ಮಿಕ ಮತ್ತು ಊಳಿಗಮಾನ್ಯ ನಂಬಿಕೆಗಳ ಮೇಲೆ ಆಧಾರಿತವಾಗಿತ್ತು.

ತಿಲಕ್-ವಾದಿಗಳು ಧಾರ್ಮಿಕ ಮತ್ತು ಜಾತಿ ಸಂವೇದನೆಗಳಿಗೆ ಎಷ್ಟು ಮೊರೆಹೋಗಿದ್ದರು ಎಂಬುದನ್ನು ಅವರ ಆಂದೋಲನದ ಕಾರ್ಯತಂತ್ರಗಳು ಸ್ಪಷ್ಟವಾಗಿ ತೋರಿಸಿದ್ದವು. ಕಾರ್ಮಿಕ ವರ್ಗದ ಪ್ರದೇಶಗಳಲ್ಲಿ ಅವರು ಅಂಟಿಸಿದ ಪೋಸ್ಟರ್‌ಗಳಲ್ಲಿ ಒಂದು, ಮದ್ಯಂತರದ ನಂತರ ಕೆಲಸಕ್ಕೆ ಹೋಗುವ ಯಾವುದೇ ಕಾರ್ಮಿಕನನ್ನು ಸಫಾಯಿ ಕರ್ಮಚಾರಿಯ ಅಥವಾ ಯುರೋಪಿಯನ್ನರ ಮಗ ಎಂದು ಪರಿಗಣಿಸಲಾಗುತ್ತದೆ ಎಂದು ಹೇಳಿತ್ತು. ಇನ್ನೊಂದು, ಮುಷ್ಕರದ ಸಂದರ್ಭದಲ್ಲಿ ಕೆಲಸ ಮುಂದುವರೆಸಿದ ಕೆಲಸಗಾರರನ್ನು ಗೋ-ಹತ್ಯೆ ಮಾಡಿದ ಅಪರಾಧಿ ಎಂದು ಭಾವಿಸಲಾಗುವುದು ಎಂದು ಘೋಷಿಸಿತ್ತು.

ಕಾರ್ಮಿಕರನ್ನು ಹಿಡಿದಿಡಲು ಅನೇಕ ಇತರ ಮೂಢನಂಬಿಕೆ ಆಧಾರಿತ ಮನವಿಗಳನ್ನು ಅವರು ಬಳಸುತ್ತಿದ್ದರು. ಕಾರ್ಮಿಕರಲ್ಲಿ ಉನ್ನತ ಜಾತಿ ಮತ್ತು ಇತರ ಊಳಿಗಮಾನ್ಯ ಸಂಪ್ರದಾಯಗಳಿಗಿದ್ದ ಗೌರವಗಳನ್ನು ಸಹ ಬಳಸಿಕೊಳ್ಳಲಾಯಿತು. ತಿಲಕ್ ಮತ್ತು ಅನೇಕ ತಿಲಕವಾದಿಗಳು ಜಾತಿಯಿಂದ ಬ್ರಾಹ್ಮಣರಾಗಿದ್ದರಿಂದ, ಕೆಳಜಾತಿಯ ಕಾರ್ಮಿಕರು ಸ್ವಾಭಾವಿಕವಾಗಿ ಅವರ ಬಗ್ಗೆ ಅತ್ಯಂತ ಪೂಜ್ಯ ಮನೋಭಾವವನ್ನು ಬೆಳೆಸಿಕೊಂಡಿದ್ದರು. ಈ ಜಾತಿ-ಪ್ರತಿಷ್ಠೆಯನ್ನು ತಿಲಕವಾದಿಗಳು ಸಂಘಟನಾತ್ಮಕ ಚಟುವಟಿಕೆಗಳಲ್ಲಿ ಬಳಸಿಕೊಂಡರು.

ಅದೇ ರೀತಿ ಬಂಗಾಳದಲ್ಲಿ, ಅರಬಿಂದೋ ಘೋಷ್, ಬಿಪಿನ್ ಪಾಲ್ ಮತ್ತು ಇತರ ತೀವ್ರಗಾಮಿಗಳು ಧಾರ್ಮಿಕ ಮನವಿಗಳೊಂದಿಗೆ ಕಾರ್ಮಿಕರು ಮತ್ತು ಜನಸಮೂಹವನ್ನು ಸಂಪರ್ಕಿಸುತ್ತಿದ್ದರು.

ವಾಸ್ತವವಾಗಿ, ಈ ರಾಷ್ಟ್ರೀಯ ನಾಯಕರು ರಾಷ್ಟ್ರೀಯತೆ ಮತ್ತು ಹಿಂದೂ ಸಂಪ್ರದಾಯವಾದದ ಪ್ರತಿಗಾಮಿ ಸಂಯೋಜನೆಯನ್ನು ಮಾಡಿದರು ಮತ್ತು ಪಾಶ್ಚಿಮಾತ್ಯ ನಾಗರಿಕತೆಗೆ ಪರ್ಯಾಯವಾಗಿ ಅವರು ಪ್ರಾಚೀನ 'ಹಿಂದೂ ನಾಗರಿಕತೆ' ಅಥವಾ 'ಆರ್ಯನ್ ನಾಗರಿಕತೆಯ ಶ್ರೇಷ್ಠತೆ'ಯನ್ನು ಸ್ಥಾಪಿಸಲು ಪ್ರಯತ್ನಿಸಿದರು. ತಿಲಕ್ 'ಗೋಸಂರಕ್ಷಣಾ ಸೊಸೈಟಿ' ಸ್ಥಾಪಿಸಿ 'ಶಿವಾಜಿ ಹಬ್ಬ' ಮತ್ತು 'ಗಣಪತಿ ಉತ್ಸವ' ಪರಿಚಯಿಸಿದರು. ಮತ್ತು ಈ ಪ್ರತಿಗಾಮಿ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಅವರು ರಾಷ್ಟ್ರೀಯತೆಯನ್ನು ಪ್ರಚಾರ ಮಾಡಲು ವಾಹನಗಳಾಗಿ ಬಳಸುತ್ತಿದ್ದರು. ಅದೇ ರೀತಿ ಬಂಗಾಳದಲ್ಲಿ ರಾಷ್ಟ್ರೀಯತೆಯನ್ನು ಧರ್ಮದ ಆಧಾರದ ಮೇಲೆ ಸಂಘಟಿಸಲು ಪ್ರಯತ್ನಿಸಲಾಯಿತು. ಬಂಗಾಳದ ರಾಷ್ಟ್ರೀಯವಾದಿಗಳು ಮತ್ತು ತೀವ್ರಗಾಮಿಗಳು ಕಾಳಿ ದೇವಿಯ ಆರಾಧನೆಯನ್ನು ರಾಜಕೀಯ ಬಲದ ಮೂಲವಾಗಿ ಜನಪ್ರಿಯಗೊಳಿಸಿದರು. ಆದ್ದರಿಂದ ಅವರ ಪ್ರಯತ್ನವು ಪ್ರಾಚೀನ ಹಿಂದೂ ಧರ್ಮ ಮತ್ತು ಅಲೌಕಿಕ ವಿಶ್ವಾಸಾರ್ಹತೆಗಳ ಆಧಾರದ ಮೇಲೆ ಭಾರತದ ಅತ್ಯಂತ ಪ್ರಗತಿಪರ ಚಳುವಳಿಯಾದ ರಾಷ್ಟ್ರೀಯ ಚಳುವಳಿಯನ್ನು ಮುನ್ನಡೆಸುವುದಾಗಿತ್ತು. 1907 ರ ಮೇನಲ್ಲಿ 3500 ಕೆಲಸಗಾರರು ಭಾಗವಹಿಸಿದ್ದ, ಬಿ.ಬಿ. ಮತ್ತು ಸಿ.ಐ. ರೈಲ್ವೆಯ ಪರೆಲ್ ಕಾರ್ಯಾಗಾರದ ಕಾರ್ಮಿಕರ ಮುಷ್ಕರದ ಸಂದರ್ಭದಲ್ಲಿ ಈ ಹಿಂದೂ-ಜಾತಿವಾದ ಮತ್ತು ಸುಧಾರಣಾ ವಿರೋಧಿ ಧಾರ್ಮಿಕತೆಯು, ಆರಂಭಿಕ ಹಂತದಲ್ಲಿದ್ದ ಭಾರತದ ಕಾರ್ಮಿಕ-ವರ್ಗದ ಚಳವಳಿಯ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರಿತು. ಧರ್ಮದೊಂದಿಗೆ ರಾಜಕೀಯವನ್ನು ಬೆರೆಸುವ ಕೆಟ್ಟ ಪರಿಣಾಮವು ಆರಂಭಿಕ ಹಂತದಲ್ಲಿ ಮಾತ್ರವಲ್ಲ, ಹಿಂದೂ ರಾಷ್ಟ್ರೀಯತೆ, ಮತ್ತು ಎರಡು ರಾಷ್ಟ್ರಗಳ ಸಿದ್ಧಾಂತಕ್ಕೆ ಸೇರಿಕೊಂಡಿತು ಮತ್ತು ಮುಸ್ಲಿಂಲೀಗ್‌ನ ಇಸ್ಲಾಮ್‌ವಾದದ ಜೊತೆಗೂಡಿ, ನಂತರದ ಅವಧಿಯಲ್ಲಿ ರಾಜಕೀಯ ಚಳುವಳಿಗಳನ್ನು, ಕಾರ್ಮಿಕ ವರ್ಗದ ಭ್ರಾತೃತ್ವದ ಪ್ರಜ್ಞೆಯನ್ನು ಕೆಡಿಸುವುದನ್ನು ಮುಂದುವರೆಸಿತು.

ಭಾರತದ ಕಾರ್ಮಿಕ-ವರ್ಗದ ಚಳುವಳಿ ಇನ್ನೂ ಸಾಕಷ್ಟು ಸಂಘಟಿತ ಮತ್ತು ಶಕ್ತಿಯುತ ಹಂತವನ್ನು ತಲುಪಿರಲಿಲ್ಲ. ಆದರೆ ಹಲವಾರು ಸಂಘಟನೆಗಳ ಹೋರಾಟಗಳ ವಿಸ್ತರಣೆ ಮತ್ತು ಬೆಳವಣಿಗೆಯು ಒಂದು ಪ್ರಾಥಮಿಕ ಲಕ್ಷಣವಾಗಿದ್ದರೂ, ಆಧುನಿಕ ಕಾರ್ಮಿಕ ಸಂಘಗಳನ್ನು ರಚಿಸಲು ಮತ್ತು ಸರಿಯಾಗಿ ಸಂಘಟಿತ ಟ್ರೇಡ್ ಯೂನಿಯನ್ ಆಂದೋಲನಕ್ಕೆ ಅಡಿಪಾಯ ಹಾಕಲಾಯಿತು ಎಂದು ಹೇಳಬಹುದು. ಇದಲ್ಲದೆ, ಈ ಹಂತದಲ್ಲಿ ತಮ್ಮ ಚಳವಳಿಗೆ ಮಾರ್ಗದರ್ಶನ ನೀಡಲು ಕಾರ್ಮಿಕರು ಸಾಕಷ್ಟು ಪ್ರಬುದ್ಧರಾಗಿದ್ದ ಕಾರಣ, ಮಧ್ಯಮ ವರ್ಗದ ಕಾರ್ಮಿಕ ಸಂಘದ ಕಾರ್ಮಿಕರು ಈ ಅವಧಿಯಲ್ಲಿ ಕಾರ್ಮಿಕ-ವರ್ಗದ ಹೋರಾಟಗಳನ್ನು ಸಂಘಟಿಸುವಲ್ಲಿ ಮತ್ತು ಮುನ್ನಡೆಸುವಲ್ಲಿ ಶ್ಲಾಘನೀಯ ಪಾತ್ರವನ್ನು ವಹಿಸಿದರು. 1914-18ರ ಮೊದಲನೆಯ ಮಹಾಯುದ್ಧ ಮತ್ತು 1917 ರ ರಷ್ಯಾದ ಕ್ರಾಂತಿಯು ವಿಶ್ವ ಮತ್ತು ರಾಷ್ಟ್ರೀಯ ಪರಿಸ್ಥಿತಿಗಳಲ್ಲಿ ವಿಭಿನ್ನ ಬದಲಾವಣೆಗಳನ್ನು ತಂದಿತು. ಇದು ಭಾರತದ ಕಾರ್ಮಿಕ-ವರ್ಗದ ಆಂದೋಲನಕ್ಕೆ ಹೊಸ ತಿರುವು ನೀಡಿತು ಮತ್ತು ಈ ಪದದ ನಿಜವಾದ ಅರ್ಥದಲ್ಲಿ ಹೆಚ್ಚು ವರ್ಗ-ಪ್ರಜ್ಞೆಯ ಶ್ರಮಜೀವಿ ಚಟುವಟಿಕೆಗಳು ಮತ್ತು ಕಾರ್ಮಿಕ ಸಂಘಗಳ ಬೆಳವಣಿಗೆಯ ಹಂತವನ್ನು ಪ್ರಾರಂಭಿಸಿತು.

ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿಕೆ

ಪುಟ 2 ರಿಂದ

ಅಪಪ್ರಚಾರ ಮತ್ತು ವಂಚಕ ಕಸರತ್ತಾಗಿದೆ.

2020-20121ರ ವರ್ಷದ ಮೊದಲ ತ್ರೈಮಾಸಿಕದಲ್ಲಿ (–)23.9ಶೇ.ದಷ್ಟು, ಅದರ ಮೇಲೆ ಎರಡನೇ ತ್ರೈಮಾಸಿಕದಲ್ಲಿ ಮತ್ತೆ (–)7.5ಶೇ. ದಷ್ಟು ಜಗತ್ತಿನ ಅತೀ ಕೆಟ್ಟ ಜಿ.ಡಿ.ಪಿ. ಸಂಕೋಚನವನ್ನು ಒಂದು ವಿಚಿತ್ರವಾದ ರೀತಿಯಲ್ಲಿ, V ಆಕಾರದ ಚೇತರಿಕೆ ಎಂದು ತೋರಿಸಲಾಗಿದೆ! ಚೇತರಿಕೆ ಏನಾದರೂ ಇದ್ದರೆ, ಅದು K ಆಕಾರದ ಚೇತರಿಕೆಯಾಗಿದೆ, ಅಂದರೆ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುವ ಮತ್ತು ಬಡವರು ಮತ್ತಷ್ಟು ಬಡವರಾಗುವಂತದ್ದು. ಇತ್ತೀಚಿನ ಆಕ್ಸ್‌ಫಾಮ್ ವರದಿ, "ಅಸಮಾನತೆಯ ವೈರಸ್". ಇದನ್ನು ವ್ಯಕ್ತಗೊಳಿಸಿದೆ. ಲಕ್ಷಾಂತರ ಬಡವರು ಈ ವರ್ಷ ಉದ್ಯೋಗ ಕಳೆದುಕೊಂಡಿರುವಾಗ ಹಸಿವು, ಅಪೌಷ್ಟಿಕತೆ ಮತ್ತು ಅಭಾವಗಳಿಂದ ಬಳಲುತ್ತಿರುವಾಗ ಭಾರತದ ಶ್ರೀಮಂತ ಬಿಲಿಯಾಧಿಪತಿಗಳು ತಮ್ಮ ಸಂಪತ್ತನ್ನು ಶೇಕಡಾ 35 ರಷ್ಟು ಹೆಚ್ಚಿಸಿಕೊಂಡಿದ್ದಾರೆ. ಇದೀಗ 'ಆರ್ಥಿಕ ಸಮೀಕ್ಷೆ' ಮರೆಮಾಚಿರುವ ಮತ್ತು ತಪ್ಪಾಗಿ ನಿರೂಪಿಸಿರುವ ಸುಧಾರಣೆಗಳ ವಾಸ್ತವತೆ.

ಮುಂಬರುವ ಬಜೆಟ್

ಯಾವುದೇ ಚೇತರಿಕೆ ಸರ್ಕಾರದ ವೆಚ್ಚಗಳಲ್ಲಿ ಭಾರೀ ಏರಿಕೆಯ ಮೂಲಕ ಮಾತ್ರ ಸಾಧ್ಯ ಎಂಬುದನ್ನು ಸಾರ್ವತ್ರಿಕವಾಗಿ ಗುರುತಿಸಲಾಗಿದೆ. ಆರ್ಥಿಕ ಚೇತರಿಕೆ ಮತ್ತು ಜನರ ಕಲ್ಯಾಣವನ್ನು ಖಾತ್ರಿಪಡಿಸಬೇಕಾದ ಅಗತ್ಯಕ್ಕೆ ಸ್ಪಂದಿಸುವ ಯಾವುದೇ ಸರ್ಕಾರವು ನಮ್ಮ ಬಹಳಷ್ಟು ಅಗತ್ಯವಾದ ಮೂಲಸೌಕರ್ಯಗಳನ್ನು ನಿರ್ಮಿಸಲು ಸಾರ್ವಜನಿಕ ಹೂಡಿಕೆಗಳನ್ನು ಬೃಹತ್ ಪ್ರಮಾಣದಲ್ಲಿ ಹೆಚ್ಚಿಸಬೇಕು, ಇದು ಅಪಾರ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ. ಈ ಯುವಕರು ತಮ್ಮ ಸಂಬಳಗಳನ್ನು ಖರ್ಚು ಮಾಡಲು ಪ್ರಾರಂಭಿಸಿದಾಗ, ಆಂತರಿಕ ಬೇಡಿಕೆಯು ಚೇತರಿಕೆಯ ಪ್ರಕ್ರಿಯೆಯನ್ನು ರಭಸದಿಂದ ಪ್ರಾರಂಭಿಸುತ್ತದೆ.

ಜನರು ಇದನ್ನು ಬಯಸುತ್ತಾರೆ, ಆದರೆ ಈ ಬಿಜೆಪಿ ಸರಕಾರ ಮಾಡುವುದು ಇದನ್ನಲ್ಲ. ಏಕೆಂದರೆ ಅದು ಭಾರತದ ರಾಷ್ಟ್ರೀಯ ಸ್ವತ್ತುಗಳನ್ನು ನಿಷ್ಕರುಣೆಯಿಂದ ಲೂಟಿ ಮಾಡುವುದರಲ್ಲಿ ಮತ್ತು ತನ್ನ ಬಂಟ ಕಾರ್ಪೊರೇಟ್‌ಗಳನ್ನು ಉತ್ತೇಜಿಸುವುದರಲ್ಲಿಯೇ ಮಗ್ನವಾಗಿದೆ.

ಕೇಂದ್ರ ಸಮಿತಿ ಕರೆ

ಫೆಬ್ರವರಿ 2021 ರ ದ್ವಿತೀಯಾರ್ಧದಲ್ಲಿ ಪಕ್ಷದ ಎಲ್ಲಾ ಘಟಕಗಳು ದೇಶಾದ್ಯಂತ ಹದಿನೈದು ದಿನಗಳ ಪ್ರಚಾರಾಂದೋಲನವನ್ನು ನಡೆಸಬೇಕು ಎಂದು ಕೇಂದ್ರ ಸಮಿತಿ ನಿರ್ಧರಿಸಿದೆ. ಇದು ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಮೂಲಕ ಭಾರತದ ಸಾಂವಿಧಾನಿಕ ವ್ಯವಸ್ಥೆಯನ್ನು ಮತ್ತು ಆರ್ಥಿಕ ಬುನಾದಿಗಳನ್ನು ನಾಶಪಡಿಸುತ್ತಿರುವುದು, ರಾಷ್ಟ್ರೀಯ ಸ್ವತ್ತುಗಳ ಲೂಟಿ, ದೊಡ್ಡ ಪ್ರಮಾಣದ ಖಾಸಗೀಕರಣ, ಬೆಲೆ ಏರಿಕೆ; ಕಾರ್ಮಿಕ ಕಾನೂನುಗಳ ರದ್ದತಿ, ನಿರುದ್ಯೋಗದ ನಾಗಾಲೋಟ ಇತ್ಯಾದಿ ವಿಷಯಗಳ ಮೇಲೆ ಮತ್ತು ಈಗ ನಡೆಯುತ್ತಿರುವ ರೈತರ ಹೋರಾಟಗಳಿಗೆ ಸೌಹಾರ್ದವನ್ನು ಬಲಪಡಿಸುವುದು ಹಾಗೂ ಆರ್‌ಎಸ್‌ಎಸ್ / ಬಿಜೆಪಿಯ ಸುಳ್ಳು ಪ್ರಚಾರವನ್ನು ಬಯಲಿಗೆಳೆಯುವ ವಿಷಯಗಳ ಮೇಲೆ ಇರುತ್ತದೆ.

ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯನ್ನು ಸೋಲಿಸುವುದು, ಕೇರಳದಲ್ಲಿ ಸಿಪಿಐ (ಎಂ) ನೇತೃತ್ವದ ಎಲ್‌ಡಿಎಫ್ ಸರ್ಕಾರ ಮರಳುವಂತೆ ನೋಡಿಕೊಳ್ಳುವುದು, ಪಶ್ಚಿಮ ಬಂಗಾಲದಲ್ಲಿ ಎಡ, ಜಾತ್ಯತೀತ ಪ್ರಜಾಪ್ರಭುತ್ವ ಪರ್ಯಾಯಕ್ಕಾಗಿ ಕೆಲಸ ಮಾಡುವುದು, ಬಿಜೆಪಿ-ಎಐಎಡಿಎಂಕೆ ಮೈತ್ರಿಯನ್ನು ಸೋಲಿಸಿ ಡಿಎಂಕೆ ರಂಗದ ವಿಜಯವನ್ನು ಖಾತ್ರಿಪಡಿಸುವುದು ಮತ್ತು ಅಸ್ಸಾಂ ವಿಧಾನಸಭೆಯಲ್ಲಿ ಪಕ್ಷದ ಪ್ರಭಾವವನ್ನು ಹೆಚ್ಚಿಸುವುದು ಇವುಗಳ ಮೇಲೆ ಮುಂಬರುವ ಅವಧಿಯಲ್ಲಿ ಮುಖ್ಯ ಗಮನವಿರುತ್ತದೆ ಎಂದು ಕೇಂದ್ರ ಸಮಿತಿ ನಿರ್ಧರಿಸಿದೆ.



ಎರಡು ರಕ್ಷಣಾ ಪ್ಯಾಕೇಜ್‌ಗಳು: ಎಷ್ಟೊಂದು ಅಂತರ!

ಈ ಒಂದು ಸಣ್ಣ ಕೆಲಸವನ್ನೂ ಮಾಡಲಿಲ್ಲ. ಲಾಕ್‌ಡೌನ್ ಘೋಷಣೆಯಾದ ಕೂಡಲೇ ಲಕ್ಷ ಲಕ್ಷ ಮಂದಿ ವಲಸೆ ಕಾರ್ಮಿಕರು ಉದ್ಯೋಗವಿಲ್ಲದಂತಾದರು, ಆದಾಯವಿಲ್ಲದಂತಾದರು, ಮಾತ್ರವಲ್ಲ, ಮಲಗಲು ಮನೆಯಿಲ್ಲದಂತಾದರು. ಆದ್ದರಿಂದ, ಅವರು ತಕ್ಷಣವೇ ಗಂಟು ಮೂಟೆ ಹೊತ್ತುಕೊಂಡು ನೂರಾರು ಮೈಲಿಗಳ ದೂರದ ತಮ್ಮ ತಮ್ಮ ಹಳ್ಳಿಗಳಿಗೆ ಕಾಲ್ನಡಿಗೆಯಲ್ಲೇ ತೆರಳಿದರು. ಕೆಲಸ ಕಳೆದುಕೊಂಡ ಜನರಿಗೆ ಟ್ರಂಪ್ ಸರ್ಕಾರ ಕೂಡ ಹಣ ಒದಗಿಸಿತ್ತು. ಆದರೆ, ಮೋದಿ ಸರ್ಕಾರವು ಕೆಲಸ ಕಳೆದುಕೊಂಡ ಜನರಿಗೆ ಒಂದು ಬಿಡಿ ಕಾಸಿನ ನೆರವನ್ನೂ ಒದಗಿಸಲಿಲ್ಲ. ರಾಜಕೀಯ ಪಕ್ಷಗಳು, ಕೆಲವು ನಾಗರಿಕ ಗುಂಪುಗಳು ಮತ್ತು ಬುದ್ಧಿಜೀವಿಗಳು, ಆದಾಯವಿಲ್ಲದ ಪ್ರತಿ ಕುಟುಂಬಕ್ಕೂ ತಿಂಗಳಿಗೆ 7000 ರೂ.ಗಳ ನೆರವನ್ನು ಕೆಲವು ತಿಂಗಳ ಮಟ್ಟಿಗಾದರೂ ಒದಗಿಸುವಂತೆ ಒತ್ತಾಯ ಮಾಡುತ್ತಲೇ ಬಂದಿದ್ದಾರೆ. ಆದರೆ, ಮೋದಿ ಸರ್ಕಾರವು ಅದನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ.

ಎಂಟು ವರ್ಷಕ್ಕೆ ಮಗ ದಂಟು ಎಂದು ತೊದಲಿದ ಎಂಬ ರೀತಿಯಲ್ಲಿ ಮೋದಿ ಸರ್ಕಾರವು ಒಂದು "ರಕ್ಷಣಾ ಪ್ಯಾಕೇಜ್"ಅನ್ನು ಎರಡು ಕಂತುಗಳಲ್ಲಿ ಪ್ರಕಟಿಸಿತು. ಸಾಮಾನುಗಳನ್ನು ತಮ್ಮ ಬಳಿ ಇದ್ದುದಕ್ಕಿಂತ ಹೆಚ್ಚಿಗೆ ತೋರುವಂತೆ ಅಂಗಡಿಯವರು ಪ್ರದರ್ಶಿಸುವ ರೀತಿಯಲ್ಲಿತ್ತು ಈ ಪ್ಯಾಕೇಜ್. ಕೊರೊನಾ ಹರಡುವ ಮೊದಲೇ ಮಂಡಿಸಿದ್ದ ಬಜೆಟ್‌ನಲ್ಲಿ ಅದಾಗಲೇ ಘೋಷಣೆಯಾಗಿದ್ದ ಕೆಲವು ಯೋಜನೆಗಳು ಮತ್ತು ಅದರ ಜೊತೆಗೆ ಸಾಲ ಒದಗಿಸುವ ಕೆಲವು ಭರವಸೆಗಳನ್ನು ಸೇರಿಸಿ ತೆಗೆದ ಒಂದು ಕಲಸುಮೇಲೋಗರವಾಗಿತ್ತು ಈ ಪ್ಯಾಕೇಜ್. ಒಟ್ಟು 20 ಲಕ್ಷ ಕೋಟಿ ರೂ.ಗಳ ಗಾತ್ರದ್ದು ಎಂದು ಹೇಳಿಕೊಂಡ ಈ ರಕ್ಷಣಾ ಪ್ಯಾಕೇಜ್‌ನಲ್ಲಿ ಹಣಕಾಸು ನೆರವಿನ ಭಾಗವು 1.9 ಲಕ್ಷ ಕೋಟಿ ರೂ.ಗಳಿಗಿಂತ ಹೆಚ್ಚಿಗೆ ಇರಲಿಲ್ಲ. ಕೆಲವರು ಈ ಮೊತ್ತವನ್ನು 1.65 ಲಕ್ಷ ಕೋಟಿ ರೂ.ಗಳೆಂದು ಅಂದಾಜು ಮಾಡಿದ್ದಾರೆ. ಇದು ಜಿಡಿಪಿಯ ಸುಮಾರು ಶೇ.1ರಷ್ಟಾಗುತ್ತದೆ.

ಹಣಕಾಸು ನೆರವಿಗೆ ಎಂದು ತೆಗೆದಿಟ್ಟ ಈ ಅಲ್ಪ ಮೊತ್ತದ ಹಣವನ್ನೂ ಪೂರ್ತಿ ಖರ್ಚು ಮಾಡಿಲ್ಲವಂತೆ. 2020ರ ಏಪ್ರಿಲ್‌ನಿಂದ ನವೆಂಬರ್ ವರೆಗಿನ ಅವಧಿಯಲ್ಲಿ, ಕೇಂದ್ರ ಸರ್ಕಾರದ ಒಟ್ಟು ಖರ್ಚು-ವೆಚ್ಚಗಳು, 2019ರ ಇದೇ ಅವಧಿಯ ಖರ್ಚು-ವೆಚ್ಚಗಳಿಗಿಂತ ಶೇ.4.7ರಷ್ಟು ಮಾತ್ರ ವೃದ್ಧಿಯಾಗಿವೆ. ಇದೇ ಅವಧಿಯಲ್ಲಿ ವರ್ಷದಿಂದ-ವರ್ಷದ ಹಣದುಬ್ಬರವು ಶೇ.6ಕ್ಕಿಂತ ಹೆಚ್ಚಿಗೆ ಇತ್ತು. ಅಂದರೆ, ಕೊರೊನಾ ಸಾಂಕ್ರಾಮಿಕವು ಉತ್ತುಂಗದಲ್ಲಿದ್ದಾಗ, ಕೇಂದ್ರ ಸರ್ಕಾರವು ಹೆಚ್ಚು ಹೆಚ್ಚು ಹಣ ಖರ್ಚು ಮಾಡಬೇಕಿದ್ದುದರ ಬದಲು, ಹಣದುಬ್ಬರದೊಂದಿಗೆ ಹೊಂದಿಸಿದ ಲೆಕ್ಕಾಚಾರದಲ್ಲಿ, ಖರ್ಚುಗಳು ಕುಸಿದಿದ್ದವು ಎಂದಾಗುತ್ತದೆ.

ತನ್ನದೇ ಖರ್ಚು-ವೆಚ್ಚಗಳನ್ನು ಕಡಿತಗೊಳಿಸಿದ ವಿಕೃತ ನಡೆಯಿಂದ ತೃಪ್ತಿಪಟ್ಟುಕೊಳ್ಳದ ಕೇಂದ್ರ ಸರ್ಕಾರವು, ಅದೇ ಸಮಯದಲ್ಲಿ ಜಿಎಸ್‌ಟಿ ಪರಿಹಾರ ಬಾಬ್ತು ರಾಜ್ಯ ಸರಕಾರಗಳಿಗೆ ನ್ಯಾಯಯುತವಾಗಿ ಕೊಡಬೇಕಿದ್ದ ಬಾಕಿ ಹಣವನ್ನೂ ಕೊಡದೆ ಸತಾಯಿಸಿತು. ಪರಿಣಾಮವಾಗಿ, ಕೊರೊನಾ ಸಾಂಕ್ರಾಮಿಕದ ಕಾಲದಲ್ಲಿ, ಹಣದುಬ್ಬರದೊಂದಿಗೆ ಹೊಂದಿಸಿದ ಲೆಕ್ಕಾಚಾರದಲ್ಲಿ, ಒಟ್ಟು ಸರ್ಕಾರಿ ವೆಚ್ಚಗಳು ತಗ್ಗಿದ ವಿಶ್ವದ ಕೆಲವೇ ಕೆಲವು ದೇಶಗಳಲ್ಲಿ ಭಾರತವೂ ಒಂದು. ಸರ್ಕಾರದ ಈ ಬುದ್ಧಿಹೀನ ನೀತಿಗಳಿಗೆ ಅದರ ನಿರ್ದಯತೆ ಮಾತ್ರ ಸಾಟಿಯಾಗಬಲ್ಲದು. ಹಾಗಾಗಿ, ನರೇಂದ್ರ ಮೋದಿಗೆ ಹೋಲಿಸಿದರೆ ಜೋ ಬಿಡೆನ್ ಪ್ರಕಾಶಮಾನವಾಗಿ ಕಾಣುತ್ತಾರೆ.

ನೇಪಾಳದಲ್ಲಿ ಏನಾಗುತ್ತಿದೆ?

ದಶಕಗಳ ನಂತರ ಪ್ರಜಾಪ್ರಭುತ್ವ ಸ್ಥಾಪನೆಯಾಗಿ ರಾಜಕೀಯ ಸ್ಥಿರತೆ ಮೂಡಿದ್ದ ನೇಪಾಳದಲ್ಲಿ ಏಕಾಏಕಿ ಈ ವಿಚಿತ್ರ ಬೆಳವಣಿಗೆಗಳು ಯಾಕೆ ಆಗುತ್ತಿವೆ? ಇದಕ್ಕಾಗಿ ನೇಪಾಳದ ರಾಜಕೀಯದಲ್ಲಿ ಅದರಲ್ಲೂ ನೇಪಾಳ ಕಮ್ಯುನಿಸ್ಟ್ ಪಕ್ಷದಲ್ಲಿ ಕಳೆದ ಕೆಲವು ವರ್ಷಗಳಲ್ಲಿ ನಡೆದ ವಿದ್ಯಮಾನಗಳನ್ನು ಗಮನಿಸಬೇಕಾಗುತ್ತದೆ.

ಜಗದ ಸುತ್ತ
ವಸಂತರಾಜ ಎನ್.ಕೆ

ನೇಪಾಳ ಇತ್ತೀಚೆಗೆ ಭಾರೀ ಸುದ್ದಿಯಲ್ಲಿತ್ತು. ಮೊದಲಿಗೆ ನೇಪಾಳ ಸರಕಾರ ಭಾರತದ ಜತೆ ಗಡಿ ವಿವಾದ ಕೆದಕಿ ಹೊಸ ಮ್ಯಾಪ್ ಪ್ರಕಟಿಸಿತು. ಆ ಮೇಲೆ ಆಳುವ ನೇಪಾಳಿ ಕಮ್ಯುನಿಸ್ಟ್ ಪಕ್ಷಕ್ಕೆ ಪಾರ್ಲಿಮೆಂಟಿನಲ್ಲಿ ಮೂರನೇ ಎರಡರಷ್ಟು ಬಹುಮತವಿದ್ದರೂ ಪ್ರಧಾನಿ ಕೆ.ಪಿ.ಓಲಿ ಪಾರ್ಲಿಮೆಂಟನ್ನು ಏಕಾಏಕಿ ವಿಸರ್ಜಿಸಿ ಹೊಸ ಚುನಾವಣೆ ನಡೆಸುವಂತೆ ಶಿಫಾರಸು ಮಾಡಿದರು. ಅವರದೇ ಪಕ್ಷವಾದ ನೇಪಾಳಿ ಕಮ್ಯುನಿಸ್ಟ್ ಪಕ್ಷ ಮತ್ತು ಸಹಜವಾಗಿ ವಿರೋಧ ಪಕ್ಷಗಳು ಕೂಡಾ ಅವರ ಈ ಕ್ರಮವನ್ನು ಅಸಂವಿಧಾನಿಕ ಎಂದು ವಿರೋಧಿಸಿದರು. ಆಳುವ ಮತ್ತು ವಿರೋಧ ಪಕ್ಷಗಳು ಅಧ್ಯಕ್ಷರಾದ ವಿದ್ಯಾ ಭಂಡಾರಿ ಅವರನ್ನು ಈ ಅಸಂವಿಧಾನಿಕ ಕ್ರಮವನ್ನು ಒಪ್ಪಿಕೊಳ್ಳದಂತೆ ಒತ್ತಾಯಿಸಿದರು. ಆದರೆ ಅಧ್ಯಕ್ಷರು ಪ್ರಧಾನಿ ಓಲಿ ಅವರ ಶಿಫಾರಸಿನಂತೆ ಪಾರ್ಲಿಮೆಂಟನ್ನು ವಿಸರ್ಜಿಸಿ ಹೊಸ ಚುನಾವಣೆ ನಡೆಸುವಂತೆ ಆದೇಶಿಸಿದ್ದಾರೆ. ಇದರಿಂದ ತೀವ್ರವಾದ ಅನಿರೀಕ್ಷಿತ ರಾಜಕೀಯ ಬಿಕ್ಕಟ್ಟು ಉಂಟಾಗಿದೆ.

ಅಧ್ಯಕ್ಷರ ಈ ಕ್ರಮದ ವಿರುದ್ಧ ಆಳುವ ನೇಪಾಳ ಕಮ್ಯುನಿಸ್ಟ್ ಪಕ್ಷವೇ ಸುಪ್ರೀಂ ಕೋರ್ಟಿನ ಕದ ತಟ್ಟಿದೆ. ಈ ಕ್ರಮವನ್ನು ಅಸಂವಿಧಾನಿಕ ಎಂದು ವಜಾ ಮಾಡುವಂತೆ ಕೋರ್ಟಿಗೆ ವಿನಂತಿಸಿದೆ. ನೇಪಾಳದ ಸಂವಿಧಾನದ ಪ್ರಕಾರ ಪಾರ್ಲಿಮೆಂಟು ಬಹುಮತದಿಂದ ಆರಿಸಿದ ಮೇಲೆನೇ ಪ್ರಧಾನಿಯನ್ನು ಅಧ್ಯಕ್ಷರು ನೇಮಿಸುತ್ತಾರೆ. ಪ್ರಸಕ್ತ ಪ್ರಧಾನಿ ರಾಜೀನಾಮೆ ಕೊಟ್ಟು ಅಥವಾ ಬಹುಸಂಖ್ಯಾತ ಪಾರ್ಲಿಮೆಂಟ್ ಸದಸ್ಯರ ವಿಶ್ವಾಸ ಕಳೆದುಕೊಂಡು, ಯಾವುದೇ ಪ್ರಧಾನಿಯನ್ನು ಆರಿಸಲು ವಿಫಲವಾದರೆ ಮಾತ್ರ ಪಾರ್ಲಿಮೆಂಟನ್ನು ವಿಸರ್ಜಿಸಬಹುದು. ಕೆ.ಪಿ.ಓಲಿ ಪಕ್ಷದ ಮತ್ತು ಪಾರ್ಲಿಮೆಂಟಿನ ಬಹುಮತದ ಸದಸ್ಯರ ವಿಶ್ವಾಸ ಕಳೆದುಕೊಂಡಿದ್ದಾರೆ. ಆದ್ದರಿಂದಲೇ ಈ ವಿಸರ್ಜನೆಗೆ ಶಿಪಾರಸು ಮಾಡಿದ್ದಾರೆ. ಆದರೆ ಪ್ರಚಂಡ ಬಹುಮತ ಇರುವ ಆಳುವ ನೇಪಾಳ ಕಮ್ಯುನಿಸ್ಟ್ ಪಕ್ಷ ಮತ್ತು ಪಾರ್ಲಿಮೆಂಟಿಗೆ ಇನ್ನೊಬ್ಬ ಪ್ರಧಾನಿಯನ್ನು ಆರಿಸುವ ಅವಕಾಶ ಕೊಡಲಾಗಿಲ್ಲ. ಅದು ವಿಫಲವಾದರೆ ಮಾತ್ರ ಆರು ತಿಂಗಳೊಳಗೆ ಚುನಾವಣೆ ನಡೆಸಬೇಕಾಗುತ್ತದೆ ಎಂಬುದು ಅವರ ವಾದ. ಸುಪ್ರಿಂ ಕೋರ್ಟು ಈ ಕುರಿತು ವಿಚಾರಣೆ ನಡೆಸಲಿದೆ.

ಈ ನಡುವೆ ನೇಪಾಳ ಕಮ್ಯುನಿಸ್ಟ್ ಪಕ್ಷ ಪ್ರಧಾನಿ ಕೆ.ಪಿ.ಓಲಿ ಅವರನ್ನು ಪಕ್ಷದ ಸಹ–ಅಧ್ಯಕ್ಷರು ಹುದ್ದೆಯಿಂದ ಮತ್ತು ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಿದೆ. ಆಳುವ ಪಕ್ಷ ಮತ್ತು ಪ್ರಧಾನಿ ಅವರ ಪಕ್ಷದ ಬಣ ನೇಪಾಳದ ಚುನಾವಣಾ ಕಮಿಶನ್ ತಮ್ಮನ್ನೇ ಮೂಲ ಪಕ್ಷವಾಗಿ ಮಾನ್ಯ ಮಾಡಿ ಪಕ್ಷದ ಚಿಹ್ನೆ ಕೊಡುವಂತೆ ಕೋರಿದೆ. ನೇಪಾಳ ಕಮ್ಯುನಿಸ್ಟ್ ಪಕ್ಷ ಪ್ರಧಾನಿ ಅವರ ಬಣವನ್ನು ಮೂಲ ಪಕ್ಷ ಎಂದು ಮಾನ್ಯ ಮಾಡದಂತೆ ಮತ್ತು ಚುನಾವಣಾ ಚಿಹ್ನೆಯನ್ನು ಆ ಬಣಕ್ಕೆ ಕೊಡದಂತೆ ಅರ್ಜಿ ಹಾಕಿದೆ. ಪಕ್ಷದ ಕೇಂದ್ರ ಸಮಿತಿ ಸಭೆ ಸೇರಿದ್ದು ಅದರ ಬಹುಸಂಖ್ಯಾತ ಸದಸ್ಯರು ಕೆ.ಪಿ.ಓಲಿ ಅವರನ್ನು ಪಕ್ಷದಿಂದ ಉಚ್ಚಾಟಿಸುವ ನಿರ್ಣಯವನ್ನು ಬೆಂಬಲಿಸಿದ್ದಾರೆ ಎಂದು ಸಹ ತಿಳಿಸಿದ್ದಾರೆ. ಪಕ್ಷದ ಕೇಂದ್ರ ಸಮಿತಿ ಸಭೆ ಅಂಗೀಕರಿಸಿದ ನಿರ್ಣಯ ಮತ್ತು ಅದಕ್ಕೆ ಅನುಮೋದನೆ ನೀಡಿದ ಕೇಂದ್ರ ಸಮಿತಿಯ ಸದಸ್ಯರ ಹೆಸರಿನ ಪಟ್ಟಿಯನ್ನು ಸಹ ಕಮಿಶನ್ ಗೆ ಕೊಟ್ಟಿದೆ.

ಪ್ರಜಾಪ್ರಭುತ್ವಕ್ಕಾಗಿ ದಶಕಗಳ ಹೋರಾಟ

ದಶಕಗಳ ನಂತರ ಪ್ರಜಾಪ್ರಭುತ್ವ ಸ್ಥಾಪನೆಯಾಗಿ ರಾಜಕೀಯ ಸ್ಥಿರತೆ ಮೂಡಿದ್ದ ನೇಪಾಳದಲ್ಲಿ ಏಕಾಏಕಿ ಈ ವಿಚಿತ್ರ ಬೆಳವಣಿಗೆಗಳು ಯಾಕೆ ಆಗುತ್ತಿವೆ? ಇದಕ್ಕಾಗಿ ನೇಪಾಳದ ರಾಜಕೀಯದಲ್ಲಿ ಅದರಲ್ಲೂ ನೇಪಾಳ ಕಮ್ಯುನಿಸ್ಟ್ ಪಕ್ಷದಲ್ಲಿ ಕಳೆದ ಕೆಲವು ವರ್ಷಗಳಲ್ಲಿ ನಡೆದ ವಿದ್ಯಮಾನಗಳನ್ನು ಗಮನಿಸಬೇಕಾಗುತ್ತದೆ. ನೇಪಾಳದಲ್ಲಿ ಹಿಂದೆ ರಾಜಪ್ರಭುತ್ವವಿದ್ದು ಪ್ರಜಾಪ್ರಭುತ್ವಕ್ಕಾಗಿ 1940ರ ದಶಕದ ಕೊನೆಯಲ್ಲಿ ಸ್ಥಾಪಿತವಾದ ನೇಪಾಳ ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ಪಕ್ಷಗಳು ಹೋರಾಡಿದವು. 1950ರ ದಶಕದಲ್ಲಿ ಮೊದಲ ಬಾರಿಗೆ ಪ್ರಜಾಪ್ರಭುತ್ವ ಸ್ಥಾಪಿತವಾಗಿದ್ದು, ಅಂದಿನಿಂದ ರಾಜಪ್ರಭುತ್ವ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ನಡುವೆ ತಿಕ್ಕಾಟ ನಡೆಯುತ್ತಲೇ ಇದೆ. ಒಮ್ಮೆ ರಾಜಪ್ರಭುತ್ವ ಮತ್ತು ಇನ್ನೊಮ್ಮೆ ಪ್ರಜಾಪ್ರಭುತ್ವವಾದಿ ಶಕ್ತಿಗಳ ಕೈಮೇಲಾಗುತ್ತಿತ್ತು. 1960ರಲ್ಲಿ ರಾಜಪ್ರಭುತ್ವದ ಕೈಮೇಲಾಗಿ ಅದು ಮೂರು ದಶಕಗಳ ಕಾಲ ಆಳ್ವಿಕೆ ನಡೆಸಿತು. 1990ರಲ್ಲಿ ನಡೆದ ವ್ಯಾಪಕ ಜನಾಂದೋಲನದ ಫಲವಾಗಿ ಮತ್ತೆ ಬಹು–ಪಕ್ಷೀಯ ಪ್ರಜಾಪ್ರಭುತ್ವ ಸ್ಥಾಪಿತವಾಯಿತು. ಆದರೆ ಪ್ರಜಾಪ್ರಭುತ್ವದ ಮೇಲೆ ರಾಜಪ್ರಭುತ್ವ ತೀವ್ರ ನಿರ್ಬಂಧಗಳನ್ನು ಹೇರುತ್ತಲೇ ಇತ್ತು.

ಇದು 2006ರ ಲೋಕತಂತ್ರ ಆಂದೋಲನಕ್ಕೆ (ಅಥವಾ 2ನೇ ಜನಾಂದೋಲನಕ್ಕೆ) ಎಡೆ ಮಾಡಿಕೊಟ್ಟಿತು. ಇವೆಲ್ಲ ಚಳುವಳಿಗಳಲ್ಲಿ ನೇಪಾಳ ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ಪಕ್ಷಗಳ ಪಾತ್ರ ಪ್ರಧಾನವಾಗಿತ್ತು. ಜನತೆಯ ಆರ್ಥಿಕ ಹಕ್ಕು, ಬಲ ಮತ್ತು ಸಮಾನತೆಯನ್ನು ಒದಗಿಸುವ ನಿಜವಾದ ಜನತಾ ಪ್ರಜಾಪ್ರಭುತ್ವದತ್ತ ದೇಶವನ್ನು ಒಯ್ಯುವುದು ಕಮ್ಯುನಿಸ್ಟ್ ಪಕ್ಷದ ಪ್ರಯತ್ನವಾದರೆ, ಕಾಂಗ್ರೆಸ್ ಪಕ್ಷ ರಾಜಕೀಯ ಹಕ್ಕುಗಳಿಗೆ ಸೀಮಿತವಾಗಿತ್ತು. 1990ರ ಜಾಗತೀಕರಣದ ಜಾಗತಿಕ ಅಲೆಯ ನಂತರ, ನೇಪಾಳದಲ್ಲೂ ಜನರ ಬದುಕನ್ನು ಇನ್ನಷ್ಟು ದುರ್ಭರವಾಗಿಸುವ ನವ–ಉದಾರವಾದಿ ನೀತಿಗಳು ಜಾರಿಯಾಗುತ್ತಿದ್ದಂತೆ ಅದರ ವಿರುದ್ಧ ಪ್ರತಿರೋಧ ತೀವ್ರ ಒಡ್ಡಿದ ಕಮ್ಯುನಿಸ್ಟ್ ಚಳುವಳಿ ಬಲವಾಗುತ್ತಾ ಕಾಂಗ್ರೆಸ್ ದುರ್ಬಲವಾಗುತ್ತಾ ಹೋಯಿತು. ಆದರೆ 1990ರ ದಶಕದಲ್ಲಿ ಕಮ್ಯುನಿಸ್ಟ್ ಚಳುವಳಿ ಒಡೆದು ಮಾವೋವಾದಿ ಬಣ ಜನತಾ ಗಣತಂತ್ರ ಸ್ಥಾಪಿಸುವ 'ಜನತಾ ಯುದ್ಧ' ಎಂಬ ಸಶಸ್ತ್ರ ಗೆರಿಲ್ಲಾ ಹೋರಾಟ ಆರಂಭಿಸಿತು. ಇದನ್ನು ಬಳಸಿಕೊಂಡು ರಾಜಪ್ರಭುತ್ವ ತುರ್ತು ಪರಿಸ್ಥಿತಿ ಘೋಷಿಸಿ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳನ್ನು ಮತ್ತು ಪಕ್ಷಗಳನ್ನು ದಮನಿಸಲು ಪ್ರಯತ್ನಿಸಿತು. ಇದರ ವಿರುದ್ಧ ಐಕ್ಯ ಹೋರಾಟ ಕಟ್ಟಿ ದೇಶದ ಆಂತರಿಕ ಯುದ್ಧ ನಿಲ್ಲಿಸಲು, ಕಮ್ಯುನಿಸ್ಟ್ ಪಕ್ಷಗಳು ಸೇರಿದಂತೆ ಏಳು ಪ್ರಜಾಸತ್ತಾತ್ಮಕ ಪಕ್ಷಗಳು ಮತ್ತು ಮಾವೋವಾದಿ ಚಳುವಳಿ ನಡುವೆ 2006ರಲ್ಲಿ ಒಪ್ಪಂದ ಏರ್ಪಟ್ಟು ಪ್ರಜಾಪ್ರಭುತ್ವ ಮತ್ತೆ ಸ್ಥಾಪಿತವಾಯಿತು.

ಏಕೀಕೃತ ಕಮ್ಯುನಿಸ್ಟ್ ಪಕ್ಷದಿಂದ ನಿರೀಕ್ಷೆ

ನೇಪಾಳದಲ್ಲಿ 1950ರ ದಶಕದಿಂದಲೇ ಹಲವು ಎಡ ಮತ್ತು ಕಮ್ಯುನಿಸ್ಟ್ ಪಕ್ಷಗಳಿದ್ದು ಈ ಅವಧಿಯಲ್ಲಿ ಅವು ಒಗ್ಗೂಡಿ ನೇಪಾಳ ಕಮ್ಯುನಿಸ್ಟ್ ಪಕ್ಷ (ಯು.ಎಂ.ಎಲ್ – ಏಕೀಕೃತ ಮಾರ್ಕ್ಸ್‌ವಾದಿ ಲೆನಿನ್‌ವಾದಿ) ಎಂಬ ಒಂದು ಪಕ್ಷ ರೂಪುಗೊಂಡಿತು. ನೇಪಾಳ ಕಮ್ಯುನಿಸ್ಟ್ ಪಕ್ಷ (ಮಾವೋವಾದಿ) ಇನ್ನೊಂದು ಪ್ರಬಲ ಪ್ರತ್ಯೇಕ ಕಮ್ಯುನಿಸ್ಟ್ ಪಕ್ಷವಾಗಿ ಮುಂದುವರೆದಿತ್ತು. ನೇಪಾಳ ಕಾಂಗ್ರೆಸ್ ಪಕ್ಷ ಮತ್ತೊಂದು ಪ್ರಮುಖ ಪಕ್ಷವಾಗಿತ್ತು. 2008ರಲ್ಲಿ ನಡೆದ ಚುನಾವಣೆಗಳ ನಂತರವೂ ರಾಜಕೀಯ ಅಸ್ಥಿರತೆ ಮುಂದುವರೆಯಿತು.



ಓಲಿ, ಮಾಧವ, ಪ್ರಚಂಡ (ಎಡದಿಂದ ಬಲಕ್ಕೆ)

2008 ಮತ್ತು 2018 ಅವಧಿಯಲ್ಲಿ 12 ಪ್ರಧಾನಿ ಮತ್ತು 10 ಸರಕಾರಗಳು ಅಧಿಕಾರ ವಹಿಸಿದವು. ಆದರೆ ಈ ಅವಧಿಯಲ್ಲಿ ನೇಪಾಳದ ಜನತೆಯ ಹಲವು ಜನವಿಭಾಗಗಳ ಹೋರಾಟಗಳನ್ನು ಮತ್ತು ಆಶೋತ್ತರಗಳನ್ನು ಪ್ರತಿನಿಧಿಸುವ ರಾಜಕೀಯ ಮತ್ತು ನಿಜವಾದ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ವಿಧಾನಗಳೂ ವಿಕಾಸಗೊಂಡಿವೆ. ಎಚ್ಚರಿಕೆಯಿಂದ ತಾಳ್ಮೆಯಿಂದ ರೂಪಿಸಿದ ಸಂವಿಧಾನದ ಮೂಲಕ ನೇಪಾಳದ ಜನತೆ ರಾಜಕೀಯ ವ್ಯವಸ್ಥೆಯನ್ನು ಕಟ್ಟಿಗೊಂಡಿದೆ. ಎಡ ಚಳುವಳಿ ಮತ್ತು ಪಕ್ಷಗಳು ತಮ್ಮ ರಾಜಕೀಯ ಮತ್ತು ಸೈದ್ಧಾಂತಿಕ ಭಿನ್ನಮತಗಳನ್ನು ಸಂವಾದದ ಮೂಲಕ ಬಗೆಹರಿಸಿಕೊಳ್ಳುತ್ತಾ ಬಂದಿದ್ದವು.

ಈ ಬೆಳವಣಿಗೆಗಳ ಫಲವಾಗಿ 2018ರ ಚುನಾವಣೆಗಳ ಮೊದಲು ಪ್ರಮುಖ ರಾಜಕೀಯ ಶಕ್ತಿ ಮತ್ತು ಪಕ್ಷಗಳಾದ ನೇಪಾಳ ಕಮ್ಯುನಿಸ್ಟ್ ಪಕ್ಷ (ಯು.ಎಂ.ಎಲ್ – ಏಕೀಕೃತ ಮಾರ್ಕ್ಸ್‌ವಾದಿ ಲೆನಿನ್‌ವಾದಿ) ಮತ್ತು ನೇಪಾಳ ಕಮ್ಯುನಿಸ್ಟ್ ಪಕ್ಷ (ಮಾವೋವಾದಿ) ಒಗ್ಗೂಡಿ ಜನತೆಯ ಮುಂದೆ ಹೋಗಲು ನಿರ್ಧರಿಸಿದವು. ಇದು ನೇಪಾಳೀಯರಲ್ಲಿ ಭಾರೀ ಉತ್ಸಾಹ ಮತ್ತು ನಿರೀಕ್ಷೆಗಳನ್ನು ಮೂಡಿಸಿದವು. ಪ್ರಬಲ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಕಟ್ಟಿ ನಿಜವಾದ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಬುನಾದಿ ಹಾಕಲು, ಜನರ ಸಾಮಾಜಿಕ ಸಾಂಸ್ಕೃತಿಕ ಹಾಗೂ ಅಸ್ಮಿತೆಗಳ ಆಶೋತ್ತರಗಳನ್ನು ಪೂರೈಸಲು ಸಮಾಜವಾದಿ ಧೋರಣೆಯ ಕ್ರಮಗಳನ್ನು ಕೈಗೊಳ್ಳಲು ಈ ಐಕ್ಯ ಕಮ್ಯುನಿಸ್ಟ್ ಪಕ್ಷಕ್ಕೆ ಜನತೆ ಭಾರೀ ಬಹುಮತ ನೀಡಿದರು. ಪಾರ್ಲಿಮೆಂಟಿನಲ್ಲಿ ಮೂರನೇ ಎರಡಕ್ಕೆ ಹತ್ತಿರದ ಬಹುಮತ ಮತ್ತು ಏಳರಲ್ಲಿ ಆರು ಪ್ರಾಂತ್ಯಗಳಲ್ಲಿ ಬಹುಮತವನ್ನು ಜನತೆ ಕೊಟ್ಟರು.

ಎರಡು ಕಮ್ಯುನಿಸ್ಟ್ ಪಕ್ಷಗಳು ಏಕೀಕರಣದ ಯೋಜನೆಯನ್ನು ಘೋಷಿಸುವಾಗ ಇದು ಚುನಾವಣೆಗೆ ಎರಡು ಪಕ್ಷಗಳ ಏಕೀಕರಣ ಮಾತ್ರವಲ್ಲ, ನೇಪಾಳದಲ್ಲಿನ ಎರಡು ರಾಜಕೀಯ–ಸೈದ್ಧಾಂತಿಕ ಧೋರಣೆಗಳ ಏಕೀಕರಣವೂ ಹೌದು ಮತ್ತು ಇದನ್ನು ನೇಪಾಳದ ಕ್ರಾಂತಿಕಾರಿ ಪ್ರಕ್ರಿಯೆಯ ಪ್ರಸಕ್ತ ಹಂತವನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗಿದೆ ಎಂದು ಹೇಳಲಾಯಿತು. ಎರಡು ಕಮ್ಯುನಿಸ್ಟ್ ಪಕ್ಷಗಳನ್ನು ಮೇಲಿಂದ ಕೆಳಗಿನ ಶಾಖೆಗಳ ಹಂತದವರೆಗೆ ಸಂಘಟನಾ ಏಕೀಕರಣಕ್ಕೆ ವಿವರವಾದ ಸಮಯಬದ್ಧ ಯೋಜನೆ ಹಾಕಲಾಗಿತ್ತು. ಪ್ರಜಾಸತ್ತಾತ್ಮಕ ಕೇಂದ್ರವಾದ, ಸಾಮೂಹಿಕ ನಿರ್ಣಯದ ಆಧಾರದ ಮೇಲಿನ ಸಾಮೂಹಿಕ ನಾಯಕತ್ವ, ವೈಯಕ್ತಿಕ ಜವಾಬ್ದಾರಿ ಮತ್ತು ಬಾಧ್ಯತೆಗಳ ನಿಯಮಗಳನ್ನು ಇದಕ್ಕೆ ಆಧಾರವಾಗಿ ಒಪ್ಪಿಕೊಳ್ಳಲಾಗಿತ್ತು. 433 ಸದಸ್ಯರಿರುವ ಕೇಂದ್ರ ಸಮಿತಿ, 44 ಸದಸ್ಯರ ಸ್ಥಾಯೀ ಸಮಿತಿ, ಮತ್ತು 9 ಸದಸ್ಯರ ಕೇಂದ್ರೀಯ ಕಾರ್ಯಕಾರಿ ಮಂಡಳಿ – ಎಂಬ ಮೂರು ಹಂತದ ಏಕೀಕೃತ ನಾಯಕತ್ವದ ವ್ಯವಸ್ಥೆಯನ್ನು ರೂಪಿಸಲಾಗಿತ್ತು. ಕೆ.ಪಿ.ಓಲಿ ಮತ್ತು ಪುಷ್ಪ ಕುಮಾರ್ ದಹಾಲ್ ಪ್ರಚಂಡ ಅವರಿಬ್ಬರನ್ನೂ ಪಕ್ಷದ ಸಹ–ಅಧ್ಯಕ್ಷರಾಗಿ ಪ್ರತ್ಯೇಕ ನಿಗದಿತ ಜವಾಬ್ದಾರಿಯೊಂದಿಗೆ ಆಯ್ಕೆ ಮಾಡಲಾಗಿತ್ತು. ಓಲಿ ಅವರು ಪಕ್ಷದ ಒಟ್ಟಾರೆ ಮಾರ್ಗದರ್ಶನದಲ್ಲಿ ಸರಕಾರದ ಕೆಲಸಗಳಿಗೆ ನಾಯಕತ್ವ ನೀಡಬೇಕಾಗಿತ್ತು. ಪ್ರಚಂಡ ಪಕ್ಷದ ನಾಯಕತ್ವ ವಹಿಸಿಕೊಂಡು ಕೆಳಗಿನಿಂದ ಮೇಲಿನ ಹಂತದ ವರೆಗೆ ಸಂಘಟನಾ ಏಕೀಕರಣ ಸಾಧಿಸುವ ಒಟ್ಟಾರೆ ಜವಾಬ್ದಾರಿಯನ್ನು ಕೊಡಲಾಗಿತ್ತು.



2018ರಲ್ಲಿ ಪ್ರಚಂಡ ಕಮ್ಯುನಿಸ್ಟ್ ಜಯ – ಜನತೆಯ ಉತ್ಸಾಹ, ನಿರೀಕ್ಷೆ

ಪ್ರಧಾನಿ ಓಲಿ ದುರ್ವರ್ತನೆ ವಿರುದ್ಧ ಕ್ರಮ

ಇವನ್ನು ಓಲಿ ಅವರು ಪಾಲಿಸದೆ ತಮ್ಮ ಬಣದ ಸದಸ್ಯರಿಗೆ ಪ್ರಮುಖ ಜವಾಬ್ದಾರಿಗಳನ್ನು ವಹಿಸುತ್ತಾ ಪಕ್ಷದ ಪ್ರಾಮಾಣಿಕ ಹಿರಿಯ ನಾಯಕರನ್ನು ನಿರ್ಲಕ್ಷ ಮಾಡಲಾರಂಭಿಸಿದರು. ಸರಕಾರದ ನಿರ್ಣಯಗಳಿಗೆ ಪಕ್ಷದ ಸಾಮೂಹಿಕ ನಾಯಕತ್ವದ ಜತೆ ಪರಾಮರ್ಶೆ ಮಾಡಿ ಅನುಮೋದನೆ ಪಡೆಯದೆ ತಮ್ಮದೇ ನಿರ್ಣಯಗಳನ್ನು ತೆಗೆದುಕೊಳ್ಳಲು ಆರಂಭಿಸಿದರು. ಪಕ್ಷದ ಮೂರು ಹಂತಗಳ ನಾಯಕತ್ವದ ಸಮಿತಿಗಳ ಸಭೆಯನ್ನು ಕರೆಯುವುದರಲ್ಲಿ ತಡೆ ಒಡ್ಡುತ್ತಾ ಸಾಮೂಹಿಕ ನಿರ್ಣಯ ರೂಪಿಸುವ ಕೆಲಸಗಳಿಗೆ ತಡೆಯುಂಟು ಮಾಡಿದರು. ಕಳೆದ ಎರಡು ವರ್ಷಗಳಿಂದ ಇದರಿಂದಾಗಿ ಪಕ್ಷದ ಏಕೀಕರಣ ಸಾಧಿಸುವ ಪ್ರಕ್ರಿಯೆಯಲ್ಲಿ ಪ್ರಗತಿ ಸಾಧಿಸುವಲ್ಲಿ ವಿಳಂಬವಾಗಿದೆ. ಏಕೀಕರಣ ಸಾಧಿಸಿ ಯೋಜಿಸಿದಂತೆ ಐಕ್ಯ ಪಕ್ಷದ ಮಹಾಧಿವೇಶನವನ್ನು ನಡೆಸುವುದು ಆಗಿಲ್ಲ. ಓಲಿ ಅವರು ಪಕ್ಷದ ಪ್ರಚಂಡ ಜಯವನ್ನು ತಮ್ಮ ವ್ಯಕ್ತಿಗತ ವರ್ಚಸ್ಸು ಬೆಳೆಸಲು ಬಳಸಿಕೊಳ್ಳಲಾರಂಭಿಸಿದರು. ಓಲಿ ಅವರ ಈ ವರ್ತನೆಯನ್ನು ನಿಯಂತ್ರಿಸುವ ಪಕ್ಷದ ಎಲ್ಲ ಪ್ರಯತ್ನಗಳು ವಿಫಲವಾದವು.

ಈ ಪರಿಸ್ಥಿತಿಯಲ್ಲಿ 20 ಸದಸ್ಯರ ಕೋರಿಕೆ ಮೇಲೆ ಸ್ಥಾಯೀ ಸಮಿತಿ ಸಭೆ ಸೇರಿ ಹಲವು ಪ್ರಮುಖ ನಿರ್ಣಯಗಳನ್ನು ತೆಗೆದುಕೊಂಡಿತು. ಸರಕಾರ ಚುನಾವಣೆಯಲ್ಲಿ ಜನತೆಗೆ ಕೊಟ್ಟಿರುವ ಭರವಸೆಗಳನ್ನು ಈಡೇರಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ಸರಕಾರಿ ನೀತಿಗಳಲ್ಲಿ ಸಮಾಜವಾದಿ ಧೋರಣೆ ಇರಬೇಕು. ಪ್ರಮುಖ ನೀತಿ ನಿರ್ಣಯಗಳು ಮತ್ತು ರಾಜಕೀಯ ನೇಮಕಾತಿಗಳಲ್ಲಿ ಪಕ್ಷದ ನಿರ್ದೇಶನಗಳನ್ನು ಪಾಲಿಸಬೇಕು. ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳ ಮಂತ್ರಿಮಂಡಲಗಳನ್ನು ಪಕ್ಷದ ನಿರ್ದೇಶನದಂತೆ ಪುನರ್ರಚಿಸಬೇಕು. ಪಕ್ಷದ ಮಹಾಧಿವೇಶನವನ್ನು ಎಪ್ರಿಲ್ 2021ರಲ್ಲಿ ನಡೆಸಬೇಕು, ಎಂಬಿತ್ಯಾದಿ ನಿರ್ಣಯಗಳನ್ನು ಸ್ಥಾಯೀ ಸಮಿತಿ ತೆಗೆದುಕೊಂಡಿತು. ಓಲಿ ಅವರು ಈ ನಿರ್ದೇಶನಗಳನ್ನು ಪಾಲಿಸುವ ಬದಲು ತಮ್ಮ ಮನಸ್ಸಿಗೆ ಬಂದಂತೆ ಸಂಪುಟ ಪುನರ್ರಚನೆ ಮಾಡಿದರು. ಓಲಿ ಅವರ ಜತೆ ಹಲವು ಹಿರಿಯ ನಾಯಕರ ಪತ್ರ ವಿನಿಮಯಗಳ ನಂತರವೂ ಸರಿಪಡಿಸುವ ಸೂಚನೆಗಳು ಕಾಣದಿದ್ದಾಗ ಕೇಂದ್ರೀಯ ಕಾರ್ಯದರ್ಶಿ ಮಂಡಳಿ ಸ್ಥಾಯೀ ಸಮಿತಿ ಮತ್ತು ಕೇಂದ್ರ ಸಮಿತಿಗಳ ಸಭೆಯನ್ನು ಕರೆದು ವ್ಯಾಪಕ ಚರ್ಚೆ ನಡೆಸಲು ನಿರ್ಧರಿಸಿತು. ಪಕ್ಷದ 90 ಸದಸ್ಯರು ಪಾರ್ಲಿಮೆಂಟಿನ ಅಧಿವೇಶನ ಕರೆಯುವಂತೆ ಅಧ್ಯಕ್ಷರಿಗೆ ಪತ್ರ ಬರೆದರು.

ಈ ನಡುವೆ ಪ್ರಧಾನಿ ಓಲಿ ಸಂವಿಧಾನಿಕ ಹುದ್ದೆಗಳ ನೇಮಕಾತಿಗಳ ಮೇಲೆ ಹಲವು ನಿರ್ಬಂಧಗಳನ್ನು ಹೇರಿರುವ ಸಂವಿಧಾನಿಕ ಮಂಡಳಿಯ ನಿಯಮಗಳನ್ನು ಸಡಿಲಿಸುವ ತಿದ್ದುಪಡಿಗಳನ್ನು ಸುಗ್ರೀವಾಜ್ಞೆಗಳ ಮೂಲಕ ಮಾಡಿದರು. ಅವರು ತಮ್ಮ ಬೆಂಬಲಿಗರನ್ನು ಈ ಮಂಡಳಿಗಳಿಗೆ ನೇಮಕಾತಿ ಮಾಡಲು ಅನುವಾಗುವಂತೆ ಇದನ್ನು ಮಾಡಿದರು ಎಂದು ಆಪಾದಿಸಲಾಯಿತು. ಇದನ್ನು ಚರ್ಚಿಸಲು ಕರೆದ ಸ್ಥಾಯೀ ಸಮಿತಿಯ ತುರ್ತುಸಭೆಯಲ್ಲಿ ಪ್ರಧಾನಿ ಓಲಿ ಸಹ ಭಾಗವಹಿಸಿದರು. ಈ ತಿದ್ದುಪಡಿಯನ್ನು ಬಳಸಿ ಯಾವುದೇ ನೇಮಕಾತಿಗಳನ್ನು ಮಾಡಿಲ್ಲ, ಮಾಡುವುದೂ ಇಲ್ಲ. ಈ ➚

ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಹಿರಿಯ ಪತ್ರಕರ್ತರ ಮೇಲೆ ರಾಜದ್ರೋಹದ ಎಫ್.ಐ.ಆರ್.

ಹಿರಿಯ ಪತ್ರಿಕಾ ಸಂಪಾದಕರು ಮತ್ತು ಪತ್ರಕರ್ತರುಗಳ ಮೇಲೆ ಅವರು ರೈತರ ಟ್ರಾಕ್ಟರ್ ರ್‍ಯಾಲಿಯ ಬಗ್ಗೆ ವರದಿ ಮಾಡಿದ್ದಕ್ಕಾಗಿ ರಾಜದ್ರೋಹದ ಎಫ್.ಐ.ಆರ್.ಗಳನ್ನು ಹಾಕಿರುವುದನ್ನು ಮಾಧ್ಯಮಗಳನ್ನು ಮಣಿಸುವ, ಬೆದರಿಸುವ ಪ್ರಯತ್ನ ಎಂದು ಹಲವು ಪತ್ರಕರ್ತರ ಸಂಘಟನೆಗಳು ಬಲವಾಗಿ ಖಂಡಿಸಿವೆ.

ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ಹರ್ಯಾಣದಲ್ಲಿ 'ಇಂಡಿಯ ಟುಡೆ'ಯ ಹಿರಿಯ ಪತ್ರಕರ್ತ ರಾಜದೀªï ಸರ್ದೇಸಾಯಿ, ನ್ಯಾಶನಲ್ ಹೆರಾಲ್ಡ್ ಪತ್ರಿಕೆಯ ಹಿರಿಯ ಸಮಾಲೋಚನಾ ಸಂಪಾದಕಿ ಮೃಣಾಲ್ ಪಾಂಡೆ, 'ಕೌಮಿ ಆವಾಝ್'ನ ಸಂಪಾದಕ ಝಫರ್ ಆಘ, 'ಕಾರವಾನ್' ಮ್ಯಾಗಝಿನ್‌ನ ವ್ಯವಸ್ಥಾಪಕ ಸಂಪಾದಕ ಮತ್ತು ಸಂಸ್ಥಾಪಕ ಪರೇಶ್ ನಾಥ್, ಸಂಪಾದಕ ಅನಂತನಾಥ್ , ಕಾರ್ಯಕಾರಿ ಸಂಪಾದಕ ವಿನೋದ ಕೆ ಜೋಸ್ ಮತ್ತು ಕಾಂಗ್ರೆಸ್ ಸಂಸದ್ ಸದಸ್ಯ ಶಶಿ ಥರೂರ್ ಹಾಗೂ ಇನ್ನೊಬ್ಬ ಹೆಸರಿಸದ ವ್ಯಕ್ತಿಯ ಮೇಲೆ ರಾಜದ್ರೋಹದ ಮೊಕದ್ದಮೆಗಳನ್ನು ಹಾಕಲಾಗಿದೆ. ರೈತರ ಟ್ರಾಕ್ಟರ್ ರ್‍ಯಾಲಿಯ ವೇಳೆಯಲ್ಲಿ 'ದೃಢಪಡಿಸದ' ಸುದ್ದಿಯನ್ನು ಹಂಚಿಕೊಂಡಿದ್ದಾರೆ ಎಂಬುದು ಇವರುಗಳ ಮೇಲಿನ ದೂರು.

ಪ್ರತಿಭಟನಾಕಾರರಲ್ಲಿ ಒಬ್ಬರ ಸಾವಿನ ಬಗ್ಗೆ ತಮ್ಮ ವೈಯಕ್ತಿಕ ಮತ್ತು ಅವರ ಸಂಸ್ಥೆಗಳ ಸಾಮಾಜಿಕ ಮಾಧ್ಯಮ ಹ್ಯಾಂಡಲ್ ಗಳಲ್ಲಿ ಹಂಚಿಕೊಂಡದ್ದಕ್ಕಾಗಿ ನಿರ್ದಿಷ್ಟವಾಗಿ ಇವರುಗಳ ಮೇಲೆ ಗುರಿಯಿಡಲಾಗಿದೆ ಎಂದು ಪತ್ರಕರ್ತರ ಸಂಘಟನೆಗಳು ಖಂಡಿಸಿವೆ.

ಇವನ್ನು 'ದುರುದ್ದೇಶಪೂರಿತ ವರದಿಗಾರಿಕೆ' ಎಂದು ಹೇಳುವುದು ಕ್ರಿಮಿನಲ್ ಕ್ರಮ ಆಗುತ್ತದೆ ಎಂದು ಪ್ರೆಸ್ ಕ್ಲಬ್ ಆಫ್ ಇಂಡಿಯಾ ಖಂಡಿಸಿದೆ. ಸಮುದಾಯಗಳ ನಡುವೆ ವೈಷಮ್ಯವನ್ನು ಉಂಟು ಮಾಡಲು ಸಿಖ್ ಸಮುದಾಯದ ಹೆಸರುಗೆಡಿಸಲು, ಒಂದು ಗಡಿರಾಜ್ಯದಲ್ಲಿ ಗೊಂದಲ ಉಂಟುಮಾಡಲು, ಇದರಿಂದ ವಸ್ತುತಃ ದೇಶದ ಶತ್ರುಗಳಿಗೆ ನೆರವಾಗಲು ಈ ವ್ಯಕ್ತಿಗಳು ಪಿತೂರಿ ನಡೆಸಿದ್ದಾರೆ ಎನ್ನುವುದು ಹಾಸ್ಯಾಸ್ಪದ, ಈ ಎಫ್.ಐ.ಆರ್.ಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಈ ರಾಜ್ಯ ಸರಕಾರಗಳನ್ನು ಹಾಗೂ ಕೇಂದ್ರ ಗೃಹಮಂತ್ರಾಲಯ ಈ ಕುರಿತು ಈ ಎರಡು ರಾಜ್ಯಸರಕಾರಗಳಿಗೆ ಎಚ್ಚರಿಕೆ ನೀಡಬೇಕು ಎಂದು ಅದು ಆಗ್ರಹಿಸಿದೆ.

ದೇಶದ ಪತ್ರಿಕಾ ಸಂಪಾದಕರುಗಳ ಸಂಸ್ಥೆಯಾದ 'ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯ' ಕೂಡ ಇದನ್ನು ಖಂಡಿಸುತ್ತ ಇದು ಪತ್ರಕರ್ತರಿಗೆ ಕಿರುಕುಳ ಕೊಡುವ, ಅವರನ್ನು ಬೆದರಿಸುವ, ಮಣಿಸುವ ಮತ್ತು ಬಾಯಿ ಮುಚ್ಚಿಸುವ ಪ್ರಯತ್ನ ಎಂದು ಹೇಳಿದೆ. ರಾಜದ್ರೋಹ, ಸಮುದಾಯಗಳ ನಡುವೆ ವೈಷಮ್ಯ ತರುವುದು, ಧಾರ್ಮಿಕ ನಂಬಿಕೆಗಳನ್ನು ಅವಮಾನ ಮಾಡುವುದು ಮುಂತಾದ 10 ವಿಭಿನ್ನ ಅಂಶಗಳ ಅಡಿಯಲ್ಲಿ ಆರೋಪಗಳನ್ನು ಮಾಡಿರುವುದು ಇನ್ನೂ ಆತಂಕಕಾರಿ ಸಂಗತಿ ಎಂದು ಅದು ಹೇಳಿದೆ.

ಉನ್ನತ ನ್ಯಾಯಾಂಗ ರಾಜದ್ರೋಹ ಮುಂತಾದ ಕಾನೂನಿನ ಅಂಶಗಳನ್ನು ವಾಕ್ ಸ್ವಾತಂತ್ರ್ಯದ ಹರಣಕ್ಕಾಗಿ ದುರುಪಯೋಗಪಡಿಸಿಕೊಳ್ಳುವುದನು ಗಂಭೀರವಾಗಿ ತೆಗೆದುಕೊಳ್ಳಬೇಕು ಎಂಬ ತನ್ನ ಆಗ್ರಹವನ್ನು ಸಂಪಾದಕರ ಗಿಲ್ಡ್ ಪುನರುಚ್ಚರಿಸಿದೆ.

ಭಾರತೀಯ ಮಹಿಳಾ ಪತ್ರಿಕಾ ದಳ(ಐ.ಡಬ್ಲ್ಯು.ಪಿ.ಸಿ.) ಇದು ಸನ್ನಿವೇಶವನ್ನು ತಪ್ಪಾಗಿ ಬಿಂಬಿಸುವ ಉದ್ದೇಶಪೂರ್ವಕವಾದ ಪ್ರಯತ್ನ ಎಂದು ಖಂಡಿಸುತ್ತ, ಮಾಧ್ಯಮಗಳು ಹೇಳಿದಂತೆ ಕೇಳಬೇಕೆಂದು ಬೆದರಿಸುವ ಪ್ರಯತ್ನ ಎಂದು ಹೇಳಿದೆ. ಮೃಣಾಲ್ ಪಾಂಡೆ ಈ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷೆಯಾಗಿದ್ದು ದೇಶದ ಹಲವು ಪ್ರಮುಖ ಪತ್ರಿಕೆಗಳಲ್ಲಿ ಸಂಪಾದಕರಾಗಿ ಕೆಲಸಮಾಡಿರುವ ಪ್ರತಿಷ್ಠಿತ ಪತ್ರಕರ್ತರು.

ಪತ್ರಕರ್ತರ ವಿರುದ್ಧದ ಕೇಸುಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸುತ್ತ ದಿಲ್ಲಿ ಪತ್ರಕರ್ತರ ಸಂಘ(ಡಿಯುಜೆ) ಈ ರೀತಿಯಲ್ಲಿ ತಮ್ಮ ವೃತ್ತಿಯನ್ನು ಅನುಸರಿಸದಂತೆ ತಡೆಯಲು ಮನಬಂದಂತೆ ಆರೋಪಗಳನ್ನು ಹಾಕುವುದು, ಬಂಧಿಸುವುದು, ವಿಚಾರಣೆಗೆ ಒಳಪಡಿಸುವುದು ಇತ್ಯಾದಿಗಳಿಂದ ಮಾಧ್ಯಮ ವ್ಯಕ್ತಿಗಳನ್ನು ರಕ್ಷಿಸಲು ಒಂದು ವಿಶೇಷ ಕಾಯ್ದೆ ಇರಬೇಕು, ರಾಜದ್ರೋಹ ಮತ್ತಿತರ ಕರಾಳ ಕಾಯ್ದೆಗಳನ್ನು ರದ್ದು ಮಾಡಬೇಕು ಎಂಬ ತನ್ನ ಬೇಡಿಕೆಗಳನ್ನು ಪುನರುಚ್ಚರಿಸಿದೆ. ಪತ್ರಕರ್ತೆ ನೇಹಾ ದೀಕ್ಷಿತ್ ಅವರ ಮನೆಗೆ ನುಗ್ಗಲು ಪ್ರಯತ್ನಿಸಿದ ಅಪರಾಧಿಗಳನ್ನು ವಿಚಾರಣೆಗೆ ಗುರಿಪಡಿಸಬೇಕು ಎಂದೂ ಡಿಯುಜೆ ಆಗ್ರಹಿಸಿದೆ.

ರೈತರ ಹೋರಾಟದ ವರದಿ ಮಾಡುವುದರ ಮೇಲೂ ಪೋಲಿಸ್ ಕ್ರಮ–ಪತ್ರಕರ್ತರ ಪ್ರತಿಭಟನೆ

ದಿಲ್ಲಿಯಲ್ಲಿ ರೈತರ ಹೋರಾಟಗಳ ವರದಿ ಮಾಡುತ್ತಿರುವ ಇಬ್ಬರು ಯುವ ಪತ್ರಕರ್ತರ ಮೇಲೆ ದಿಲ್ಲಿ ಪೋಲಿಸ್ ಕ್ರಮಗಳ ವಿರುದ್ಧ ವ್ಯಾಪಕ ಪ್ರತಿಭಟನೆ ವ್ಯಕ್ತವಾಗುತ್ತಿದೆ.

ಫ್ರೀಲಾನ್ಸ್ ಪತ್ರಕರ್ತ ಮನದೀಪ್ ಪೂನಿಯ ಮತ್ತು ಆನ್‌ಲೈನ್ ನ್ಯೂಸ್ ಇಂಡಿಯಾದ ಧರ್ಮೆಂದರ್ ಸಿಂಗ್ ಇವರಿಬ್ಬರನ್ನೂ ಸಿಂಘು ಗಡಿಯಿಂದ ಜನವರಿ 30ರ ಸಂಜೆ ದಿಲ್ಲಿ ಪೋಲೀಸ್ ಕರೆದೊಯ್ದರು. ಧರ್ಮೆಂದರ್ ಸಿಂಗ್ ರವರನ್ನು ನಂತರ ಬಿಡುಗಡೆ ಮಾಡಲಾಯಿತು, ಆದರೆ ಪೂನಿಯ ಅವರನ್ನು ದಿಲ್ಲಿಯ ನ್ಯಾಯಾಲಯವೊಂದು 14 ದಿನಗಳ ಪೋಲೀಸ್ ಕಸ್ಟಡಿಗೆ ಒಪ್ಪಿಸಿತು.

ಮನ್‌ದೀಫ್ ಪೂನಿಯ 'ಕಾರವಾನ್' ಮತ್ತು 'ಜನ್ ಪಥ್'ಗೆ ಬರೆಯುತ್ತಿರುವ ಯುವ ಪತ್ರಕರ್ತ. ಸಿಂಘು ನ ಪ್ರತಿಭಟನಾ ಜಾಗದಲ್ಲಿ ಒಬ್ಬ ಪೊಲೀಸ್ ಸ್ಟೇಷನ್ ಹೌಸ್ ಆಫೀಸರ್‌ನೊಂದಿಗೆ ದುರ್ವರ್ತನೆ ನಡೆಸಿದ್ದಾರೆಂಬುದು ಆತನ ಮೇಲೆ ಆರೋಪ. ಸಾರ್ವಜನಿಕ ಕರ್ತವ್ಯದ ಮೇಲಿರುವ ಸಾರ್ವಜನಿಕ ಸೇವಕನಿಗೆ ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸುವುದನ್ನು ಶಿಕ್ಷಿಸುವ ನಾಲ್ಕು ಐಪಿಸಿ ಅಂಶಗಳ ಮೇಲೆ ಆತನನ್ನು ಕಸ್ಟಡಿಗೆ ಒಪ್ಪಿಸಲಾಗಿದೆ.

ಇದನ್ನು ಪ್ರೆಸ್ ಕ್ಲಬ್ ಆಫ್ ಇಂಡಿಯ, ಇಂಡಿಯನ್ ವಿಮೆನ್ಸ್ ಪ್ರೆಸ್ ಕೋರ್ ಮತ್ತು ಪ್ರೆಸ್ ಅಸೋಸಿಯೇಷನ್ ಖಂಡಿಸಿವೆ. ಆತನನ್ನು ತಕ್ಷಣವೇ ಬಿಡುಗಡೆ ಮಾಡಬೇಕು, ಯಾವ ಪತ್ರಕರ್ತನ್ನೂ ಯಾವುದೇ ಜಾಗದಲ್ಲಿ ತನ್ನ ಕರ್ತವ್ಯ ನೇರವೇರಿಸುತ್ತಿರುವಾಗ ಅಡ್ಡಿಪಡಿಸಬಾರದು ಎಂದು ಅವು ಆಗ್ರಹಿಸಿವೆ. ಮನ್‌ದೀಪ್ ಆರಂಭದಿಂದಲೇ ರೈತರ ಚಳುವಳಿ ಬಗ್ಗೆ ವರದಿ ಮಾಡುತ್ತಿದ್ದಾರೆ. ಆತನ ಬಂಧನ ಪತ್ರಕರ್ತರು ಸ್ವತಂತ್ರವಾಗಿ ಮತ್ತು ಮುಕ್ತವಾಗಿ ಕೆಲಸ ಮಾಡದಂತೆ ತಡೆಯುವ ಸರಕಾರ ದದಮನ ಕ್ರಮದ ಭಾಗ ಎಂದು ಅವು ಹೇಳಿವೆ.

ಪಟೇಲ್ ಚೌಕ್‌ನಲ್ಲಿರುವ ಹೊಸ ಪೋಲೀಸ್ ಮುಖ್ಯ ಕಚೇರಿಯೆದುರು ಪತ್ರಕರ್ತರು ಜನವರಿ 31 ರಂದು ಮೌನಪ್ರದರ್ಶನ ನಡೆಸಿದರು. "ಯಾವ ಸೆರೆಮನೆಯೂ ವಾಕ್ ಸ್ವಾತಂತ್ರ್ಯವನ್ನು ಬಂಧಿಸಿಡುವಷ್ಟು ದೊಡ್ಡದಲ್ಲ" ಎಂದು ಹಲವು ಹಿರಿಯ ಪತ್ರಕರ್ತರು ಪೋಲಿಸರ ಈ ಕ್ರಮದ ವಿರುದ್ಧ ಟ್ವೀಟ್ ಮಾಡಿದ್ದಾರೆ.

ಈಗ ಮನದೀಪ್‌ಗೆ ಕೊನೆಗೂ ಜಾಮೀನು ಸಿಕ್ಕಿದೆ.

'ದಿ ವೈರ್' ನ ಸಂಪಾದಕರ ಮೇಲೂ ಎಫ್.ಐ ಆರ್

ಜನವರಿ 26ರಂದು ಕೆಂಪುಕೋಟೆಯ ಬಳಿ ಸಾವನ್ನಪ್ಪಿದ ಯುವ ರೈತ ನವ್ರೀತ್ ಸಿಂಗ್ ನ ಕುಟುಂಬದವರ ಆಪಾದನೆಯನ್ನು ವರದಿ ಮಾಡಿದ್ದಕ್ಕಾಗಿ ಪ್ರಮುಖ ವೆಬ್ ಪತ್ರಿಕೆಯಾದ 'ದಿ ವೈರ್'ನ ಸಂಸ್ಥಾಪಕ ಸಂಪಾದಕರು ಮತ್ತು ಹಿರಿಯ ಪತ್ರಕರ್ತರೂ ಆದ ಸಿದ್ದಾರ್ಥ ವರದರಾಜನ್ ಮೇಲೆ ಉತ್ತರಪ್ರದೇಶದ ರಾಂಪುರ ಜಿಲ್ಲೆಯ ಪೋಲೀಸ್ ಎಫ್.ಐ.ಆರ್ ಹಾಕಿದ್ದಾರೆ ಎಂದು ವರದಿಯಾಗಿದೆ.

ತನ್ನ ಟ್ವಟಲ್ಫಿ ನಲ್ಲಿ ಅವರು "ಟ್ರಾಕ್ಟರ್ ಪರೇಡಿನಲ್ಲಿ ಕೊಲ್ಲಲ್ಪಟ್ಟ ಯುವಕನ ತಾತ ಹರ್ದಿಪ್ ಸಿಂಗ್ ಡಿಬ್‌ಡಿಬ, ಒಂದು ಅಚ್ಚರಿಗೊಳಿಸುವ ಆರೋಪ ಮಾಡಿದ್ದಾರೆ– ಅಟೊಪ್ಸಿಯ ಭಾಗವಾಗಿರುವ ಒಬ್ಬ ಡಾಕ್ಟರ್ ಗಾಯಗಳು ಬುಲೆಟಿನಿಂದಾಗಿದೆ 'ಆದರೆ ನನ್ನ ಕೈಗಳು ಕಟ್ಟಲ್ಪಟ್ಟಿವೆ' ಅವರಿಗೆ ಹೇಳಿದ್ದಾರಂತೆ." ಎಂದು ಬರೆದಿದ್ದರು.

"ವೈರತ್ವಪೂರ್ಣ ಕಾನೂನುಕ್ರಮ'ಕ್ಕೆ ಭಾರತೀಯ ದಂಡಸಂಹಿತೆಯಲ್ಲಿರುವ ಅಂಶ ಏನು ಎಂದು ಸಿದ್ದಾರ್ಥ ವರದರಾಜನ್ ಕೇಳಿದ್ದಾರೆ. ಕೊಲ್ಲಲ್ಪಟ್ಟ ಯುವಕನ ತಾತ ಹೇಳಿದ್ದನ್ನು ಮಾತ್ರವಲ್ಲ, ಇದನ್ನು ನಿರಾಕರಿಸಿರುವ ಪೋಲೀಸ್ ಮತ್ತು ಡಾಕ್ಟರುಗಳ ಹೇಳಿಗಳನ್ನೂ 'ದಿ ವೈರ್' ವರದಿ ಪ್ರಕಟಿಸಿದೆ ಎಂಬುದನ್ನು ಇಲ್ಲಿ ಗಮನಿಸಬಹುದು.

ಮನ್‌ದೀಪ್‌ಗೆ ಈಗ ಜಾಮೀನು ಸಿಕ್ಕಿದೆ.

ಸುಗ್ರೀವಾಜ್ಞೆಗಳನ್ನು ಹಿಂತೆಗೆಯಲಾಗುವುದು ಎಂದೂ ಒಪ್ಪಿಕೊಂಡರು. ಆದರೆ ಓಲಿ ಅವರು ಸುಗ್ರೀವಾಜ್ಞೆಗ್ಗಳನ್ನು ಹಿಂತೆಗೆಯಲಿಲ್ಲ, ಮಾತ್ರವಲ್ಲ 5 ರಲ್ಲಿ 4 ಸಂವಿಧಾನಿಕ ಹುದ್ದೆಗಳಿಗೆ ತಮಗೆ ಬೇಕಾದವರ ನೇಮಕಾತಿಗಳನ್ನು ಮಾಡಿದರು. ಸಂಪುಟ ಪುನರ್ರಚನೆಯನ್ನೂ ಮಾಡಿದರು. ಇದನ್ನು ಗಂಭಿರವಾಗಿ ತೆಗೆದುಕೊಂಡು ಪಕ್ಷದ ನಾಯಕತ್ವ ಪಕ್ಷದ ಪಾರ್ಲಿಮೆಂಟು ಸದಸ್ಯರಿಗೆ ಪಾರ್ಲಿಮೆಂಟಿನ ಅಧಿವೇಶನಕ್ಕೆ ಒತ್ತಾಯಿಸಿ ತಮ್ಮನ್ನು ಪದಚ್ಯುತಿಗೊಳಿಸುವುದು ನಿಶ್ವಯ ಎಂದು ಮನಗಂಡ ಓಲಿ ಅವರು ಪಾರ್ಲಿಮೆಂಟಿನ ವಿಸರ್ಜನೆಗೆ ಶಿಫಾರಸು ಮಾಡಿದರು. ಪಕ್ಷದ ಕೇಂದ್ರ ಸಮಿತಿ ಸಭೆ ಸೇರಿ ಮೂರನೇ ಎರಡು ಬಹುಮತದಿಂದ (432 ಸದಸ್ಯರಲ್ಲಿ 315 ಸದಸ್ಯರು ಅನುಮೋದಿಸಿದ) ಓಲಿ ಅವರನ್ನು ಸಹ–ಅಧ್ಯಕ್ಷರ ಹುದ್ದೆಯಿಂದ ವಜಾ ಮಾಡಲು ಮತ್ತು ಅವರ ಜಾಗದಲ್ಲಿ ಮಾಜಿ ಪ್ರಧಾನಿಯಾದ ಮಾಧವ ಕುಮಾರ ನೇಪಾಳ ಅವರನ್ನು ಸಹ–ಅಧ್ಯಕ್ಷರಾಗಿ ಆಯ್ಕೆ ಮಾಡಲು ನಿರ್ಧರಿಸಿತು. ಪಾರ್ಲಿಮೆಂಟು ವಿಸರ್ಜನೆಗೆ ಅಧ್ಯಕ್ಷರ ಮಂಜೂರಾತಿಯನ್ನು ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನಿಸಲು ಮತ್ತು ಓಲಿ ಅವರನ್ನು ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲು ಕೇಂದ್ರ ಸಮಿತಿ ಆ ನಂತರ ನಿರ್ಧರಿಸಿದೆ. ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಪ್ರಧಾನಿ ಮತ್ತು ಅಧ್ಯಕ್ಷರ ನಿರ್ಣಯಗಳ ಕುರಿತು ಜನತೆಯನ್ನು ಎಚ್ಚರಿಸಲು ದೇಶವ್ಯಾಪಿ ಪ್ರಚಾರಾಂದೋಲನ ನಡೆಸಲು ಸಹ ನಿರ್ಧರಿಸಿತು.

ಸಹಜವಾಗಿಯೇ ಈ ಆತಂಕಕಾರಿ ಬೆಳವಣಿಗೆಗಳು ಬಲಪಂಥೀಯ ರಾಜಪ್ರಭುತ್ವವನ್ನು ಬೆಂಬಲಿಸುವ ಹಾಗೂ ಹಿಂದುತ್ವ (ಹೌದು ! ನೇಪಾಳವನ್ನು ಹಿಂದೂ ರಾಷ್ಟ್ರವಾಗಿಸುವ ಶಕ್ತಿಗಳೂ ಒಂದು ದಶಕದಿಂದ ಸಕ್ರಿಯವಾಗಿ ಇವೆ) ಶಕ್ತಿಗಳಿಗೆ ಅನುಕೂಲಕರವಾಗಿವೆ. ಈ ಶಕ್ತಿಗಳು ಓಲಿ ಸರಕಾರ ಮತ್ತು ನೇಪಾಳ ಕಮ್ಯುನಿಸ್ಟ್ ಪಕ್ಷದ ವಿರುದ್ಧ ತೀವ್ರ ಪ್ರಚಾರ ಆರಂಭಿಸಿವೆ. ಮಾಜಿ ರಾಜ ಸಹ ರಾಜಕೀಯವಾಗಿ ಸಕ್ರಿಯವಾಗಿದ್ದು ದೇಶವ್ಯಾಪಿ ಪ್ರಚಾರ ಸಭೆಗಳನ್ನು ಸಂಘಟಿಸುತ್ತಿದ್ದಾನೆ.

ಇದು ಗಂಭೀರ ಪರಿಸ್ಥಿತಿ. ದಶಕಗಳ ಪರಿಶ್ರಮ, ಹೋರಾಟಗಳ ನಂತರ ವಿಕಾಸಗೊಂಡ ಫೆಡರಲ್ ಜಾತ್ಯತೀತ ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪಿಸಿದ ಸಂವಿಧಾನದ ವಿಕಾಸ ಮತ್ತು ಸಮಾಜವಾದಿ ಧೋರಣೆಯ ಪಕ್ಷ ಅಧಿಕಾರ ವಹಿಸಿಕೊಂಡ ಸಕಾರಾತ್ಮಕ ರಾಜಕೀಯ ಸಾದನೆಗಳನ್ನು ಮಣ್ಣುಪಾಲು ಮಾಡುವ ಸಾಧ್ಯತೆಗಳಿರುವ ಗಂಭಿರ ಪರಿಸ್ಥಿತಿ. ನೇಪಾಳದಲ್ಲಿ ದುಡಿಯುವ ವರ್ಗಗಳ ಪರವಾಗಿ ಬದಲಾದ ವರ್ಗಗಳ ಬಲಾಬಲ ಬುಡಮೇಲಾಗುವ ಸ್ಥಿತಿ. ನೇಪಾಳ ಕಮ್ಯುನಿಸ್ಟ್ ಪಕ್ಷವು ತನ್ನ ಮತ್ತು ಜನತೆಯ ಈ ಸಾಧನೆಗಳನ್ನು ವಿಫಲಗೊಳಿಸುವ ಶಕ್ತಿಗಳು ಮತ್ತು ಸಾಧ್ಯತೆಗಳನ್ನು ಹಿಮ್ಮೆಟ್ಟಿಸಿ ಸೋಲಿಸಲು ಹಾಗೂ ಇಡೀ ಪಕ್ಷವನ್ನು ಮತ್ತು ಜನತೆಯನ್ನು ಇದಕ್ಕಾಗಿ ಅಣಿ ನೆರೆಸಲು ನಿರ್ಧರಿಸಿದೆ. ಓಲಿ ಅವರ ಬಣಕ್ಕೆ ಪಕ್ಷದೊಳಗೆ ಬೆಂಬಲ ತೀರಾ ಕಡಿಮೆ ಇದ್ದು, ಪಕ್ಷದೊಳಗೆ ಮತ್ತು ಹೊರಗೆ ಆ ಬಣದ ವಿರುದ್ಧ ಹೋರಾಟಕ್ಕೆ ಸಜ್ಜಾಗುತ್ತಿದೆ. ನಾಲ್ಕು ಮಾಜಿ ಸುಪ್ರೀಂ ಕೋರ್ಟು ನ್ಯಾಯಾಧೀಶರು ಸೇರಿದಂತೆ ನಾಗರಿಕ ಸಮಾಜ, ಬುದ್ಧಿಜೀವಿಗಳು ಪಾರ್ಲಿಮೆಂಟಿನ ಅಸಂವಿಧಾನಿಕ ವಿಸರ್ಜನೆಯನ್ನು ಕಟುವಾಗಿ ಟೀಕಿಸಿದ್ದಾರೆ. ಆದರೂ ಪರಿಸ್ಥಿತಿ ಗಂಭೀರವಾಗಿದ್ದು ಏನೂ ಆಗಬಹುದು. ನೇಪಾಳದ ಕಮ್ಯುನಿಸ್ಟ್ ಚಳುವಳಿ ಏಳು ದಶಕಗಳ ತನ್ನ ಮತ್ತು ಜನತೆಯ ಸಾಧನೆಗಳನ್ನು ಹೋರಾಟದ ದೀರ್ಘ ಅನುಭವಗಳ ಮೂಲಕ ಉಳಿಸಿಕೊಳ್ಳಬಹುದು ಎಂದು ಆಶಿಸಬೇಕಾಗಿದೆ.

ಮೌರ್ಯಾ ನಂತರದ ಭಾರತದ ಇತಿಹಾಸದ..... ಪುಟ 16 ರಿಂದ

ಇತಿಹಾಸದ ಅಂಶಗಳು ಮತ್ತು ಕುಶಾನರ ಕಾಲಾನುಕ್ರಮದ ಮರುರಚನೆಯಂತಹ ಐತಿಹಾಸಿಕ ಸಮಸ್ಯೆಗಳ ಕುರಿತು ವಿಶೇಷ ಟಿಪ್ಪಣಿಗಳಿವೆ.

ಪ್ರೊ. ಇರ್ಫಾನ್ ಹಬೀಬ್ (ಪುಸ್ತಕದ ಬ್ಲರ್ಬಿನಿಂದ)

'ಭಾರತದ ಜನ ಇತಿಹಾಸ'ದ ಪುಸ್ತಕ ಮಾಲೆಯ ಪುಸ್ತಕಗಳಲ್ಲಿ ಕೆಲವು ಇಂಗ್ಲಿಷ್ ಚರಿತ್ರೆಕಾರರಲ್ಲಿದ್ದ ವಸಾಹತುಪರ ಧೋರಣೆಯೂ ಇಲ್ಲ ಅಥವಾ ಧರ್ಮಾಧಾರಿತ ವ್ಯಾಖ್ಯಾನವೂ ಇಲ್ಲಿಲ್ಲ. ಅಥವಾ ಚರಿತ್ರೆಯನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುವುದಕ್ಕೋಸ್ಕರ ತಿರುಚಿದ ಚರಿತ್ರೆಯ ಕಟ್ಟುವಿಕೆಯೂ ಅಲ್ಲ. ಇದು ಸಂಪೂರ್ಣವಾಗಿ ವೈಜ್ಞಾನಿಕ ವಿಧಾನಗಳಿಂದ ಶಾಸನ, ನಾಣ್ಯ, ಗ್ರಂಥಗಳು, ಪುರಾಣಗಳು, ಸಾಹಿತ್ಯ, ಇತ್ಯಾದಿ ಪುರಾವೆಗಳನ್ನು ಒಗ್ಗೂಡಿಸಿಕೊಂಡು, ಅದರಲ್ಲಿರುವ ಗೊಂದಲಗಳನ್ನು ಸರಿಪಡಿಸಿಕೊಂಡು ಚರಿತ್ರೆಯನ್ನು ಕಟ್ಟುವ ವಿಧಾನ. ಹಾಗಾಗಿ ನಮ್ಮ ಹಿಂದಿನ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತಾ, ಅದರ ತಳಹದಿಯ ಮೇಲೆ ಭವಿಷ್ಯವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಗೆ ಇಂಬು ಕೊಡುತ್ತದೆ. ಇದು ಇಂದಿನ ಅತ್ಯವಶ್ಯಕತೆ.

ಎಸ್.ಎನ್.ಸ್ವಾಮಿ (ಪುಸ್ತಕದ ಬ್ಲರ್ಬಿನಿಂದ)

ಮೌರ್ಯಾನಂತರದ ಭಾರತದಲ್ಲಿ ಸಮಾಜ ಮತ್ತು ಸಂಸ್ಕೃತಿ (ಕ್ರಿ.ಪೂ. 200–ಕ್ರಿ.ಶ. 300)

ಭಾರತದ ಜನ ಇತಿಹಾಸ ಮಾಲಿಕೆ ಸಂಪುಟ –7

ಮೂಲ : ಪ್ರೊ. ಭೈರಬಿ ಪ್ರಸಾದ ಸಾಹು, ಪ್ರೊ. ಕೇಶವನ್ ವೇಲುತಾಟ್ ಅನುವಾದ : ಡಾ. ಟಿ. ವೆಂಕಟೇಶಮೂರ್ತಿ

ಪ್ರಕಾಶಕರು: ಚಿಂತನ ಪುಸ್ತಕ ಬೆಲೆ: 90

ಭಾರತ ಪ್ರಾಚೀನ ಇತಿಹಾಸದಲ್ಲಿ ಮೌರ್ಯರ ನಂತರ ಸುಮಾರು ಐನೂರು ವರ್ಷಗಳ ಕಾಲಾವಧಿ ಪ್ರಾಚೀನ ಭಾರತದ ಇತಿಹಾಸದಲ್ಲಿ ಆಸಕ್ತಿ ಇರುವವರು ಬಹಳಷ್ಟು ಉತ್ಸುಕತೆಯಿಂದ ಓದುವ ಕಾಲಘಟ್ಟ ಇದು. ಮೌರ್ಯ ಆಳ್ವಿಕೆಯ ನಂತರದ ಅವಧಿ. ಒಂದೆಡೆಯಲ್ಲಿ ಇದು ಬೌದ್ಧಧರ್ಮ ಮತ್ತು ಜೈನಧರ್ಮಗಳ ಏಳಿಗೆಗೆ ಸಾಕ್ಷಿಯಾದರೆ, ಅದರ ಜತೆಗೆ ಸಮಾಜವನ್ನು ಕುರಿತ ಬ್ರಾಹ್ಮಣೀಯ ಪರಿಕಲ್ಪನೆ ಮತ್ತು ಪೌರಾಣಿಕ ಧರ್ಮ ಪ್ರಾರಂಭದ ವರ್ಷಗಳಲ್ಲಿ ಪಡೆದ ರೂಪಕ್ಕೂ ಸಾಕ್ಷಿಯಾಯಿತು. ಇದೇ ಅವಧಿಯಲ್ಲೇ ಪ್ರಾಚೀನ ಸಂಸ್ಕೃತದ ಉದಯ ಮತ್ತು ತಮಿಳು–ಬ್ರಾಹ್ಮಿ ಲಿಪಿಯ ಬಳಕೆಯೂ ಕಾಣ ಬಂತು. ಅರ್ಥಶಾಸ್ತ್ರ, ಮನುಸ್ಮೃತಿ, ರಾಮಾಯಣ, ಮಹಾಭಾರತ, ನಾಟ್ಯಶಾಸ್ತ್ರ, ಕಾಮಸೂತ್ರ ಮುಂತಾದ ಸಂಸ್ಕೃತದ ಪ್ರಮುಖ ರಚನೆಗಳು ರೂಪುಗೊಂಡದ್ದು/ ಅಂತಿಮ ರೂಪ ಪಡೆದದ್ದು ಈ ಕಾಲಘಟ್ಟದಲ್ಲೇ. ಹಾಗೆಯೇ ಸಾಂಚಿ ಸ್ತೂಪ ಮತ್ತು ಅಜಂತಾದ ಆರಂಭಿಕ ಗುಹಾ ವರ್ಣಚಿತ್ರಗಳು ಕೂಡ.

(ಪುಸ್ತಕದ ಬ್ಲರ್ಬಿನಿಂದ)

'ಭಾರತದ ಜನ ಇತಿಹಾಸ' ಪುಸ್ತಕಮಾಲೆಯ ಸಂಖ್ಯೆ 6 ಪುಸ್ತಕ ಈ ಐದು ಶತಮಾನಗಳ ರಾಜಕೀಯ ಮತ್ತು ಆರ್ಥಿಕ ಇತಿಹಾಸವನ್ನು ಚರ್ಚಿಸಿದ್ದರೆ, ಈ ಪುಸ್ತಕ ಅದೇ ಅವಧಿಯ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳನ್ನು ಚರ್ಚಿಸುತ್ತದೆ.

ಸಾಮಾನ್ಯವಾಗಿ ಪಠ್ಯಪುಸ್ತಕಗಳಲ್ಲಿ ಗಮನಕ್ಕೆ ತಗೊಳ್ಳದ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳನ್ನು ಈ ಪುಸ್ತಕದಲ್ಲಿ ಚರ್ಚಿಸಲಾಗಿದೆ.

JANASHAKTHI KANNADA VARA PATRIKE February 8-14, 2021 Price: Rs. 10/- Date of Publication: 05 February 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21







ಯಶಸ್ವಿ ರಾಜ್ಯವ್ಯಾಪಿ ರೈತ–ಕಾರ್ಮಿಕ ಜಾಥಾಗಳು

ರೈತ–ಕಾರ್ಮಿಕ ಜಾಥದ ಹರಪನಹಳ್ಳಿಯ ಬಹಿರಂಗ ಸಭೆಯಲ್ಲಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ್ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೊರೋನಾ ಸೋಂಕಿನ ಪರಿಸ್ಥಿತಿ ದುರ್ಬಳಕೆ ಮಾಡಿಕೊಂಡು ಜನಸಾಮಾನ್ಯರ ಮೇಲೆ ಆರ್ಥಿಕ ಹೊರೆ ಹೇರುತ್ತಿದ್ದಾರೆ ಎಂದು ದೂರಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಹಾವೇರಿ ನಗರದ ಪ್ರಚಾರ ಜಾತದಲ್ಲಿ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾರ್ಮಿಕ ಹಾಗೂ ರೈತ ವಿರೋಧಿ ನೀತಿಗಳನ್ನು ರೂಪಿಸುತ್ತಿದ್ದು ಜನತೆಯ ಹಕ್ಕುಗಳನ್ನು ಹತ್ತಿಕ್ಕುವ ಕಾರ್ಯದಲ್ಲಿ ನಿರತವಾಗಿವೆ.

ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳು ರೈತರನ್ನು ಮತ್ತಷ್ಟು ಸಂಕಷ್ಟಕ್ಕೆ ನೂಕುವಂತಾಗಿದೆ. ನೂತನ ಕೃಷಿ ಕಾಯ್ದೆಗಳು ಕಾರ್ಪೋರೇಟ್ ವಲಯಕ್ಕೆ ಅನುಕೂಲವಾಗುವ ರೀತಿಯಲ್ಲಿದ್ದು ಇವುಗಳನ್ನು ಜಾರಿಗೊಳಿಸಿದರೆ ದೇಶದ ಅನ್ನದಾತರ ಬದುಕು ಬೀದಿಗೆ ಬರಲಿದೆ. ಸರ್ಕಾರ ಕೂಡಲೇ ರೈತ ಹಾಗೂ ಕಾರ್ಮಿಕ ವಿರೋಧಿ ನೀತಿಗಳನ್ನು ಹಿಂಪಡೆಯುವ ಮೂಲಕ ದೇಶದ ಅನ್ನದಾತರ ಹಿತ ಕಾಪಾಡಬೇಕು ಎಂದು ಆಗ್ರಹಿಸಿದರು.












ಮೌರ್ಯರ ನಂತರದ ಭಾರತದ ಇತಿಹಾಸದ ಎರಡು ಮಹತ್ವದ ಪುಸ್ತಕಗಳು




ಪ್ರಸಿದ್ಧ ಇತಿಹಾಸಕಾರ ಪ್ರೊ. ಇರ್ಫಾನ್ ಹಬೀಬ್ ಅವರ ಸಂಪಾದಕತ್ವದ ಮಹತ್ವದ "ಭಾರತದ ಜನ ಇತಿಹಾಸ ಮಾಲಿಕೆ'ಯ 6 ಪುಸ್ತಕಗಳು (ಸಂಪುಟಗಳು 1 ರಿಂದ 5 ಮತ್ತು 28) ಈಗಾಗಲೇ ಪ್ರಕಟವಾಗಿವೆ. ಈ ಮಾಲಿಕೆಯ ಇನ್ನೂ ಮೂರು ಪುಸ್ತಕಗಳು ಸಿದ್ಧವಾಗಿವೆ. ಅವುಗಳಲ್ಲಿ ಎರಡು (ಸಂಪುಟ 6 ಮತ್ತು 7) ಮೌರ್ಯರ ಕಾಲದ ನಂತರದ ಭಾರತದ ಕುರಿತಾಗಿದ್ದು ಅವುಗಳ ವಿವರಗಳು ಇಲ್ಲಿವೆ:

ಮೌರ್ಯರ ನಂತರದ ಭಾರತ – ರಾಜಕೀಯ ಮತ್ತು ಆರ್ಥಿಕ ಇತಿಹಾಸ (ಕ್ರಿ.ಪೂ. 200 – ಕ್ರಿ.ಶ. 300)
ಭಾರತದ ಜನ ಇತಿಹಾಸ ಮಾಲಿಕೆ ಸಂಪುಟ–6
ಮೂಲ: ಪ್ರೊ, ಇರ್ಫಾನ್ ಹಬೀಬ್ ಅನುವಾದ:ಎಸ್.ಎನ್. ಸ್ವಾಮಿ
ಪ್ರಕಾಶಕರು: ಚಿಂತನ ಪುಸ್ತಕ ಬೆಲೆ: 140

'ಭಾರತದ ಜನ ಇತಿಹಾಸ'ದ ಈ ಸಂಪುಟವು ಬಹಳ ದೀರ್ಘ ಕಾಲಘಟ್ಟವನ್ನು (500 ವರ್ಷಗಳಿಗೂ ಹೆಚ್ಚು ಕಾಲಾವಧಿ) ತೆಗೆದುಕೊಂಡು ಮತ್ತು ಆ ಕಾಲಘಟ್ಟದ ರಾಜಕೀಯ ಮತ್ತು ಆರ್ಥಿಕ ಇತಿಹಾಸವನ್ನು ಮಾತ್ರ ಚರ್ಚಿಸುತ್ತಾ, ಕಳೆದೆರಡು ಸಂಪುಟಗಳಿಗಿಂತ ಭಿನ್ನ ಹಾದಿಯಲ್ಲಿ ಸಾಗುತ್ತದೆ. ಇದಕ್ಕೆ ಸ್ವಲ್ಪಮಟ್ಟಿಗೆ ಕಾಲಾನುಕ್ರಮದಲ್ಲಿರುವ (ಮುಖ್ಯವಾಗಿ ಪಠ್ಯಗಳ, ಹಾಗೆಯೇ ರಾಜಕೀಯ ಘಟನೆಗಳ ಕಾಲವನ್ನು ಗುರುತಿಸುವಲ್ಲಿರುವ) ಅನಿಶ್ಚಿತತೆಗಳು ಮತ್ತು ಕಾಲಘಟ್ಟವನ್ನು ವಿಭಾಗಿಸುವಂತಹ ಸ್ಪಷ್ಟ ಗೆರೆಗಳು ಇಲ್ಲದಿರುವ ಸಂಗತಿ ಕಾರಣವಾಗಿದೆ. ಆದ್ದರಿಂದ ಈ ಐದೂ ಶತಮಾನಗಳ ಇತಿಹಾಸದ ವಿವಿಧ ಅಂಶಗಳನ್ನು ಒಳಗೊಳ್ಳಲು ಎರಡು ಪ್ರತ್ಯೇಕ ಗ್ರಂಥಗಳನ್ನು (ಈಗಿನ ಆರನೇ ಸಂಪುಟ ಮತ್ತು ಮುಂದಿನ ಏಳನೇ ಸಂಪುಟ) ಯೋಜಿಸುವ ಅಗತ್ಯ ಬಂದಿತು.

... ಇದರಲ್ಲಿ ನಾಣ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರದ ಮೂಲಭೂತ ಪರಿಕಲ್ಪನೆಗಳು ... ಹಾಗೂ ಪುರಾಣಗಳು ಮತ್ತು ಶಂಗಂ ಪಠ್ಯಗಳಲ್ಲಿರುವ

ಪುಟ 15 ಕ್ಕೆ



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**